ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

# ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ

ಆಂತರಿಕ ಪ್ರಸಾರಕ್ಕಾಗಿ

ಶೈಕ್ಷಣಿಕ ಪತ್ರಿಕೆ

2020–21ನೇ ಸಾಲಿನ ದ್ವಿತೀಯ ಸಂಚಿಕೆ

E-mail : diet.shimoga@gmail.com, Ph : 08182 - 270597, Fax : 08182 - 228127

ಶಿಕ್ಷಣದ ಹಕ್ಕು

ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ

# ಸಂಹಿತ





ಸಮಗ್ರ ಶಿಕ್ಷಣ ಅಭಿಯಾನ

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ

ಪದವಿ ಪೂರ್ವ ಕಾಲೇಜು ಉಪನ್ಯಾಸಕರ ಪ್ರಾವೇಶಿಕ ತರಬೇತಿ 2020-21



ಇಂಗ್ಲೀಷ್ ನಲಿ-ಕಲಿ ವೀಡಿಯೋ ಕ್ಲಿಪ್ಪಿಂಗ್ ತರಬೇತಿ



ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆ

## ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ

# ಸಂಹಿತ

ಸಮಗ್ರ ಶಿಕ್ಷಣ ಅಭಿಯಾನ

ಶಿಕ್ಷಣದ ಹಕ್ಕು
ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ

E-mail : diet.shimoga@gmail.com, Ph : 08182-270597, Fax : 08182-228127

## ಸಂಪಾದಕ ಮಂಡಳಿ

ಗೌರವ ಸಂಪಾದಕರು :

**ಶ್ರೀಮತಿ ವೈಶಾಲಿ ಎಂ.ಎಲ್.**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಶಿವಮೊಗ್ಗ

ಪ್ರಧಾನ ಸಂಪಾದಕರು :

**ಶ್ರೀ ಬಿ.ಆರ್. ಬಸವರಾಜಪ್ಪ**

ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ
ಪ್ರಾಂಶುಪಾಲರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ

**ಶ್ರೀ ರಮೇಶ್ ಎನ್.ಎಂ.**

ಉಪನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ, ಶಿವಮೊಗ್ಗ

ಸಹ ಸಂಪಾದಕರು :

**ಶ್ರೀ ಶೇರ್ ಅಲಿ ಹೆಚ್.ಆರ್.**

ಹಿರಿಯ ಉಪನ್ಯಾಸಕರು, IFIC ವಿಭಾಗದ ಮುಖ್ಯಸ್ಥರು,
ಶಿವಮೊಗ್ಗ

ಸದಸ್ಯರು :

**ಶ್ರೀ ವೀರಭದ್ರಪ್ಪ**

ಉಪಪ್ರಾಂಶುಪಾಲರು ಮತ್ತು PSTE ವಿಭಾಗದ ಮುಖ್ಯಸ್ಥರು
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ

**ಶ್ರೀ ಶಂಕರಪ್ಪ ಟಿ.**

ಡಿ.ವೈ.ಪಿ.ಸಿ., ಸಮಗ್ರ ಶಿಕ್ಷಣ ಕರ್ನಾಟಕ, ಶಿವಮೊಗ್ಗ

**ಶ್ರೀ ಎಂ.ಎಸ್. ಫಣೀಶ**

ಹಿರಿಯ ಉಪನ್ಯಾಸಕರು, DRU ವಿಭಾಗದ ಮುಖ್ಯಸ್ಥರು,
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ

**ಡಾ॥ ಹರಿಪ್ರಸಾದ್ ಜಿ.ವಿ.**

ಹಿರಿಯ ಉಪನ್ಯಾಸಕರು, P & M ವಿಭಾಗದ ಮುಖ್ಯಸ್ಥರು,
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ

**ಶ್ರೀಮತಿ ಕೆ. ವೀಣಾ**

ಉಪನ್ಯಾಸಕರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ

---

ಮುಖಪುಟ : **ತಾಳಗುಂದ ಶಾಸನ, ಶಿಕಾರಿಪುರ ತಾ॥**
**ವಿಶೇಷ ಶಾಲೆ–ಸೊಪ್ಪುಗುಡ್ಡೆ, ತೀರ್ಥಹಳ್ಳಿ**

ತಾಂತ್ರಿಕ ಕಾರ್ಯ : **ಶ್ರೀ ಆದರ್ಶ ಎಂ., ಶಿವಮೊಗ್ಗ**


## ಪ್ರೀತಿಯ ಶಿಕ್ಷಕರೇ...



ಶಿಕ್ಷಕ ಶಿಕ್ಷಣ ಯೋಜನೆಯಡಿ 2020–21ನೇ ಸಾಲಿನ ದ್ವಿತೀಯ ಸಂಹಿತ ಸಂಚಿಕೆ ಅದ್ಭುತ ಲೇಖನಗಳೊಂದಿಗೆ ಹೊರಹೊಮ್ಮುತ್ತಿರುವುದು ಸಂತಸದ ವಿಷಯ. ಶಿಕ್ಷಣದ ಕಾಲಘಟ್ಟದಲ್ಲಿ ಡಯಟ್ ವತಿಯಿಂದ ಮುದ್ರಣಗೊಂಡಿರುವ ಈ ಸಂಚಿಕೆಯಲ್ಲಿ ಜಿಲ್ಲೆಯೊಳಗಿನ ಶತಮಾನೋತ್ಸವ / ಸುವರ್ಣ ಮಹೋತ್ಸವ ಕಂಡಿರುವ ಶಾಲೆಗಳ ಮಾಹಿತಿಯನ್ನು ಸುಂದರವಾದ ಲೇಖನಗಳಲ್ಲಿ ಬಿಂಬಿಸಲಾಗಿದೆ. ಎಸ್.ಡಿ.ಎಂ.ಸಿ. ಹಳೆಯ ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು ಮತ್ತು ಸ್ಥಳೀಯರು ಸೇರಿದರೆ ಒಂದು ಶಾಲೆಯನ್ನು ಅಭಿವೃದ್ಧಿಯೆಡೆಗೆ ಕೊಂಡೊಯ್ಯಬಹುದು ಎಂಬುದನ್ನು ತೋರಿಸಿಕೊಟ್ಟಿರುತ್ತಾರೆ. ಸುವರ್ಣ ಮಹೋತ್ಸವ ಆಚರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಚದರವಳ್ಳಿ ಬಂಧುಗಳು, ಶಾಲೆಗಳು ಆರಂಭವಾಗಿ ಶತಮಾನ ಕಂಡಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುದುವಾಲ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆನವಟ್ಟಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮುಂಡುವಳ್ಳಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಉಡುಗಣಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕೋಡೂರು ಸಾವಿರಾರು ವಿದ್ಯಾರ್ಥಿಗಳನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಿರುತ್ತಾರೆ. ಈ ನಡುವೆ ಪೋಷಕರು, ಎಸ್.ಡಿ.ಎಂ.ಸಿ. ಮತ್ತು ಶಿಕ್ಷಕರ ಶ್ರಮ ಅಪಾರ.

ಶಿವಮೊಗ್ಗ ಜಿಲ್ಲೆ ಕುತೂಹಲಕಾರಿ ಐತಿಹ್ಯಗಳನ್ನು ಹೊಂದಿದೆ. ಪ್ರಮುಖವಾದ ಆರು ಐತಿಹಾಸಿಕ ಸ್ಥಳಗಳ ಪರಿಚಯವನ್ನು ಈ ಸಂಚಿಕೆಯಲ್ಲಿ ಮಾಡಲಾಗಿದೆ. ಭದ್ರಾವತಿ ನಗರದ ಮೂಲ ಹೊಯ್ಸಳ ಕಾಲದ ತ್ರಿಕೂಟಾಚಲ ವಾಸ್ತುಶಿಲ್ಪ ಹೊಂದಿರುವ ಶ್ರೀ ಲಕ್ಷ್ಮಿನರಸಿಂಹ ಸ್ವಾಮಿ ದೇವಸ್ಥಾನ ಹಿನ್ನೆಲೆ, ಅನೇಕ ವೈಶಿಷ್ಟ್ಯಗಳನ್ನೊಳಗೊಂಡಿರುವ ಸಾಗರ ತಾಲ್ಲೂಕಿನ ಮಹತ್ವದ ಸ್ಥಳಗಳು, ಪ್ರಾಚೀನ ಶಾಸನ ಹೊಂದಿರುವ ಶಿಕಾರಿಪುರ ತಾಲ್ಲೂಕಿನ ತಾಳಗುಂದ, ಆರಗ ಗ್ರಾಮದ ಮಹತ್ವ, ತೀರ್ಥಹಳ್ಳಿ ತಾಲ್ಲೂಕಿನ ಮೃಗವಧೆಯ ವೈಶಿಷ್ಟ್ಯತೆಯನ್ನು ಚಂದ್ರಗುತ್ತಿಯ ಐತಿಹ್ಯವನ್ನು ಸಂಕ್ಷಿಪ್ತವಾಗಿ ದಾಖಲಿಸಿದೆ.

ಧಾರ್ಮಿಕ ಸಹಿಷ್ಣುತೆ ಕೇಂದ್ರಗಳಾದ ಹಣಗೆರೆ, ಶಿವಮೊಗ್ಗ ನಗರದಲ್ಲಿರುವ ಕ್ರೈಸ್ತ ದೇವಾಲಯ, ಪ್ರಸ್ತುತ ಸಂಚಿಕೆಯಲ್ಲಿ ಗಮನ ಸೆಳೆಯಲಾಗಿದೆ. ಜಿಲ್ಲೆಯಲ್ಲಿ ಶೈಕ್ಷಣಿಕವಾಗಿ ನಡೆಯುತ್ತಿರುವ ಉತ್ತಮ ಕಾರ್ಯಕ್ರಮಗಳ ಕುರಿತು ಲೇಖನಗಳನ್ನು ನಿಮ್ಮ ಮುಂದಿಡುತ್ತಾ, ಜ್ಞಾನಾಭಿವೃದ್ಧಿಗಾಗಿ ಶ್ರಮಿಸೋಣ.

ಎಲ್ಲರಿಗೂ ಧನ್ಯವಾದಗಳು.


**ಬಿ.ಆರ್.ಬಸವರಾಜಪ್ಪ**

ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಪ್ರಾಂಶುಪಾಲರು
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ

# ಪರಿವಿಡಿ


| | | |
|---|---|---|
| 1. | **ಜಿಲ್ಲೆಯಲ್ಲೊಂದು ವಿಶೇಷ ಶಾಲೆ, ಸೊಪ್ಪುಗುಡ್ಡೆ** | 1–3 |
| 2. | **ಸ್ಫೂರ್ತಿ ಸಂಶೋಧನೆಗಾಗಿ ವಿಜ್ಞಾನ ಅನ್ವೇಷಣೆಯಲ್ಲಿ ಆವಿಷ್ಕಾರ (IDEA)** | 4–6 |
| 3. | **ಶತಮಾನೋತ್ಸವ / ಸುವರ್ಣ ಮಹೋತ್ಸವದಲ್ಲಿ ಮಿಂದ ಶಾಲೆಗಳು** | 7–16 |
| | ಅ. ಕಾನನದ ನಡುವಿನ ಸುವರ್ಣ ಶಾಲೆ, ಚದರವಳ್ಳಿ | |
| | ಆ. ಶತಮಾನ ಕಂಡ ಮುದುವಾಲ ಶಾಲೆ | |
| | ಇ. ನೂರರ ಸಂಭ್ರಮದ ಹಾದಿಯಲ್ಲಿ ನಮ್ಮ ಶಾಲೆ, ಆನವಟ್ಟಿ | |
| | ಈ. ಹತ್ತು ದಶಕ ಪೂರೈಸಿದ ಮುಂಡುವಳ್ಳಿ ಶಾಲೆ | |
| | ಉ. ನೂರು ಪೂರೈಸಿದ ಸುಮೇರು ಕೋಡೂರು ಶಾಲೆ | |
| | ಊ. ಶತಮಾನವನ್ನು ಕಂಡ ಪಾರಂಪರಿಕ ಶಾಲೆ, ಉಡುಗಣಿ | |
| 4. | **ಮಲೆನಾಡಿನ ಹಸೆ ಚಿತ್ತಾರ** | 17–19 |
| 5. | **ಜಿಲ್ಲೆಯ ಐತಿಹಾಸಿಕ ಸ್ಥಳಗಳ ಪರಿಚಯ** | 20–36 |
| | ಅ. ವೆಂಕಿಪುರ ಕ್ಷೇತ್ರಪಾಲಕ ಶ್ರೀ ಲಕ್ಷ್ಮೀನರಸಿಂಹಸ್ವಾಮಿ | |
| | ಆ. ಸಾಂಸ್ಕೃತಿಕ ಸಿರಿವಂತಿಕೆಯ ಆಗರ ಸಾಗರ | |
| | ಇ. ಕನ್ನಡದ ಮೊದಲ ಪ್ರಾಚೀನ ವಿಶ್ವವಿದ್ಯಾಲಯ, ತಾಳಗುಂದ | |
| | ಈ. ಪುರಂದರರ ಹುಟ್ಟೂರು ಮಲೆಸೀಮೆ – ಆರಗವೇ ??.. | |
| | ಉ. ಮೃಗವಧೆಯ ಐತಿಹಾಸಿಕ ಹಿನ್ನೆಲೆ | |
| | ಊ. ಚಂದ್ರಗುತ್ತಿ – ಐತಿಹ್ಯ ಮತ್ತು ಇತಿಹಾಸ | |
| 6. | **ಉರ್ದು ನಲಿ–ಕಲಿ ತರಗತಿಗಳ ಕಲ್ಪನೆ** | 37 |
| 7. | **ಧಾರ್ಮಿಕ ಸಹಿಷ್ಣುತ ಕೇಂದ್ರಗಳು** | 38–41 |
| | ಅ. ಧಾರ್ಮಿಕ ಭಾವೈಕ್ಯದ ಸಂಗಮ – ಹಣಗೆರೆ | |
| | ಆ. ಪವಿತ್ರ ಹೃದಯ ಪ್ರಧಾನಾಲಯ, ಶಿವಮೊಗ್ಗ | |
| 8. | **ಕೊರೋನ ಮತ್ತು ವಾಷ್ ಕಾರ್ಯಕ್ರಮ** | 42–44 |
| 9. | **ಕ್ಲಸ್ಟರ್ ಸಾಧನೆ – ಸಿರಿಗೆರೆ ಸಿಂಗರಿಸಿದ ಸುಂದರ ಅನುಭವ** | 45–46 |
| 10. | **ನಾಲೂರಿಗೆ ನೂಲಾದ ಜಯಗಾಥೆ** | 47–49 |

# ಜಿಲ್ಲೆಯಲ್ಲೊಂದು ವಿಶೇಷ ಶಾಲೆ–ಸೊಪ್ಪುಗುಡ್ಡೆ

ತೀರ್ಥಹಳ್ಳಿಯಲ್ಲಿರುವ ವಿಶೇಷ ಶಾಲೆಗಳಲ್ಲಿ ಅತ್ಯುತ್ತಮ ಶಾಲೆಯೆಂದರೆ, ಸ.ಕಿ.ಪ್ರಾ.ಶಾ. ಸೊಪ್ಪುಗುಡ್ಡೆ

ಈ ಶಾಲೆಯ ಭೌತಿಕ ವ್ಯವಸ್ಥೆಗಳಾದ ಕಟ್ಟಡಗಳು, ತರಗತಿ ಕೋಣೆಗಳು, ಶೌಚಾಲಯದ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ಸ್ನಾನಗೃಹ, ಬಿಸಿಯೂಟ, ಉತ್ತಮವಾಗಿದ್ದು ಮಕ್ಕಳ ಕಲಿಕೆಗೆ ಪೂರಕವಾಗಿದೆ.

**ಶಾಲೆಯ ವಿಶೇಷತೆ**

ಈ ಶಾಲೆಯು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಾಗಿದ್ದು, ಪ್ರಸ್ತುತ ವರ್ಷದಲ್ಲಿ 48 ಮಕ್ಕಳು ದಾಖಲಾಗಿರುತ್ತಾರೆ. ಅದರಲ್ಲಿ 44 ಮಕ್ಕಳು ವಿಶೇಷ ಅಗತ್ಯತೆವುಳ್ಳ ಮಕ್ಕಳಾಗಿದ್ದು, 4 ಜನ ಮಕ್ಕಳು ಮಾತ್ರ ಸಾಮಾನ್ಯ ಮಕ್ಕಳಾಗಿರುತ್ತಾರೆ. ವಿಶೇಷ ಅಗತ್ಯತೆವುಳ್ಳ ಮಕ್ಕಳ ಪೋಷಕರು ಬೆಳಿಗ್ಗೆಯಿಂದ ಸಂಜೆಯವರೆಗೆ ಶಾಲೆಯಲ್ಲೇ ಇದ್ದು ಮಕ್ಕಳ ಕಲಿಕಾ ಪ್ರಕ್ರಿಯೆಯಲ್ಲಿ ಶಿಕ್ಷಕರಿಗೆ ಸಹಾಯ ಮಾಡುತ್ತಾರೆ ಹಾಗೂ ಮಕ್ಕಳ ಕಲಿಕೆಗೆ ಆಕರ್ಷಕವಾದ ಕಲಿಕೋಪಕರಣಗಳು ಶಾಲೆಯಲ್ಲಿ ಸಾಕಷ್ಟಿವೆ.

**ರ್‍ಯಾಂಪ್ಸ್ ವ್ಯವಸ್ಥೆ**



ಮಕ್ಕಳು ಸರಾಗವಾಗಿ ಓಡಾಡಲು ರ್‍ಯಾಂಪ್ಸ್‌ಗಳ ವ್ಯವಸ್ಥೆಯಿದೆ. ಇದು ಮಕ್ಕಳನ್ನು ವ್ಹೀಲ್‌ಛೇರ್‌ನಲ್ಲಿ ಕರೆದುಕೊಂಡು ಬರಲು ಮತ್ತು ಹೋಗಲು ಅನುಕೂಲಕರವಾಗಿದೆ ಹಾಗೂ ನಡೆದಾಡಲು ಕಷ್ಟಪಡುವ ಮಕ್ಕಳಿಗೆ ಇದನ್ನು ಹಿಡಿದುಕೊಂಡು ಬರಲು ಅನುಕೂಲಕರವಾಗಿದೆ.

ಶೌಚಾಲಯದ ವ್ಯವಸ್ಥೆಯಲ್ಲಿ Indian ಹಾಗೂ Western ಕಮೋಡ್‌ನ ವ್ಯವಸ್ಥೆಯಿದೆ ಹಾಗೂ ಸ್ನಾನಗೃಹದ ವ್ಯವಸ್ಥೆಯಿದೆ.

ಶಾಲೆಯ ವರಾಂಡದ ಒಳಗೆ ಜಾರುಬಂಡೆ, ಸೀಸಾ, ಜೋಕಾಲಿ, ತಿರುಗುವ ಕುರ್ಚಿಯಂತ ಸಲಕರಣೆಗಳು ಮಕ್ಕಳ ಮನರಂಜನೆಗೆ ಸಂತಸದ ಕಲಿಕೆಗೆ ಪೂರಕವಾಗಿವೆ. ಶಾಲೆಯಲ್ಲಿ ಚಿಕ್ಕ ಕೈತೋಟವಿದ್ದು ಮನಸ್ಸಿಗೆ ಆಹ್ಲಾದವನ್ನು ನೀಡುವಂತಿದೆ.

ಈ ಶಾಲೆಯು ಉತ್ತಮ ಪೀಠೋಪಕರಣವನ್ನು ಹೊಂದಿದ್ದು, ಗ್ರಂಥಾಲಯದ ವ್ಯವಸ್ಥೆಯನ್ನು ಸಹ ಹೊಂದಿದೆ. ಇದಲ್ಲದೆ ಚಿತ್ರಕಲೆ, ಸಂಗೀತ, ಊಟ ಮಾಡಿಸುವುದು, ನೀರು ಕುಡಿಸುವುದು, ಸ್ನಾನ ಮಾಡುವ ಕಲ್ಪನೆ, ಓದು ಬರಹ ಕಲ್ಪನೆ, ತನ್ನ ಕೆಲಸ ತಾನೆ ಮಾಡುವಂತೆ ಅರಿವು ಮಾಡಿಸುವುದು ಇಲ್ಲಿ ಸದಾ ನಡೆಯತ್ತಿರುತ್ತದೆ.

**ದಾನಿಗಳು**

ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ವಿವಿಧ ರೀತಿಯ ಸಂಘ ಸಂಸ್ಥೆಗಳು, ಪಟ್ಟಣ ಪಂಚಾಯತ್ ಹಾಗೂ ವೈಯುಕ್ತಿಕ ದಾನಿಗಳಿಂದ ಕಲಿಕಾ ಸಲಕರಣೆಗಳ ಕೊಡುಗೆ ಅಪಾರ.

**ಸೋಲಾರ್**

ಮಕ್ಕಳಿಗೆ ಬಿಸಿ ನೀರಿನ ವ್ಯವಸ್ಥೆಗೋಸ್ಕರ ಸೋಲಾರ್ ವ್ಯವಸ್ಥೆಯನ್ನು ಕೂಡ ಮಾಡಲಾಗಿದೆ. ಒಟ್ಟಿನಲ್ಲಿ ಈ ಶಾಲೆಯು ಸಾಮಾನ್ಯ ಮತ್ತು ವಿಶೇಷ ಅಗತ್ಯತೆವುಳ್ಳ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾದ ಭೌತಿಕ, ಶೈಕ್ಷಣಿಕ, ದೈಹಿಕ, ನಿತ್ಯ ಜೀವನದ ಕೌಶಲ್ಯಗಳನ್ನು ಕಲಿಸಲು, ಕಲಿಯುವ ಆಕರ್ಷಕವಾದ ಸಾಧನ ಸಲಕರಣೆಗಳನ್ನು ಒಳಗೊಂಡಿದೆ.

**ಶಿಕ್ಷಕ ವೃಂದ :–** ಈ ಶಾಲೆಯಲ್ಲಿ ಮೂರು ಜನ ಶಿಕ್ಷಕರು, ಶ್ರೀಮತಿ ಆಶಾ ಎಸ್, ಶ್ರೀ ಕುಮಾರ ಹೆಚ್.ಸಿ, ಶ್ರೀಮತಿ ಗಾಯಿತ್ರಿ ಟಿ.ಜಿ. ಇದ್ದು, ಇಬ್ಬರು ಸ್ವಯಂ ಸೇವಕರಾದ ಶ್ರೀಮತಿ ಅಮೃತ ಜಿ, ಶ್ರೀಮತಿ ಮೀನಮ್ಮ ಹೆಚ್.ಜಿ. ಇದ್ದಾರೆ.

ಈ ಮೇಲ್ಕಂಡ ಶಿಕ್ಷಕ ವೃಂದದವರು ಸಾಮಾನ್ಯ ಮಕ್ಕಳ ಜೊತೆ ವಿಶೇಷ ಅಗತ್ಯತೆವುಳ್ಳ ಮಕ್ಕಳ ಕಲಿಕಾ ಪ್ರಕ್ರಿಯೆಯಲ್ಲಿ ಅತ್ಯಂತ ಆಸಕ್ತಿದಾಯಕವಾಗಿ ಕಾರ್ಯ ನಿರ್ವಹಿಸುತ್ತಾ ವಿಶೇಷ ಅಗತ್ಯವಿರುವ ಮಕ್ಕಳನ್ನು ಮುಖ್ಯವಾಹಿನಿಗೆ ತರುವಲ್ಲಿ ಯಶಸ್ವಿಯಾಗಿದ್ದಾರೆ.

**ಶಾಲೆಯ ತರಗತಿವಾರು ವಿವರ :–**

| | | |
|---|---|---|
| ಪೋರ್ಟೇಜ್ ಪದ್ಧತಿಯಲ್ಲಿ | – | 05 |
| ಎಲ್. ಕೆ. ಜಿ ಮಕ್ಕಳು | – | 03 |
| ಯು. ಕೆ. ಜಿ. ಮಕ್ಕಳು | – | 06 |
| 1 ನೇ ತರಗತಿಯಿಂದ 5ನೇ ತರಗತಿಯವರೆಗೆ | – | 48 |
| ಬೇರೆ ಶಾಲೆಯಿಂದ ಬರುವ ಮಕ್ಕಳು | – | 05 |
| ಒಟ್ಟು | – | 67 |

**ವಿವಿಧ ರೀತಿಯ ವಿಕಲ ಚೇತನ ಮಕ್ಕಳ ವಿವರ :**

| | | | **ಹೆಣ್ಣು** | **ಗಂಡು** | **ಒಟ್ಟು** |
|---|---|---|---|---|---|
| 1. | ಬುದ್ಧಿ ಮಾಂದ್ಯತೆ [MR] | :– | 11 | 27 | 38 |
| 2. | ದೈಹಿಕ ಅಂಗವಿಕಲತೆ [OPH] | :– | 1 | 3 | 4 |
| 3. | ಆಟಿಸಂ | :– | 1 | 1 | 2 |
| 4. | ADHD | :– | 1 | 2 | 3 |
| 5. | ಮೆದುಳುವಾತ [CP] | :– | 1 | 6 | 7 |
| 6. | ಕಲಿಕಾ ನ್ಯೂನ್ಯತೆ [L.D] | :– | 2 | 2 | 4 |
| 7. | ಮಾತಿನ ವಿಕಲತೆ | :– | 0 | 4 | 4 |
| 8. | ಶ್ರವಣ ದೋಷ | :– | 1 | 0 | 1 |
| | | **ಒಟ್ಟು** | **18** | **45** | **63** |

**ತರಬೇತಿ :–** ಈ ಮೇಲ್ಕಂಡ ಮಕ್ಕಳಿಗೆ ಅವರವರ ನ್ಯೂನ್ಯತೆಗೆ ಸಂಬಂಧಿಸಿದಂತೆ ಸೂಕ್ತ ತರಬೇತಿ ನೀಡುವುದು. ಯಾರಿಗೆ ನಡೆಯುವ ತೊಂದರೆ, ಬಟ್ಟೆ ಹಾಕಿಕೊಳ್ಳುವ ತೊಂದರೆ, ಏಕಾಗ್ರತೆ ತೊಂದರೆ, ಊಟ ಮಾಡುವ ತೊಂದರೆ,



ಉಗ್ಗುವುದು, ಮಾತನಾಡುವ ತೊಂದರೆ, ನಡವಳಿಕೆ ತೊಂದರೆ, ವಿಪರೀತ ಚಟುವಟಿಕೆಗಳು, ಇರುವಂತಹ ಮಕ್ಕಳು ಇಂತಹವರಿಗೆ ದೈಹಿಕ ವ್ಯಾಯಾಮ, ಲಘು ವ್ಯಾಯಾಮ, ಜ್ಞಾನಾತ್ಮಕ ಚಟುವಟಿಕೆಗಳು, ಆಯಾ ನ್ಯೂನತೆಗೆ ಗುಂಪು ಚಟುವಟಿಕೆಗಳು, ವೈಯಕ್ತಿಕ ತರಬೇತಿ ನೀಡುವುದರೊಂದಿಗೆ ಮಗು ಸ್ವತಂತ್ರವಾಗಿ ಸಮಾಜದಲ್ಲಿ ಬದುಕಲು ಬೇಕಾಗುವ ಕೌಶಲ್ಯಾಭಿವೃದ್ಧಿ ಮಾಡುವುದೇ ಈ ಶಾಲೆಯ ಮುಖ್ಯಗುರಿ.

**ಪೋಷಕರಿಗೆ ತರಬೇತಿ**

ಅತಿ ಮುಖ್ಯವಾಗಿ ವಿಶೇಷ ಅಗತ್ಯತೆವುಳ್ಳ ಮಕ್ಕಳ ಪೋಷಕರಿಗೆ ಮಕ್ಕಳ ಬೆಳವಣಿಗೆಗೆ ಅಗತ್ಯವಾದ ಸಲಹೆ – ಸೂಚನೆಗಳನ್ನು, ವಿಶೇಷ ತರಬೇತಿಯನ್ನು ನೀಡಲಾಗುವುದು. ಇಲ್ಲಿ ಮಕ್ಕಳ ಜೊತೆ ಪೋಷಕರನ್ನು ಪ್ರೋತ್ಸಾಹಿಸಿ ಮಗುವಿನ ಅಭಿವೃದ್ಧಿ ಬಗ್ಗೆ ಸಹಕಾರ ನೀಡಲು ತರಬೇತಿ ನೀಡುವುದು.

ಒಟ್ಟಿನಲ್ಲಿ ಈ ಶಾಲೆಯಲ್ಲಿ ಮೇಲ್ಕಂಡ ಎಲ್ಲಾ ರೀತಿಯ ತರಬೇತಿ ನೀಡಿದುದರ ಫಲವಾಗಿ ಮಕ್ಕಳಲ್ಲಿ ದಿನದಿಂದ ದಿನಕ್ಕೆ ಬದಲಾವಣೆಗೆ ಸಹಕಾರಿಯಾಗಿದೆ. ಈ ಪರಿಶ್ರಮಕ್ಕೆ ಶಿಕ್ಷಕರಾದ **ಹೆಚ್.ಸಿ. ಕುಮಾರ್‌ರವರಿಗೆ ಸರ್ಕಾರದಿಂದ ಜಿಲ್ಲಾ, ರಾಜ್ಯ, ರಾಷ್ಟ್ರಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಲಭಿಸಿದೆ.** ಈ ಶಾಲೆಯ ಭೌತಿಕ, ಶೈಕ್ಷಣಿಕ ಮತ್ತು ಮಕ್ಕಳ ಚಟುವಟಿಕೆಯನ್ನು ಯುನೆಸ್ಕೋ ವರದಿಯಲ್ಲಿ 2019 – 20ನೇ ಸಾಲಿನಲ್ಲಿ ಪ್ರಕಟಿಸಲಾಗಿದೆ.

ವೈಕಲ್ಯಗಳು ಶಾಪ ಎಂಬ ವ್ಯಾಪಕವಾದ ಮನೋಧೋರಣೆಯನ್ನು ತೊಲಗಿಸಲು ತಮ್ಮ ಜೀವನವನ್ನೇ ಮುಡಿಪಾಗಿಟ್ಟಿರುವ ಶ್ರೀ ಕುಮಾರ್‌ರವರ ನೇತೃತ್ವದಲ್ಲಿ ಸೊಪ್ಪುಗುಡ್ಡೆ ಶಾಲೆಯು ವಿಶೇಷ ಅಗತ್ಯವುಳ್ಳ ಮಕ್ಕಳ ಬಾಳಲ್ಲಿ ಆಶಾಕಿರಣವೇ ಆಗಿದೆ. ಮಾತೇ ಬಾರದ ಮಗುವೊಂದು ಶಿಕ್ಷಕರ ಅವಿರತ ಪ್ರಯತ್ನದಿಂದ ಮೊದಲಿಗೆ ತೊದಲಾಗಿ **'ಅಮ್ಮ'** ಎಂದು ಕರೆವಾಗ ಮಹದಾನಂದವಾಗುತ್ತದೆ ಎನ್ನುವಾಗ ಅವರ ಕಣ್ಣಂಚಿನ ಬೆಳಕು ಅವರ ಪರಿಶ್ರಮದ ಯಶೋಗಾಥೆಯನ್ನು ಮೌನವಾಗಿ ಹೇಳುತ್ತದೆ.

**ಮುಖ್ಯಶಿಕ್ಷಕರು**
ಶಿಕ್ಷಕ ವೃಂದ, ಸ.ಕಿ.ಪ್ರಾ.ಶಾಲೆ
ಸೊಪ್ಪುಗುಡ್ಡೆ, ತೀರ್ಥಹಳ್ಳಿ

# ಸ್ಫೂರ್ತಿ ಸಂಶೋಧನೆಗಾಗಿ ವಿಜ್ಞಾನ ಅನ್ವೇಷಣೆಯಲ್ಲಿ ಆವಿಷ್ಕಾರ (IDEA)

ರಾಷ್ಟ್ರೀಯ ಆಕಾಂಕ್ಷೆ ಮತ್ತು ಜ್ಞಾನ ಹೆಚ್ಚಿಸುವ ಲಕ್ಷಾಂತರ ಬಹುಮುಖಿ ಪ್ರತಿಭೆಗಳು (ಮಾನಕ್)

**ಇನ್ಸ್ಪೈರ್ ಅವಾರ್ಡ್ಸ್ – ಮಾನಕ್**

**ವಿಜ್ಞಾನ ಮತ್ತು ಸಮಾಜದ ಮೇಲೆ ಆಧಾರಿತ ಒಂದು ದಶಲಕ್ಷ ಮೂಲ ವಿಚಾರ/ ನಾವೀನ್ಯತೆಗಳ ಗುರಿ.**

ವಿಜ್ಞಾನ ಮತ್ತು ತಂತ್ರಜ್ಞಾನದ ಮೂಲಕ ಸಾಮಾಜಿಕ ಅವಶ್ಯಕತೆಗಳನ್ನು ಪೂರೈಸಲು ಶಾಲಾ ಮಕ್ಕಳಲ್ಲಿ ಸೃಜನಶೀಲತೆಯ ಸಂಸ್ಕೃತಿ ಮತ್ತು ನಾವಿನ್ಯತಾ ಚಿಂತನೆಯನ್ನು ರೂಪಿಸುವುದು.

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ (DST), ಭಾರತ ಸರ್ಕಾರವು 2009–10 ರಿಂದ ಇನ್ಸ್ಪೈರ್ ಅವಾರ್ಡ್ಸ್– ಮಾನಕ್ ಯೋಜನೆಯನ್ನು ಜಾರಿಗೆ ತಂದಿದೆ. ಪ್ರಸ್ತುತ ಇನ್ಸ್ಪೈರ್–ಮಾನಕ್ ರಾಷ್ಟ್ರೀಯ ನವಪ್ರದರ್ಶನ ಸಂಸ್ಥೆ (NIF) ಯ ಸಹಯೋಗದೊಂದಿಗೆ ಹಾಗೂ ಸ್ಟಾರ್ಟ್–ಅಪ್ ಇಂಡಿಯಾ ಉಪಕ್ರಮದ ಅನುಗುಣಕ್ಕೆ ಸೂಕ್ತವಾಗಿ ಮಾರ್ಪಡಿಸಲಾಗಿದೆ.

**ನಾವೀನ್ಯತೆ ಎಂದರೇನು?**

ನಾವೀನ್ಯತೆಯನ್ನು ಹೊಸ ವಿಚಾರ, ಸಾಧನ ಅಥವಾ ವಿಧಾನ ಎಂದು ಸರಳವಾಗಿ ವಿವರಿಸಬಹುದು, ಇದು ಸೂಕ್ತ ಮಟ್ಟಕ್ಕೆ ಉಪಯುಕ್ತ ಮತ್ತು ಆರೋಹಣೀಯವಾಗಿರುತ್ತದೆ.

ಅಸ್ತಿತ್ವದಲ್ಲಿರುವ ಅದೇ ರೀತಿಯ ಉತ್ಪನ್ನಗಳ/ಸಾಧನಗಳ/ವಿಧಾನಗಳಿಂದ ನಿರ್ದಿಷ್ಟವಾದ ವಿಶಿಷ್ಟತೆಯನ್ನು ಹೊಂದಿರಬೇಕು ಮತ್ತು ಅದು ಉತ್ಪಾದನೆ ಅಥವಾ ದಕ್ಷತೆಯನ್ನು ಸುಧಾರಿಸಲು ಸಹಾಯ ಮಾಡಬೇಕು ಹಾಗೂ ಬಹು ಕ್ರಿಯಾತ್ಮಕವಾಗಿ ಮತ್ತು ಕಠಿಣ ಪರಿಶ್ರಮವನ್ನು ಕಡಿಮೆಗೊಳಿಸುವಂತಾಗಿರಬೇಕು.

**ನಾವೀನ್ಯತೆ ಅಗತ್ಯ ಏಕೆ?**

ನಾವೀನ್ಯತೆ ಸ್ಪರ್ಧಾತ್ಮಕ ಪ್ರಯೋಜನವನ್ನು ನಿರ್ವಹಣೆ ಮಾಡುವುದು ಮಾತ್ರವಲ್ಲ, ಪ್ರಸಕ್ತ ಜಗತ್ತಿನಲ್ಲಿನ ಸಂಸ್ಥೆಗಳ, ಕೈಗಾರಿಕೆಗಳ ಮತ್ತು ದೇಶಗಳ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಅಗತ್ಯವಾಗಿದೆ. ನಾವೀನ್ಯತೆ ಉತ್ಪನ್ನಗಳನ್ನು, ಪ್ರಕ್ರಿಯೆಗಳನ್ನು ಮತ್ತು ಸೇವೆಗಳನ್ನು ಸುಧಾರಿಸುವುದು ಮತ್ತು ಅದರ ಮೂಲಕ ಜನರ ಜೀವನದ ಗುಣಮಟ್ಟವನ್ನು ಹೆಚ್ಚಿಸುವುದು.

ಆದ್ದರಿಂದ ಇದರಲ್ಲಿ ಉನ್ನತ ತಂತ್ರಜ್ಞಾನದ ಸಂಶೋಧನೆ ಮತ್ತು ನಾವೀನ್ಯತೆಗಳಲ್ಲಿ ಮುಂದುವರೆಸುವುದು ಕಡ್ಡಾಯವಾಗಿದೆ. ಆಡಳಿತದಲ್ಲಿ ನಾವೀನ್ಯತೆ ಪಾತ್ರವನ್ನು ಗುರುತಿಸಿದ ಭಾರತ ಸರ್ಕಾರವು 2010–20ನ್ನು **"ನಾವೀನ್ಯತೆಯ ದಶಕ"** ಎಂದು ಘೋಷಿಸಲಾಗಿದೆ.

**ನಮ್ಮ ಮಕ್ಕಳನ್ನು ಇನ್ನೋವೇಟಿವ್ ಆಗಬೇಕು ಎಂದು ಏಕೆ ನಾವು ಒತ್ತಾಯಿಸಬೇಕು ?**

ಮಕ್ಕಳಲ್ಲಿ ಸೃಜನಶೀಲತೆಯು ಬಹುತೇಕವಾಗಿ ಹುಟ್ಟಿನಿಂದಲೇ ಇರುತ್ತದೆ. ಪ್ರತಿ ಮಗುವೂ ಸೃಜನಶೀಲವಾಗಿರುತ್ತದೆ. ಮಗುವಿನಿಂದ ಮಗುವಿಗೆ ವ್ಯತ್ಯಾಸವಿರಬಹುದು, ಮೂಲಭೂತತೆ, ಸೃಜನಶೀಲತೆ ಮಕ್ಕಳಲ್ಲಿ ನಾವೀನ್ಯತೆಯ ಉತ್ಸಾಹವನ್ನು ಉತ್ತೇಜಿಸಬೇಕು. ನಾವೀನ್ಯತೆಯಿಂದ ದೇಶಕ್ಕೆ ಕಾಲ್ಪನಿಕ, ಅಂತರ್ಗತ ಭವಿಷ್ಯವನ್ನು ಖಾತ್ರಿಪಡಿಸುವ ಮೂಲಕ ಭವಿಷ್ಯದಲ್ಲಿ ನಮ್ಮ ಸಮಾಜದ ನಾಯಕರಾಗಲು ಸಹಾಯಕವಾಗುತ್ತದೆ. ನಮ್ಮ ಸಮಾಜದ ಅಂತರ್ಗತ ಅಭಿವೃದ್ಧಿಯ ಮಕ್ಕಳಿಗಾಗಿ ಅವಕಾಶಗಳನ್ನು ಒದಗಿಸುತ್ತದೆ. ಇದರಿಂದ ಜಡತ್ವ ಮತ್ತು ಸಮಸ್ಯೆಗಳನ್ನು ಪರಿಹರಿಸುವ ನಾವೀನ್ಯ ಮಾರ್ಗಗಳಿಗೆ ಅವಕಾಶಗಳನ್ನು ಒದಗಿಸುತ್ತದೆ. ಸೃಜನಶೀಲ, ತಾಳ್ಮೆ ಮತ್ತು ಕಲ್ಪನಾತ್ಮಕ ಮಕ್ಕಳು

ರಾಷ್ಟ್ರದ ಅತ್ಯಂತ ಅಮೂಲ್ಯ ಆಸ್ತಿಗಳಲ್ಲಿ ಒಂದಾಗಿದ್ದಾರೆ. ಸಂವೇದನಾ (ಪರಾನುಭೂತಿ), ಸೃಜನಶೀಲತೆ ಮತ್ತು ಸಹಕಾರದಿಂದ ಅವಲೋಕಿಸಿ, ಅವರನ್ನು ಭಾರತಕ್ಕೆ ಮಾತ್ರವಲ್ಲ ಜಗತ್ತಿನಲ್ಲಿಯೇ ಯೋಗ್ಯ ನಾಗರಿಕರನ್ನಾಗಿ ಮಾಡುತ್ತದೆ.

ಇನ್ಸ್ಪೈರ್ ಅವಾರ್ಡ್ಸ್–ಮಾನಕ್, ಡಿ.ಎಸ್.ಇ.ಆರ್.ಟಿ.ಯಿಂದ ಆಯೋಜಿಸಲ್ಪಟ್ಟು ಕಾರ್ಯಗತಗೊಳಿಸಲಾದ ಪ್ರಮುಖ ಕಾರ್ಯಕ್ರಮಗಳಲ್ಲಿ ಒಂದಾಗಿದೆ. ಇನ್ಸ್ಪೈರ್ ಮೂಲ ಉದ್ದೇಶವೆಂದರೆ ಪ್ರತಿಭೆಯನ್ನು ಆಕರ್ಷಿಸುವುದು, ಅವರನ್ನು ಚಿಕ್ಕ ವಯಸ್ಸಿನಲ್ಲೇ (10–15 ವರ್ಷಗಳು ಅಥವಾ 6–10ನೇ ವರ್ಗ) ವಿಜ್ಞಾನದೆಡೆಗೆ ಆಕರ್ಷಿಸುವುದು ಮತ್ತು ವೈಜ್ಞಾನಿಕ ಮತ್ತು ತಂತ್ರಜ್ಞಾನದ ವ್ಯವಸ್ಥೆಯನ್ನು ಬಲಪಡಿಸಲು ಮತ್ತು ಹೆಚ್ಚಿಸಲು ವಿಮರ್ಶಾತ್ಮಕ ಮಾನವ ಸಂಪನ್ಮೂಲ ಹೆಚ್ಚಿಸಲು ಸಹಾಯ ಮಾಡುವುದು ಮತ್ತು ಸಂಶೋಧನೆ ಮತ್ತು ಅಭಿವೃದ್ಧಿ ಮೂಲವನ್ನು ಹೆಚ್ಚಿಸುವುದು ವಿದ್ಯಾರ್ಥಿಗಳು ಶಾಲೆಯ ಮೂಲಕ ತಮ್ಮ ಮೂಲ ಮತ್ತು ಸೃಜನಶೀಲ ತಾಂತ್ರಿಕ ವಿಚಾರಗಳನ್ನು/ನಾವೀನ್ಯತೆಗಳನ್ನು ಕಳುಹಿಸಲು ದೇಶದಾದ್ಯಂತ ಎಲ್ಲಾ ಶಾಲೆಗಳಿಂದ ಆಹ್ವಾನಿಸಲಾಗಿದೆ.

**ಇನ್ಸ್ಪೈರ್ ಅವಾರ್ಡ್ಸ್–ಮಾನಕ್ ಒಳಗೆ ಯಾವ ರೀತಿಯ ಸಲ್ಲಿಕೆಗಳನ್ನು ಆಮಂತ್ರಿಸಲಾಗಿದೆ?**

ವಿದ್ಯಾರ್ಥಿಗಳ ಮೂಲ ಮತ್ತು ಸೃಜನಶೀಲ ತಾಂತ್ರಿಕ ವಿಚಾರ/ನಾವೀನ್ಯತೆಗಳು ಯಾವುದೇ ದೈನಂದಿನ ಸಮಸ್ಯೆಯನ್ನು ಪರಿಹರಿಸಬೇಕು, ಇದು ಕುಟುಂಬ ಅಥವಾ ರೈತರು, ಕೂಲಿ ಕಾರ್ಮಿಕರು, ಸಮಾಜ ಅಥವಾ ಇತರರ ಸಮಸ್ಯೆಗಳಾಗಿರಬಹುದು. ಮಕ್ಕಳಿಗೆ ಸಾಮಾನ್ಯ ಸಮಸ್ಯೆಗಳನ್ನು ಗಮನಿಸಿ ಮತ್ತು ತಮ್ಮದೇ ಆದ ಪರಿಹಾರಗಳೊಂದಿಗೆ ಬರಲು ಪ್ರೇರೇಪಿಸುವುದು.

**ಈ ಯೋಜನೆಯನ್ನು ಹೇಗೆ ಕಾರ್ಯಗತಗೊಳಿಸಲಾಗುವುದು?**

* ಧ್ವನಿ, ದೃಶ್ಯ ಮಾಧ್ಯಮ ಮತ್ತು ಸಾಹಿತ್ಯ ಮೂಲಕ ದೇಶಾದ್ಯಂತ ಜಿಲ್ಲಾ ಮತ್ತು ರಾಜ್ಯ ಮಟ್ಟದ ಕಾರ್ಯಕರ್ತರ ಜಾಗೃತಿ ಮತ್ತು ಸಾಮರ್ಥ್ಯ ಬೆಳೆಸುವುದಕ್ಕೆ. ಪ್ರಾದೇಶಿಕ ಕಾರ್ಯಗಾರಗಳ ಆಯೋಜನೆ.
* ವೆಬ್–ಲಿಂಕ್ http://www. inspireawards-dst.gov.in E-MIAS.(E Management of INSPIRE Award Scheme) ಮೂಲಕ ಶಾಲಾ ಮುಖ್ಯಸ್ಥರಿಂದ ಯಾವುದೇ ಭಾರತೀಯ ಭಾಷೆಯಲ್ಲಿ ಎರಡು ಅಥವಾ ಮೂರು ಅತ್ಯುತ್ತಮ ಮೂಲ ವಿಚಾರಗಳ ಬಗ್ಗೆ ಶಾಲೆಗಳಲ್ಲಿ ಆಂತರಿಕ ಸ್ಪರ್ಧೆ ಹಾಗೂ ನಾಮನಿರ್ದೇಶನ ಏರ್ಪಡಿಸುವುದು.
* ಶಾಲೆಗಳು ಸಹ ಸ್ವತಃ E-MIAS ಪೋರ್ಟಲ್‌ನಲ್ಲಿ ನೊಂದಾಯಿಸಿಕೊಳ್ಳಬಹುದು.
* ಸಾಮಾಜಿಕ ಅಗತ್ಯತೆಗಳನ್ನು ಉದ್ದೇಶಿಸಲು ಸಾಮರ್ಥ್ಯವಿರುವ, ಒಂದು ಲಕ್ಷ ವಿಚಾರಗಳನ್ನು ಎನ್.ಐ.ಎಫ್ ಆಯ್ಕೆಮಾಡುತ್ತದೆ. ಆಯ್ಕೆಯಾದ ವಿಷಯಗಳಿಗೆ ಅನುಗುಣವಾಗಿ ನೇರವಾಗಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗಳಿಗೆ ಇನ್ಸ್ಪೈರ್ ಅವಾರ್ಡ್ ರೂ.10,000ಗಳನ್ನು ಜಮಾ ಮಾಡಲಾಗುತ್ತದೆ.
* ಅತ್ಯುತ್ತಮ ವಿಚಾರ/ನಾವೀನ್ಯತೆಗಳನ್ನು ಆಯ್ಕೆ ಮಾಡಿ ಜಿಲ್ಲಾ/ರಾಜ್ಯ /ರಾಷ್ಟ್ರ/ಅಂತರಾಷ್ಟ್ರೀಯ ಮತ್ತು ಯೋಜನಾ ಸ್ಪರ್ಧೆಯನ್ನು ಆಯೋಜನೆ ಮಾಡಲಾಗುವುದು. ಈ ಹಂತದಲ್ಲಿ ದೇಶದ ಪ್ರಸಿದ್ಧ ಶೈಕ್ಷಣಿಕ ಮತ್ತು ತಂತ್ರಜ್ಞಾನ ಸಂಸ್ಥೆಗಳೊಂದಿಗೆ ಸಮನ್ವಯವಾಗಿ, ಎನ್.ಐ.ಎಫ್. ಮೂಲ ಮಾದರಿಗಳ ಅಭಿವೃದ್ಧಿಗಾಗಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಹಾಗೂ ಬೆಂಬಲವನ್ನು ಒದಗಿಸುತ್ತದೆ.

* ವಿಚಾರಗಳ/ನಾವೀನ್ಯತೆಗಳ ಆಯ್ಕೆಯು ನವೀನತೆ, ಸಾಮಾಜಿಕ ಅನುಕೂಲತೆ ಪರಿಸರ ಸ್ನೇಹಿ, ಬಳಕೆದಾರ ಸ್ನೇಹಿ ಮತ್ತು ಅಸ್ತಿತ್ವದಲ್ಲಿರುವ ತಂತ್ರಜ್ಞಾನಗಳ ಮೇಲೆ ತುಲನಾತ್ಮಕ ಅನುಕೂಲತೆಗಳನ್ನು ಆಧರಿಸಿರುತ್ತದೆ.

**ಯಾವ ರೀತಿಯ ಸಲ್ಲಿಕೆಗಳನ್ನು ಪ್ರೋತ್ಸಾಹಿಸುವುದಿಲ್ಲ ?**

ಪಠ್ಯಪುಸ್ತಕಗಳು/ಇತರೆಗಳಿಂದ ಸಾಮಾನ್ಯ ವಿಚಾರಗಳು/ಪರಿಕಲ್ಪನೆ ಅಂದರೆ ಜಲ ವಿದ್ಯುತ್ ಯೋಜನೆಗಳು, ಮಳೆ ನೀರು ಕೊಯ್ಲು, ನೀರಿನ ಮಟ್ಟ ಸೂಚಕ, ಕ್ರಿಮಿಕೀಟಗಳ ಮಿಶ್ರಗೊಬ್ಬರ/ಕ್ರಿಮಿಕೀಟಗಳನ್ನು ತೆಗೆದುಹಾಕುವುದು, ಪತ್ರ ಪೆಟ್ಟಿಗೆ, ಎಚ್ಚರಿಕೆ ಗಂಟೆಗಳು, ಶಕ್ತಿ ಉತ್ಪಾದಿಸಲು ಟರ್ಬೈನ್‌ಗಳನ್ನು ಬಳಸುವುದು, ತ್ಯಾಜ್ಯ ಬ್ಯಾಟರಿಗಳು/ಸಗಣಿ/ಸಾಗಣಿಕೆ/ತರಂಗಗಳಿಂದ ವಿದ್ಯುತ್ ಉತ್ಪಾದನೆ, ಭೂಕಂಪದ ಎಚ್ಚರಿಕೆಗಳು ಇತ್ಯಾದಿಗಳನ್ನು ಮಕ್ಕಳು ತಮ್ಮದೇ ಆದ ಸೃಜನಾತ್ಮಕ ಸಲಹೆ ನೀಡಬಹುದು. ಆದರೆ ಅವನ/ಅವಳ ವಿಚಾರಗಳನ್ನು ಮೂಲ ಮಾದರಿಯನ್ನು ಬದಲಾಯಿಸುವಂತಿಲ್ಲ ತಮ್ಮ ವಿದ್ಯಾರ್ಥಿಗಳು ಅಭಿವೃದ್ಧಿಪಡಿಸಿದ ಯೋಜನೆಗಳು ಮಾನ್ಯವಾಗಿದೆಯೋ / ಇಲ್ಲವೋ ಎಂದು ಪರೀಕ್ಷಿಸಲು ಶಿಕ್ಷಕರು ಕೆಳಗೆ ನೀಡಿದ ವೆಬ್ ಲಿಂಕ್‌ನಲ್ಲಿ ನೋಡಬಹುದು. ಇದು ಮೂಲತೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಸ್ಪರ್ಧೆಯ ಗುಣಮಟ್ಟವನ್ನು ನಿರ್ವಹಿಸಲು ಸಹಾಯ ಮಾಡುತ್ತದೆ.

(htt://www.inspireawards-dst.gov, in/user P/inspire- downloads. aspx)





**ನಾಗರಾಜ. ಎಂ.**
ಹಿರಿಯ ಉಪನ್ಯಾಸಕರು, ಡಯಟ್
ಶಿವಮೊಗ್ಗ.

# ಶತಮಾನೋತ್ಸವ / ಸುವರ್ಣ ಮಹೋತ್ಸವದಲ್ಲಿ ಮಿಂದ ಶಾಲೆಗಳು

## ಕಾನನದ ನಡುವಿನ ಸುವರ್ಣ ಶಾಲೆ–ಚದರವಳ್ಳಿ

ಪ್ರಕೃತಿ ಸೌಂದರ್ಯದ ತಪ್ಪಲಿನ, ಮಲೆನಾಡಿನ ಪ್ರಶಾಂತವಾದ ವಾತಾವರಣದಲ್ಲಿ ಇರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಚದರವಳ್ಳಿ, ಸಾಗರ ತಾಲ್ಲೂಕು ಇತ್ತೀಚಿಗೆ ತನ್ನ ಸುವರ್ಣ ಮಹೋತ್ಸವ ಕಾರ್ಯಕ್ರಮವನ್ನು ಯಶಸ್ವಿ ಮತ್ತು ಅದ್ಧೂರಿಯಾಗಿ ಆಚರಿಸಿಕೊಂಡಿತು. 1956ನೇ ಇಸವಿಯಲ್ಲಿ ಸ್ಥಾಪನೆಗೊಂಡಿರುವ ಶಾಲೆ ಇಂದಿಗೆ 65 ವರ್ಷಗಳನ್ನು ಪೂರೈಸಿದೆ. ಅದರ ಸವಿನೆನಪಿಗಾಗಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ, ಶ್ರೀರಾಮ ಹಳೆ ವಿದ್ಯಾರ್ಥಿಗಳ ಸಂಘ, ಶಿಕ್ಷಕ ವೃಂದ, ವಿದ್ಯಾರ್ಥಿಗಳು, ಪೋಷಕರು ಹಾಗೂ ಸಮಸ್ತ ಊರಿನ ನಾಗರೀಕರು ಸೇರಿ, ಸುವರ್ಣ ಮಹೋತ್ಸವ ಕಾರ್ಯಕ್ರಮವನ್ನು ನೆರವೇರಿಸಿದರು.

ಅವಿಚ್ಛಿನ್ನ ಪರಂಪರೆಯ ಶ್ರೀರಾಮಚಂದ್ರಾಪುರ ಮಠದ ಶ್ರೀಶ್ರೀಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿ ಅವರು ಈ ಶಾಲೆಯಲ್ಲಿ ಶಿಕ್ಷಣವನ್ನು ಪಡೆದಿದ್ದರು ಎಂಬುದು ಶಾಲೆಗೆ ಹೆಮ್ಮೆ ತರಿಸಿದೆ.



ಸುವರ್ಣಮಹೊತ್ಸವ ಕಾರ್ಯಕ್ರಮದ ಪ್ರಯುಕ್ತ ಶಾಲೆಯ ಹಳೆಯ ವಿದ್ಯಾರ್ಥಿಗಳು ಬಹುಪಾಲು ಕಾಣಿಕೆಯನ್ನು ನೀಡಿ ಶಾಲೆಗೆ ಬೇಕಾಗಿರುವಂತಹ ಅಗತ್ಯ ಸಂಪನ್ಮೂಲಗಳನ್ನು ಒದಗಿಸಿರುತ್ತಾರೆ. ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗಾಗಿ ರೂ. 40,000 ಅಂದಾಜು ಮೌಲ್ಯದ ಸ್ಮಾರ್ಟ್‌ಕ್ಲಾಸ್ ಯೋಜನೆಯನ್ನು ಶಾಲೆಗೆ ಹಳೆಯ ವಿದ್ಯಾರ್ಥಿಗಳು ನೀಡಿರುತ್ತಾರೆ. ಶಾಲೆಯ ಎಲ್ಲಾ ಹಳೇ ವಿದ್ಯಾರ್ಥಿಗಳು ಸೇರಿಕೊಂಡು ಶ್ರೀರಾಮ ಹಳೆ ವಿದ್ಯಾರ್ಥಿಗಳ ಸಂಘ ಎಂಬ ಒಂದು ಒಕ್ಕೂಟವನ್ನು ಸ್ಥಾಪಿಸಿಕೊಂಡಿರುತ್ತಾರೆ. ಶಾಲೆಯ ಅಭಿವೃದ್ಧಿಗಾಗಿ ಸದಾ ನಾವುಗಳು ಸಿದ್ಧ ಎಂಬ ಪ್ರತಿಜ್ಞೆಯನ್ನು ಮಾಡಿರುತ್ತಾರೆ.

ಅವರ ಬಹು ಅಮೂಲ್ಯವಾದ ಕೊಡುಗೆಗಳಿಂದ ಶಾಲೆ ಇಂದು ಉತ್ತಮ ಸ್ಥಿತಿಯಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸವನ್ನು ನೀಡಲು ಮುಂದಾಗಿದೆ. ಶಾಲೆಗೆ ಬೇಕಾಗಿರುವ ಪ್ರಿಂಟರ್, ಧ್ವನಿವರ್ಧಕ, ಕುಡಿಯುವ ನೀರಿನ ವ್ಯವಸ್ಥೆ, ವಿದ್ಯಾರ್ಥಿಗಳಿಗೆ ಸಮವಸ್ತ್ರ ಇತ್ಯಾದಿಗಳನ್ನು ಒದಗಿಸಿರುತ್ತಾರೆ.

ಸರ್ಕಾರದ ಕಡೆಯಿಂದ ರೂ. 5ಲಕ್ಷ ಅನುದಾನದಿಂದ ಮಳೆ ಹಾನಿ ದುರಸ್ತಿ ಯೋಜನೆಯಡಿಯಲ್ಲಿ ಎರಡು ಕೊಠಡಿಗಳ ದುರಸ್ತಿ ಕಾರ್ಯವು ನಡೆದಿರುತ್ತದೆ. ಮೂರು ಲಕ್ಷ ರೂಪಾಯಿಯಲ್ಲಿ ನೆಲಕ್ಕೆ ನೆಲಹಾಸು, ಕಿಟಕಿಗೆ ಪೇಂಟಿಂಗ್ ಮಾಡಿಸಿಕೊಟ್ಟಿರುತ್ತಾರೆ.

ಯೂತ್ ಫಾರ್ ಸೇವಾ ವತಿಯಿಂದ ರೂ. 20,000 ಮೌಲ್ಯದ ಅಕ್ವಾಗಾರ್ಡ್ ನೀರಿನ ಫಿಲ್ಟರ್, ಹಾಗೆಯೇ ರೂ 20,000 ಮೌಲ್ಯದ ಆಟದ ಸಾಮಗ್ರಿಗಳನ್ನು ಸಹ ನೀಡಿರುತ್ತಾರೆ.

ಹೀಗೆ ಹತ್ತು ಹಲವು ಅಭಿವೃದ್ಧಿ ಕಾರ್ಯಗಳನ್ನು ಮಾಡಿಕೊಂಡು ಶಾಲೆ ಯಶಸ್ಸಿನ ಪಯಣದತ್ತ ಸಾಗುತ್ತಿರುವಾಗ ಸರ್ವರೂ ಸೇರಿಕೊಂಡು ಸುವರ್ಣ ಮಹೋತ್ಸವ ಕಾರ್ಯಕ್ರಮವನ್ನು ಅದ್ದೂರಿಯಾಗಿ ಆಚರಿಸಲು ಸಿದ್ಧರಾದರು. ಎಲ್ಲರೊಂದಿಗೂ ಅಗತ್ಯವಾದ ಹಣಕಾಸನ್ನು ಸಂಗ್ರಹಿಸಿ ಎಲ್ಲರನ್ನು ಸಂಘಟಿಸಿಕೊಂಡು ಮಾನ್ಯ ಶಿಕ್ಷಣ ಸಚಿವರನ್ನು ಆಹ್ವಾನಿಸಲು ಮುಂದಾಗಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ನಮ್ಮ ಕರೆಗೆ ಓಗೊಟ್ಟು ಮಾನ್ಯ ಶಿಕ್ಷಣ ಸಚಿವರು ಕಾರ್ಯಕ್ರಮಕ್ಕೆ ಹಾಜರಾಗಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿಕೊಟ್ಟರು. ಇಲಾಖೆಯ ಎಲ್ಲಾ ಅಧಿಕಾರಿ ವರ್ಗದವರು, ಸಿಬ್ಬಂದಿಗಳು ಉಪಸ್ಥಿತರಿದ್ದು ಹಾಗೂ ಜನಪ್ರತಿನಿಧಿಗಳ ಭಾಗವಹಿಸುವಿಕೆ ಕಾರ್ಯಕ್ರಮದ ಮೆರಗನ್ನು ಹೆಚ್ಚಿಸಿತು.

ನಮ್ಮ ಶಾಲೆಯ ಇತಿಹಾಸದಲ್ಲೇ ಮೊದಲ ಬಾರಿಗೆ ಅದ್ದೂರಿಯಾದ ಕಾರ್ಯಕ್ರಮ ನೆರವೇರಿತು. ಮಲೆನಾಡಿನ ತಪ್ಪಲಿನಲ್ಲಿರುವ ಶಾಲೆಯ ಈ ಕಾರ್ಯಕ್ರಮಕ್ಕೆ ಶಿಕ್ಷಣ ಸಚಿವರ ಆಗಮನ ಇನ್ನಷ್ಟು ಮೆರಗನ್ನು ತರಿಸಿತು. ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು. ಶಾಲೆಯ ಅಭಿವೃದ್ಧಿಗೆ ಅಗತ್ಯವಾದ ಎಲ್ಲ ಸಂಪನ್ಮೂಲಗಳು ಈ ಕಾರ್ಯಕ್ರಮದ ಮೂಲಕ ಈಡೇರಿದವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಮಾದರಿ ಶಾಲೆಯನ್ನಾಗಿಸಲು ನಾವೆಲ್ಲರೂ ಪಣ ತೊಟ್ಟಿರುವೆವು...



**ನಲಿಕಲಿ ಮಕ್ಕಳೊಂದಿಗೆ ನಲಿಕಲಿ ಕೊಠಡಿಯಲ್ಲಿ**
**ಮಾನ್ಯ ಶಿಕ್ಷಣ ಸಚಿವರೊಂದಿಗೆ ನಮ್ಮ ಶಾಲೆಯ ವಿದ್ಯಾರ್ಥಿಗಳು**

**ಹರಿಶ್ಚಂದ್ರ ವಿ.ಬಿ.**
ಮುಖ್ಯೋಪಾಧ್ಯಾಯರು,
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಚದರವಳ್ಳಿ, ಸಾಗರ ತಾ.

# ಶತಮಾನ ಕಂಡ ಮುದುವಾಲ ಶಾಲೆ...

ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ತಾಲ್ಲೂಕು, ಕೊನಗವಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮದ ಮುದುವಾಲದಲ್ಲಿ 1918 ರಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆ ಮೊಟ್ಟಮೊದಲು ದೇವಸ್ಥಾನದಲ್ಲಿ ಪ್ರಾರಂಭವಾಯಿತು. ಅನಂತರದಲ್ಲಿ ಊರಿನವರ ಸಹಕಾರದೊಂದಿಗೆ ದಾನಿಗಳಾದ ಶ್ರೀಮತಿ ಮಠದ ಗಂಗಮ್ಮನವರು ಶಾಲೆಗಾಗಿ ಸ್ಥಳವನ್ನು ದಾನ ಮಾಡಿದರು. ನಂತರದಲ್ಲಿ ಶಾಲೆಯ ಕಟ್ಟಡ ನಿರ್ಮಿಸಿ ಅಲ್ಲಿ ಶಾಲೆಯನ್ನು ಆರಂಭಿಸಲಾಯಿತು.




ಕೃಷಿ ಆಧಾರಿತ ಜೀವನ ಶೈಲಿ ಹೊಂದಿರುವ ಗ್ರಾಮವು ಒಳ್ಳೆಯ ಹೆಸರನ್ನು ಪಡೆದಿದ್ದು, ಈ ಊರಿನಲ್ಲಿರುವ ಶಾಲೆಯು ಒಳ್ಳೆಯ ವಿದ್ಯಾದಾನವನ್ನು ನೀಡುತ್ತಾ ಬಂದಿದೆ. 500 ಮನೆಗಳು ಹಾಗೂ 2000 ಜನಸಂಖ್ಯೆಯುಳ್ಳ ಈ ಗ್ರಾಮದಲ್ಲಿ ಕೂಲಿ ಕಾರ್ಮಿಕರು, ರೈತರು ಹಾಗೂ ಉದ್ಯೋಗಿಗಳು ವಾಸ ಮಾಡುತ್ತಿದ್ದಾರೆ. ಊರಿನವರು ಶಿಕ್ಷಣಕ್ಕಾಗಿ ಈ ಶಾಲೆಯನ್ನೇ ಅವಲಂಬಿಸಿದ್ದು, ವಿದ್ಯಾಭ್ಯಾಸವನ್ನು ಈ ಶಾಲೆಯಲ್ಲಿಯೇ ಪಡೆದ ಅನೇಕರು ಸರ್ಕಾರದ ವಿವಿಧ ಇಲಾಖೆಗಳಲ್ಲಿ, ಪೊಲೀಸ್, ತೆರಿಗೆ ಅಧಿಕಾರಿ, ಇಂಜಿನಿಯರ್, ಶಿಕ್ಷಕರು ಹಾಗೂ ಇತರೆ ಇಲಾಖೆಗಳಲ್ಲೂ ಕರ್ತವ್ಯವನ್ನು ನಿರ್ವಹಿಸುತ್ತಿರುವುದು ಶಾಲೆಗೆ ಹೆಮ್ಮೆ ತಂದಿದೆ.

1918 ರಿಂದ 2018 ವರೆಗೆ ಶತಮಾನ ಕಂಡ ಈ ಶಾಲೆಯು ಅನೇಕ ಮೂಲಭೂತ ಸೌಕರ್ಯಗಳನ್ನು ಪಡೆದಿದ್ದು, ವಿಸ್ತಾರವಾದ ಶಾಲಾ ಮೈದಾನ, ಕಾಂಪೌಂಡ್ ಹಾಗೂ ಶಾಲಾ ಕೈತೋಟ, ಅಡಿಗೆ ಮನೆ, ತರಗತಿ ಕೋಣೆಗಳು, ಕುಡಿಯುವ ನೀರು, ಶೌಚಾಲಯ ಹಾಗೂ ವಿದ್ಯಾರ್ಥಿಗಳ ಕ್ಷೇಮಕ್ಕಾಗಿ ಎಲ್ಲಾ ಸೌಕರ್ಯಗಳನ್ನು ಪಡೆದಿರುವುದು ನಮ್ಮೆಲ್ಲರ ಹೆಮ್ಮೆ. ಇದರ ಸದುಪಯೋಗವನ್ನು ನಮ್ಮ ಊರಿನ ಎಲ್ಲಾ ಮಕ್ಕಳು ಪಡೆದು ಉನ್ನತ ವಿದ್ಯಾಭ್ಯಾಸವನ್ನು ಪಡೆಯುವುದರೊಂದಿಗೆ ಹಾಗು ಸಮಾಜಕ್ಕೆ ಒಳ್ಳೆಯ ಕೊಡುಗೆಯನ್ನು ನೀಡುವ ಮೂಲಕ ದೇಶದ ಅಭಿವೃದ್ಧಿಗೆ ಕೈ ಜೋಡಿಸಿದ್ದಾರೆ.

ಶತಮಾನ ಕಂಡ ಈ ಶಾಲೆಯ ಶತಮಾನೋತ್ಸವ ಸಮಾರಂಭವು ದಿ. 30–05–2018 ರಿಂದ 31–05–2018ರ ವರೆಗೆ ಶಾಲೆಯ ಆವರಣದಲ್ಲಿ ವಿಜೃಂಭಣೆಯಿಂದ ಜರುಗಿತು. ಇದರ ಅಧ್ಯಕ್ಷತೆಯನ್ನು ರಾಂಪುರ ಮಠದ ಶ್ರೀ ಶ್ರೀ ಶ್ರೀ ಹಾಲಸ್ವಾಮಿಗಳು ಮತ್ತು ಕಲ್ಲುಗಂಗೂರು ವಿವೇಕಾನಂದ ಆಶ್ರಮದ ಶ್ರೀ ವಿನಯಾನಂದ ಸರಸ್ವತಿ ಸ್ವಾಮೀಜಿಯವರು ನಡೆಸಿಕೊಟ್ಟರು.

ಪ್ರಸ್ತುತ ಈ ಶಾಲೆಯಲ್ಲಿ 6 ಜನ ಶಿಕ್ಷಕರು, 111 ಮಕ್ಕಳಿದ್ದು, 1 ರಿಂದ 7ನೇಯ ತರಗತಿವರೆಗೆ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ. ಶಾಲೆ ಹತ್ತು ದಶಕಗಳನ್ನು ಪೂರೈಸಿದ್ದು, ಶತಮಾನೋತ್ಸವದ ಸಂಭ್ರಮವನ್ನು ಆಚರಿಸಿಕೊಂಡಿದೆ.

**ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕವೃಂದ**

ಸ.ಹಿ.ಪ್ರಾ.ಶಾ. ಮುದುವಾಲ, ಶಿವಮೊಗ್ಗ ತಾ॥

# ನೂರರ ಸಂಭ್ರಮದ ಹಾದಿಯಲ್ಲಿ ನಮ್ಮ ಶಾಲೆ – ಆನವಟ್ಟಿ

" ಸಹ್ಯಾದ್ರಿಯ ತಪ್ಪಲ ಪ್ರದೇಶ ಒಂದೆಡೆ, ಧುಮ್ಮಿಕ್ಕುವ ಜೋಗ ಜಲಪಾತ ಇನ್ನೊಂದೆಡೆ, ಚಾಲುಕ್ಯರ ಕಾಲದಲ್ಲಿ ನಿರ್ಮಾಣಗೊಂಡ ಸುಂದರ ಕೈತಭೇಶ್ವರ ದೇವಾಲಯವಿರುವ ಕೋಟಿಪುರಕ್ಕೆ ಅತೀ ಸಮೀಪವಿರುವ ಚಂದ್ರಹಾಸರಾಜ ಆಳಿದ ಕುಂತಳನಗರವೆಂಬ ಕುಬಟೂರು, ಈ ನಗರದ ರಾಜನ ಆಸ್ಥಾನದ ಆನೆಗಳನ್ನು ಕಟ್ಟುವ ಆನೆ ಹಟ್ಟಿಯಾಗಿದ್ದುದೇ, ಈ 'ಆನವಟ್ಟಿ'. ಆನವಟ್ಟಿಯ ಹೃದಯ ಭಾಗದಲ್ಲಿ ಶತಮಾನಗಳ ಹೆಜ್ಜೆಗಳನ್ನು ಪೂರೈಸಿ ಕಂಗೊಳಿಸುತ್ತಿರುವ ಈ ನಮ್ಮ ಶಾಲೆಯು '1908' ರಲ್ಲಿ "ಸರ್ ಮಿರ್ಜಾ ಇಸ್ಮಾಯಿಲ್ ಸಾಬ್" ರ ಶಿಫಾರಸ್ಸಿನ ಪ್ರಭಾವದಿಂದ ಈ ಸ್ಥಳದಲ್ಲಿ ಹಿರಿಯ ಪ್ರಾಥಮಿಕ ಶಾಲೆಯಾಗಿ ಮಾರ್ಪಟ್ಟಿತು.

ನಮ್ಮ ಈ ಶಾಲೆಯಲ್ಲಿ ಅನೇಕರು ವ್ಯಾಸಂಗ ಮಾಡಿ ಉನ್ನತ ಹುದ್ದೆಗಳನ್ನು ನಿರ್ವಹಿಸುತ್ತಿದ್ದಾರೆ. ಇದಕ್ಕೆ ಕಲಶಪ್ರಾಯವೆಂಬಂತೆ ರಾಜ್ಯದ ಹೆಮ್ಮೆಯ ಮುಖ್ಯಮಂತ್ರಿಗಳಾಗಿದ್ದ ದಿ॥ ಶ್ರೀ ಎಸ್. ಬಂಗಾರಪ್ಪನವರೂ ಸಹ ನಮ್ಮ ಶಾಲೆಯಲ್ಲಿಯೇ ಪ್ರಾಥಮಿಕ ಶಿಕ್ಷಣವನ್ನು ಪೂರೈಸಿದ್ದು ನಮ್ಮ ಶಾಲೆಗೆ ಹೆಮ್ಮೆಯ ಗರಿಯೇ ಸರಿ. ಈ ನಮ್ಮ ಶಾಲೆಯು ಪ್ರಾರಂಭಗೊಂಡ ಸಮಯದಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳು ಒಟ್ಟಿಗೆ ಕಲಿಯಲು ಅವಕಾಶವಿದ್ದು, ತದನಂತರದಲ್ಲಿ ಕೇವಲ ಹೆಣ್ಣುಮಕ್ಕಳ ಶಾಲೆಯಾಗಿ ಪರಿವರ್ತನೆಗೊಂಡಿತು. ಆದರೆ 2018–19ನೇ ಸಾಲಿನಿಂದ ಪುನಃ ಗಂಡು ಮಕ್ಕಳಿಗೂ ಶಾಲೆಗೆ ಸೇರಲು ಮುಕ್ತ ಅವಕಾಶ ನೀಡಲಾಗುತ್ತಿದೆ.



2008 ರಲ್ಲಿಯೇ ಶತಮಾನವನ್ನು ಪೂರೈಸಿದರೂ, ಸಹ ಹೊಸತಾಗಿ ಕಂಗೊಳಿಸುತ್ತಿದೆ ನಮ್ಮೀ ಶಾಲೆ. ಬ್ರಿಟೀಷರ ಕಾಲದಲ್ಲಿಯೇ ಏಕೋಪಾಧ್ಯಾಯ ಶಾಲೆಯಿಂದ ಪ್ರಾರಂಭವಾಗಿ ಪ್ರಸ್ತುತ ನವರತ್ನಗಳಂತಿರುವ ಒಂಭತ್ತುಜನ ಶಿಕ್ಷಕಿಯರ ಬಳಗವನ್ನು ಹೊಂದಿದೆ.

ಒಂದುನೂರ ಹನ್ನೆರಡು (112) ವರ್ಷಗಳನ್ನು ಪೂರೈಸಿ ಅದ್ದೂರಿಯಾದ ಶತಮಾನೋತ್ಸವ ಆಚರಣೆಯನ್ನು 15–02–2019ರಲ್ಲಿ ಇಲಾಖಾ ಅಧಿಕಾರಿಗಳು, ಶಾಲಾ ಸಿಬ್ಬಂದಿ, ವಿದ್ಯಾರ್ಥಿಗಳು, ಪೋಷಕರು ಮತ್ತು ಸೊರಬ ತಾಲ್ಲೂಕಿನ ಎಲ್ಲಾ ಸಮುದಾಯದ ಸಹಭಾಗಿತ್ವ ಮತ್ತು ಸಹಕಾರದೊಂದಿಗೆ ಅದ್ದೂರಿಯಾಗಿ ಶತಮಾನೋತ್ಸವ ಆಚರಿಸಲಾಯಿತು. ಈ ಸಂದರ್ಭದಲ್ಲಿ ಶಾಲೆಯ ಭೌತಿಕ ಪರಿಸರವನ್ನು ನವೀಕರಿಸಲಾಯಿತು. ವಿವಿಧ ವರ್ಣರಂಜಿತ ಕಾರ್ಯಕ್ರಮಗಳಿಂದ, ವಿಜೃಂಭಣೆಯಿಂದ ರಾರಾಜಿಸಿತು. ಈ ನಮ್ಮ ಶಾಲಾ ಹಬ್ಬವನ್ನು ವರ್ಣಿಸಲಸಾಧ್ಯ ಸಹಸ್ರಾರು ಸಂಖ್ಯೆಯಲ್ಲಿ ಜನರು ಆಗಮಿಸಿ, ತಮ್ಮ ತನು, ಮನ, ಧನವನ್ನು ಅರ್ಪಿಸಿ ಶಾಲಾ ಶತಮಾನೋತ್ಸವ ವೈಭವಯುತವಾಗಿ ಆಚರಿಸಲು ಸಾಕ್ಷಿಯಾದರು.

ಪ್ರಸ್ತುತ ನಮ್ಮ ಉನ್ನತೀಕರಿಸಿದ ಸರ್ಕಾರಿ ಹಿರಿಯ ಬಾಲಕಿಯರ ಪ್ರಾಥಮಿಕ ಶಾಲೆ, ಅನವಟ್ಟಿ ಇಂದು 250 ವಿದ್ಯಾರ್ಥಿಗಳನ್ನು ಹೊಂದಿದ್ದು ಇಲಾಖೆಯ ಮಾರ್ಗದರ್ಶನದಂತೆ ನಡೆಯುತ್ತಿದೆ. ನಲಿಕಲಿ ತರಗತಿ ಉತ್ತಮ ವ್ಯವಸ್ಥೆ ಹೊಂದಿದೆ. ಕಂಪ್ಯೂಟರ್ ವ್ಯವಸ್ಥೆ, ಪ್ರೊಜೆಕ್ಟರ್, ಪಾಠೋಪಕರಣಗಳು ಉತ್ತಮ ಆಟೋಪಕರಣಗಳನ್ನು ಹೊಂದಿದ್ದು ವ್ಯವಸ್ಥಿತವಾಗಿ ಬಳಕೆಯೂ ಆಗುತ್ತಿದೆ.

"ನಮ್ಮ ಸರ್ಕಾರಿ ಶಾಲೆ ನಮ್ಮ ಹೆಮ್ಮೆ" ಎಂಬುದರಲ್ಲಿ ಯಾವುದೇ ಅತಿಶಯೋಕ್ತಿ ಇಲ್ಲ.

**ರಾಜು**
ಸಿ.ಆರ್.ಪಿ, ಆನವಟ್ಟಿ ಕ್ಲಸ್ಟರ್, ಸೊರಬ ತಾ॥

# ಹತ್ತು ದಶಕ ಪೂರೈಸಿದ ಮುಂಡುವಳ್ಳಿ ಶಾಲೆ

ಶತಮಾನೋತ್ಸವದ ಹೆಗ್ಗಳಿಕೆ ಪಾತ್ರವಾಗಿರುವುದು ನಮ್ಮೂರಿನ ಮುಂಡುವಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ. 110 ವರ್ಷಗಳ ಇತಿಹಾಸವಿರುವ, ಆಂಗ್ಲರ ಆಳ್ವಿಕೆಯಲ್ಲಿ, ತುಂಗಾನದಿ ತಟದಲ್ಲಿ, ಊರಿನ ಹೃದಯ ಭಾಗದಲ್ಲಿರುವ ಶಾಲೆ.

1909 ರಲ್ಲಿ ಸ್ಥಾಪಿತವಾದ ಈ ಶಾಲೆಯು ಪುಟ್ಟದೊಂದು ಮನೆಯ ಆವರಣದಲ್ಲಿ ಪ್ರಾರಂಭವಾಗಿ ಅನೇಕ ಏಳು ಬೀಳುಗಳನ್ನು ದಾಟಿ ಪ್ರಸ್ತುತ ದಿನಗಳಲ್ಲಿ ಸುಂದರವಾದ ವಿಶಾಲವಾದ ಸುಸ್ಥಿರವಾದ ಶಾಲಾ ಕಟ್ಟಡವನ್ನು ಹೊಂದಿ ವಿಶಾಲವಾದ ಆಟದ ಮೈದಾನ, ಸುಂದರ ಶಾಲಾ ಉದ್ಯಾನವನ, ಆಕರ್ಷಕ ಹೊರನೋಟದೊಂದಿಗೆ ಉತ್ತಮವಾದ ಬೋಧಕ ಸಿಬ್ಬಂದಿ ಮತ್ತು ಪ್ರೀತಿಯ ಚಿಣ್ಣರ ಕಲಿಕೆಯ ಕಲರವದೊಂದಿಗೆ ಕಂಗೊಳಿಸುತ್ತಿದೆ.

ಶಾಲೆಯು ಮಲೆನಾಡು ಭಾಗದಲ್ಲಿರುವುದರಿಂದ ಪ್ರಕೃತಿ ಸೌಂದರ್ಯದೊಂದಿಗೆ ಕಂಗೊಳಿಸುತ್ತಿದೆಯಾದರೂ ಅನೇಕ ಅಡಚಣೆಗಳನ್ನು ದಾಟಿ ಬಂದು ಸುಂದರ ಸುಸ್ಥಿರ ಸುಭದ್ರ ವಿದ್ಯಾ ಮಂದಿರವಾಗಿ ರೂಪುಗೊಂಡಿದೆ.

ಸುಮಾರು 300 ಕುಟುಂಬಗಳಿರುವ ನಮ್ಮೂರಿನ ಶಾಲೆಗೆ ವಿವಿಧ ಜನ ವಸತಿ ಪ್ರದೇಶಗಳಾದ ಹೊಸಹಳ್ಳಿ, ಆಚೆಕೊಪ್ಪ, ಸೋಮವಾರ ಸಂತೆ, ಮಂಡಲನಮನೆ, ಶಾಂತಿಕೆರೆ, ನೇರಲಮನೆ ಇಲ್ಲಿನ ವಿದ್ಯಾರ್ಥಿಗಳು ಕಾಲ್ನಡಿಗೆಯಿಂದ 2 ರಿಂದ 5 ಕಿ.ಮಿ. ವರೆಗೆ ಕ್ರಮಿಸಿ ಬರುವುದುಂಟು. ಆದರೂ ಈ ಕಲಿಯುವ ಹಂಬಲ ಉತ್ಕೃಷ್ಟವಾದ ಗುರಿ ಉದ್ದೇಶ ಇರುವಂತಹ ಮಕ್ಕಳಿಗೆ ಈ ಅಡೆತಡೆಗಳು ನಗಣ್ಯ. ಪ್ರಸ್ತುತ ಶಾಲೆಯಲ್ಲಿ 1 ರಿಂದ 7 ನೇ ತರಗತಿವರೆಗೆ 56 ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

ಆರಂಭದಿಂದಲೂ ಶಾಲೆ ಉತ್ತಮ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೊಂದಿದ್ದು ಬಹಳ ದಿನಗಳ ವರೆಗೆ ಈ ಸ್ಥಿರತೆ ಕಂಡುಬಂದಿದೆ. ಗ್ರಾಮಸ್ಥರ, ಪೋಷಕರ ಹಾಗೂ ಶಿಕ್ಷಣಾಸಕ್ತರ ಅಪಾರ ಅಭಿಮಾನ, ಕಾಳಜಿ, ಆಸಕ್ತಿಯಿಂದ ಶಾಲೆಯು ಜಿಲ್ಲಾ ಮಟ್ಟದಲ್ಲಿ ಗುರುತಿಸಿಕೊಳ್ಳುವಂತಹ ಅನೇಕ ಸಾಧನೆಯ ಹಾದಿಯಲ್ಲಿ ಸಾಗಿ ಬಂದಿದೆ.



**ಶಾಲೆಗೆ ಸಂದ ಗೌರವ ಪ್ರಶಸ್ತಿಗಳು :–**

2002–03 ರಲ್ಲಿ ಈ ಶಾಲೆಗೆ ಜಿಲ್ಲಾ ಮಟ್ಟದ ಅತ್ಯುತ್ತಮ ಶಾಲಾ ಪ್ರಶಸ್ತಿ.

2006–07 ರ ಸಾಲಿನಲ್ಲಿ ಅತ್ಯುತ್ತಮ ಎಸ್.ಡಿ.ಎಮ್.ಸಿ. ನಿರ್ವಹಣಾ ಪ್ರಶಸ್ತಿ.

2008–09 ರಲ್ಲಿ ಪರಿಸರ ಅಧ್ಯಯನ ಕೇಂದ್ರದ ಕಿತ್ತಳೆ ಪ್ರಶಸ್ತಿ.

2010–11 ನೇ ಸಾಲಿನಲ್ಲಿ ಜಿಲ್ಲಾ ಮಟ್ಟದ ನೈರ್ಮಲ್ಯ ಶಾಲಾ ಪ್ರಶಸ್ತಿ.

2013 ರಲ್ಲಿ ಯಶಸ್ವಿ ಪ್ರತಿಭಾ ಕಾರಂಜಿ ನಿರ್ವಹಣೆ.

2015–16 ರಲ್ಲಿ ಕ್ಲಸ್ಟರ್ ಮಟ್ಟದ ಅತ್ಯುತ್ತಮ ಶಾಲಾ ಪ್ರಶಸ್ತಿ.

2019 ರಲ್ಲಿ ಪರಿಸರ ಮಿತ್ರ ಹಸಿರು ಶಾಲಾ ಪ್ರಶಸ್ತಿ.

2019 ರಲ್ಲಿ ಹೋಬಳಿ ಮಟ್ಟದ ಕ್ರೀಡಾಕೂಟದ ಆಯೋಜನೆ.

ಈ ರೀತಿಯಲ್ಲಿ ಶಾಲೆಯ ಹಾಗೂ ಇಲ್ಲಿನ ಕಾರ್ಯವೈಖರಿಯನ್ನು ಮೆಚ್ಚಿ ಹಲವಾರು ಪ್ರಶಸ್ತಿಗಳ ಗೌರವ ಸಂದಿವೆ. ಶಾಲೆಯ ಬಗ್ಗೆ ಹಾಗೂ ಇದರ ಯಶಸ್ಸಿನ ಹಿಂದೆ ಕಾರ್ಯ ನಿರ್ವಹಿಸಿದ ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು, ಗ್ರಾಮಸ್ಥರು, ಸಮುದಾಯದ ಕೊಡುಗೆ ಅಪಾರ–ಅನನ್ಯ.

ಶಾಲೆಯು ದಾನಿಗಳಿಂದ ಅಪಾರವಾದ ಸಲಕರಣೆಗಳನ್ನು ಮತ್ತು ಸೌಲಭ್ಯಗಳನ್ನು ಪಡೆದುಕೊಂಡಿದೆ. ಅವುಗಳೆಂದರೆ ಶಾಲಾ ಭೂದಾನ, ನರೇಗಾ ಕಾಮಗಾರಿಯಲ್ಲಿ ಶಾಲಾ ಕಾಂಪೌಂಡು, ರಂಗಮಂದಿರ ಎಸ್.ಎಸ್.ಎ ಅಡಿಯಲ್ಲಿ ಹೆಚ್ಚುವರಿ ಕೊಠಡಿಗಳು, ಸೆಲ್ಕೋರವರ ಸೌರಶಕ್ತಿ, ಸ್ಮಾರ್ಟ್ ಟಿ.ವಿ., ಎಜುಸ್ಯಾಟ್ ಕಾರ್ಯಕ್ರಮ, ಅಂದವಾದ ಶಾಲಾ ಕಾರಿಡಾರ್, ಕುಡಿಯುವ ನೀರಿನ ಶುದ್ಧೀಕರಣ ಘಟಕ, ಜಿ. ಪಂ ಹಾಗೂ ಗ್ರಾಮಸ್ಥರಿಂದ ಶಿಕ್ಷಣಕ್ಕೆ ಪೂರಕವಾದ ಶಾಲಾ ಸೌಲಭ್ಯಗಳನ್ನು ಪಡೆಯುವಲ್ಲಿ ಸಂಸ್ಥೆಯು ಯಶಸ್ವಿಯಾಗಿದೆ. ಶಾಲೆಯ ಸುತ್ತಲಿನ ಆವರಣದಲ್ಲಿ ವಿವಿಧ ಕಾಡು ಜಾತಿಯ ಮರಗಳು, ತೆಂಗಿನ ಹಾಗೂ ಗೇರು ಮರಗಳು, ಸುಂದರ ಉದ್ಯಾನವನವು ಶಾಲೆಯ ಸೌಂದರ್ಯವನ್ನು ಹೆಚ್ಚಿಸಿದೆ. ವಿಶೇಷವೆಂಬಂತೆ ಗ್ರಾಮಸ್ಥರ ತನು, ಮನ, ಧನಗಳ ಸಮರ್ಪಣೆಯಿಂದ **ಶಿಕ್ಷಕರ ವಾಸಕ್ಕೆ ಯೋಗ್ಯವಾದ ವಸತಿ ಗೃಹಗಳ ನಿರ್ಮಾಣ ಮಾಡಿ, ರಾಜ್ಯದಲ್ಲೆ ಮಾದರಿ ಎನಿಸುವಂತಿದೆ.**

ಒಟ್ಟಾರೆಯಾಗಿ ಶಾಲೆಯು ಅನೇಕ ವಿಶಿಷ್ಟ ಹೆಗ್ಗುರುತುಗಳನ್ನು ಹೊಂದಿದ್ದು, ಇನ್ನು ಹೆಚ್ಚಿನ ಸೌಲಭ್ಯಗಳಾದ ಸಾರಿಗೆ ವ್ಯವಸ್ಥೆ, ಕಂಪ್ಯೂಟರ್ ಶಿಕ್ಷಣ, ಕಲೆ, ಕ್ರೀಡೆ, ಸಂಗೀತ, ಹಾಗೂ ಕ್ರಾಫ್ಟ್ ಇವುಗಳಿಗೆ ಹೆಚ್ಚಿನ ಆದ್ಯತೆ, ಶಿಕ್ಷಕರ ವಸತಿ ಗೃಹಗಳ ನವೀಕರಣ, ಕಲಿಕಾ ಸಾಮಾಗ್ರಿಗಳನ್ನು ನಿರೀಕ್ಷಿಸಲಾಗಿದ್ದು, ಇವುಗಳನ್ನು ಆದ್ಯತಾನುಸಾರ ಪೂರೈಸುವಲ್ಲಿ ಸರ್ಕಾರ, ಸಂಘ–ಸಂಸ್ಥೆ ಹಾಗೂ ದಾನಿಗಳ ನಿರೀಕ್ಷೆಯಲ್ಲಿ ನಮ್ಮ ಶಾಲೆ ಇನ್ನು ಹೆಚ್ಚು ಕಾರ್ಯೋನ್ಮುಖವಾಗಲಿದೆ ಎಂಬ ಆಶಾ ಭಾವನೆಯೊಂದಿಗೆ ಮುನ್ನಡೆಯುತ್ತಿದ್ದೇವೆ.

**ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕ ವೃಂದ**
ಎಸ್.ಡಿ.ಎಮ್.ಸಿ., ಸ.ಹಿ.ಪ್ರಾ. ಶಾಲೆ, ಮುಂಡುವಳ್ಳಿ
ತೀರ್ಥಹಳ್ಳಿ ತಾಲ್ಲೂಕು

# ನೂರು ಪೂರೈಸಿದ ಸುಮೇರು ಕೋಡೂರು ಶಾಲೆ

**(ಕೋಡೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಬೆಳೆದು ಬಂದ ದಾರಿ.)**

ನೂರು ವಸಂತಗಳನ್ನು ಪೂರೈಸಿ ಶತಮಾನೋತ್ಸವ ಆಚರಿಸುತ್ತಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕೋಡೂರು ತನ್ನದೇ ಆದ ವಿಶಿಷ್ಟ ಇತಿಹಾಸವನ್ನು ಹೊಂದಿದೆ.

ಲಕ್ಷಾಂತರ ವಿದ್ಯಾರ್ಥಿಗಳನ್ನು ಉತ್ತಮ ನಾಗರಿಕ ಸತ್ಪ್ರಜೆಗಳನ್ನಾಗಿ ರೂಪಿಸಿರುವ ಹೆಗ್ಗಳಿಕೆ ಈ ಶಾಲೆಯದ್ದು. 1914ನೇ ಇಸವಿಯಲ್ಲಿ ವೇದ ಪಾಠಶಾಲೆಯಾಗಿ ಪ್ರಾರಂಭವಾದ ಈ ಶಾಲೆಯು 1918ರಲ್ಲಿ ಗೌಂಟಿ ಶಾಲೆಯಾಗಿ ಪರಿವರ್ತನೆಯಾಯಿತು. ಕೋಡೂರು ಗ್ರಾಮದ ಸ.ನಂ 8ರಲ್ಲಿ ಈಗಿನ ಬಿಳಿಗಲ್ಲು ಭೂತರಾಮನ ಹಕ್ಕಲಿನ ಸಮೀಪ 1918ರಲ್ಲಿ 1 ರಿಂದ 4ನೇ ತರಗತಿಯವರೆಗೆ ಶಾಲೆಯನ್ನು ಪ್ರಾರಂಭಿಸಲಾಯಿತು. ಪ್ರಾರಂಭದಲ್ಲಿ ಹುಲ್ಲಿನ ಗುಡಿಸಲಿನಲ್ಲಿ ಶಾಲೆ ನಡೆಯುತ್ತಿತ್ತು. ಪ್ರಾರಂಭದ ದಿನ ಶ್ರೀಶಂಕರೇಶ್ವರ ದೇವರಿಗೆ ವೇದಘೋಷದೊಂದಿಗೆ ವಾದ್ಯ ಸಮೇತ ಪೂಜೆ ಸಲ್ಲಿಸಿ, ಶಮೀ ಗಿಡ ಬೆಳೆಸಿದ ಜಾಗದಲ್ಲಿ ಅರ್ಚಕರ ಪೂಜೆ ವಿಧಿಯೊಂದಿಗೆ ಶಾಲೆಯನ್ನು ಪ್ರಾರಂಭಿಸಲಾಯಿತು.

ತದನಂತರದಲ್ಲಿ ಈ ಶಾಲೆಯನ್ನು 1929ರಲ್ಲಿ ಕೋಡೂರು ಗ್ರಾಮ ಪಂಚಾಯಿತಿ ಆವರಣಕ್ಕೆ ವರ್ಗಾಯಿಸಲಾಯಿತು. ಗ್ರಾಮ ಪಂಚಾಯಿತಿ ಪಕ್ಕದ ಹಳೇ ಹಂಚಿನ ಕಟ್ಟಡದಲ್ಲಿ ಈ ಶಾಲೆಯನ್ನು ಮುಂದುವರಿಸಲಾಯಿತು. ಸರಿಸುಮಾರು 25 ವರ್ಷಗಳ ಕಾಲ ಶಾಲೆ ಅಲ್ಲಿಯೇ ನಡೆಯುತ್ತಿತ್ತು.

ಪ್ರಾರಂಭದಲ್ಲಿ ಶ್ರೀ ಸೀನಪ್ಪ, ಶ್ರೀ ವೆಂಕಟಸುಬ್ಬಯ್ಯ ಇವರು ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದು. ಆರಂಭದ ದಿನಗಳಲ್ಲಿ 18ರಿಂದ 20 ವಿದ್ಯಾರ್ಥಿಗಳು ದಾಖಲಾಗಿ, ಕ್ರಮೇಣ ಮಕ್ಕಳ ಸಂಖ್ಯೆ ಹೆಚ್ಚುತ್ತಾ ಹೋಯಿತು.

ಅಂದಿನ ಶಿಕ್ಷಕರಿಗೆ ಊರಿನವರೇ ಭೋಜನ ನೀಡುತ್ತಿದ್ದರು. ಶಾಲೆಯ ಸುತ್ತಮುತ್ತ ಕಾಡು ಇದ್ದು, ಹುಲಿ, ಚಿರತೆ, ಕಿರುಬ ಮುಂತಾದ ಕಾಡುಪ್ರಾಣಿಗಳು ಸಂಚರಿಸುತ್ತಿದ್ದವು. ಸ್ಲೇಟು ಬಳಪದ ಅಭಾವದಿಂದ ಹೋಳೆಯ ಮರಳನ್ನು ತಂದು ಅದನ್ನು ಹರಡಿ ಅದರ ಮೇಲೆ ಅಕ್ಷರವನ್ನು ಬರೆಸುತ್ತಿದ್ದರು. ಪೀಠೋಪಕರಣಗಳಾದ ಕುರ್ಚಿ ಮಣೆ ಮುಂತಾದವುಗಳನ್ನು ಪೋಷಕರೇ ದಾನವಾಗಿ ನೀಡುತ್ತಿದ್ದರು.



1965ರಲ್ಲಿ ಸದರಿ ಜಾಗದಲ್ಲಿ ಕಟ್ಟಡ ನಿರ್ಮಾಣವಾಗಿ ಇಲ್ಲಿ ಶಾಲೆ ಅಸ್ತಿತ್ವಕ್ಕೆ ಬಂದಿತು. ಈ ಶಾಲೆಯು ಪ್ರಾರಂಭವಾಗುವಾಗ ಶ್ರೀ ಶಾನುಭೋಗ ನರಸಿಂಹಯ್ಯ, ಶ್ರೀ ಕಲಗೋಡು ಭದ್ರನಾಯ್ಕರು, ಟಿ ಎಸ್ ಸುಬ್ರಹ್ಮಣ್ಯಯ್ಯ, ಅಬ್ಬಿ ಮಂಜಪ್ಪಗೌಡ ಇವರ ನೇತೃತ್ವದಲ್ಲಿ 1965 ರಲ್ಲಿ ಸದರಿ ಜಾಗವು ಗ್ರಾಮ ಪಂಚಾಯತಿಗೆ ಮಂಜೂರಾಗಿದ್ದಾಗ ಶಾಲೆಯನ್ನು ನಿರ್ಮಿಸಲು ಪಂಚಾಯಿತಿಯಲ್ಲಿ ನಿರ್ಣಯ ಮಾಡಿ, ಶಾಲೆಗಾಗಿ ಸ.ನಂ 27 ರಲ್ಲಿ ಈ ಸ್ಥಳವನ್ನು ಮಂಜೂರು ಮಾಡಲಾಯಿತು. ಶಾಲೆಗೆ ಸಂಬಂಧಿಸಿದ ಆಸ್ತಿ, ನಿವೇಶನ ವಿವಿಧ ಸ್ಥಳಗಳಲ್ಲಿ ಭೂದಾನದ ಮೂಲಕ ದೊರಕಿರುತ್ತದೆ.

ಕುಸುಗುಂಡಿ ಗ್ರಾಮದ ಸ.ನಂ 32 ರಲ್ಲಿ 1 ಎಕರೆ ತರಿಯನ್ನು ಹೊಂದಿದ್ದು, ಇದನ್ನು ಶ್ರೀಯುತ ನರಸಿಂಹಯ್ಯ ಇವರು ದಾನವಾಗಿ ನೀಡಿರುತ್ತಾರೆ. ಹಾಗೇ ಹಿರೇಜೇನಿಯಲ್ಲಿ ಸ.ನಂ 33 ರಲ್ಲಿ 1 ಎಕರೆ ತರಿ ಹೊಂದಿದ್ದು ಇದನ್ನು ಎ ಎಂ ಕೃಷ್ಣಪ್ಪಯ್ಯ ಇವರು ದಾನವಾಗಿ ನೀಡಿರುತ್ತಾರೆ. ಸಾವಂತೂರು ಸ.ನಂ 7 ರಲ್ಲಿ 2 ಎಕರೆ ಖುಷ್ಕಿಯನ್ನು ಡಿ.ಎಸ್. ತಿಮ್ಮಪ್ಪರಾವ್ ಇವರು ಶಾಲೆಗೆ ದಾನವಾಗಿ ನೀಡಿರುತ್ತಾರೆ. ಈ ಎಲ್ಲಾ ಹಾಲಿ ಜಮೀನು ರಾಜ್ಯ ಪ್ರಮುಖರ ಹೆಸರಿನಲ್ಲಿರುತ್ತದೆ.

ಹೀಗೆಯೇ ಗ್ರಾಮಸ್ಥರ, ದಾನಿಗಳ, ಸರ್ಕಾರದ ಅನುದಾನದ ನೆರವಿನಿಂದ ಹಂತ ಹಂತವಾಗಿ ಈ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೋಡೂರು ಅಭಿವೃದ್ಧಿಯನ್ನು ಹೊಂದುತ್ತಾ ಬಂದಿದ್ದು, ಹಲವಾರು ಮೂಲಭೂತ ಸೌಕರ್ಯಗಳೊಂದಿಗೆ ಕಲಿಕಾರ್ಥಿಗಳ ಜ್ಞಾನ ದೇಗುಲವಾಗಿ ಸಾವಿರಾರು ವಿದ್ಯಾರ್ಥಿಗಳನ್ನು ತಿದ್ದಿ ತೀಡಿ ಅವರ ಸುಂದರ ಭವಿಷ್ಯ ರೂಪುಗೊಳ್ಳುವಲ್ಲಿ ಕೇಂದ್ರ ಸ್ಥಾನವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಈಗ ಯಶಸ್ವಿಯಾಗಿ 100 ವರ್ಷಗಳನ್ನು ಪೂರೈಸಿ ಶತಮಾನೋತ್ಸವದ ಸಂಭ್ರಮವನ್ನು ಆಚರಿಸಿಕೊಳ್ಳುತ್ತಿದೆ.

ದಿನಾಂಕ 02-02-2019 ಮತ್ತು 03-02-2019ರಂದು ವಿಜೃಂಭಣೆಯಿಂದ ನೂರರ ಸಂಭ್ರಮವನ್ನು ಆಚರಿಸಿಕೊಂಡಿತು.



**ಮುಖ್ಯ ಶಿಕ್ಷಕರು ಮತ್ತು ಶಿಕ್ಷಕವೃಂದ**
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ,
ಕೋಡೂರು, ಹೊಸನಗರ ತಾ॥

# ಶತಮಾನವನ್ನು ಕಂಡ ಪಾರಂಪರಿಕ ಶಾಲೆ – ಉಡುಗಣಿ

**ಜ್ಞಾನವೇ – ಅನಂತ ತೇರು**
**ಮಹಾಶರಣೆ ಅಕ್ಕನ ಊರು**
**ಬನ್ನಿ ಎಲ್ಲರೂ ಎಳೆಯೋಣ ಶಿಕ್ಷಣದ ತೇರು.**
**ಸರ್ಕಾರಿ ಶಾಲೆಗಳಿಗೆ ಗೌರವ ತೋರು**
**ಕನ್ನಡದ ಕಂಪ ಎಲ್ಲೆಡೆ ಬೀರು**
**ಉಡುಗಣಿ ಶಾಲೆಗೆ ವರ್ಷಗಳು ಸಂದಿವೆ ನೂರಾರು.**
**ಶತಮಾನೋತ್ಸವ ಸಮಾರಂಭ ನಡೆಯಿತು ಬಲುಜೋರು.**
**ಕೈ ಜೋಡಿಸಿದರು ಊರಿನ ಎಲ್ಲಾ ಜನರು,**
**ಹಗಲಿರುಳು ಶ್ರಮಿಸಿದರು ಹಳೇ ವಿದ್ಯಾರ್ಥಿ ಬಳಗದವರು**
**ಸಾಕ್ಷಿಯಾದರು ಇಲಾಖಾ ಅಧಿಕಾರಿಗಳು, ಜನನಾಯಕರು**
**ಬನ್ನಿ ಎಲ್ಲರೂ ಎಳೆಯೋಣ ಶಿಕ್ಷಣದ ತೇರು.**



ಹೆಣ್ಣು ಮೋಕ್ಷಕ್ಕೆ ಅರ್ಹಳಲ್ಲ ಎಂಬ ಸಿದ್ಧಾಂತವನ್ನು ಧಿಕ್ಕರಿಸಿ ಮಾನಿನಿಯರ ಸ್ವತಂತ್ರ, ಸಮಾನತೆ, ಸ್ವಾಭಿಮಾನ, ಸ್ವಾವಲಂಬನೆಗೆ ನಾಂದಿ ಹಾಡಿದ, ಸ್ತ್ರೀ ಅಭಿವ್ಯಕ್ತಿ ಸ್ವಾತಂತ್ರ್ಯದ ಪ್ರಥಮ ಪ್ರತಿಪಾದಕಳಾದ ಧೀರೆ, ಕನ್ಯೆ, ಕನ್ನಡದ ಮೊದಲ ಕವಿಯಿತ್ರಿ ಶಿವಶರಣೆ ಅಕ್ಕಮಹಾದೇವಿಯ ಜನ್ಮಸ್ಥಳ ಹಾಗೂ ಶ್ರೀಗುರುರಾಯರ ಕೃಪೆಯಿಂದ ಪಾವನವಾದ ಶ್ರೀಕ್ಷೇತ್ರ ಉಡುತಡಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಉಡುಗಣಿಯಲ್ಲಿ 2019 – 2020 ರಲ್ಲಿ ಶತಮಾನೋತ್ಸವ ಸಂಭ್ರಮವನ್ನು ಅತ್ಯಂತ ಅದ್ದೂರಿಯಿಂದ ಆಚರಿಸಿದ್ದು ನಮ್ಮೆಲ್ಲರ ಹೆಮ್ಮೆಯ ಸಂಗತಿಯಾಗಿರುತ್ತದೆ.

ಇಂಥಹ ಐತಿಹಾಸಿಕ ಸ್ಥಳದಲ್ಲಿರುವ ಸುಂದರ ಶಾಲೆಯು ಕ್ರಿ.ಶ. **1875** ರಲ್ಲಿ ಪ್ರಾರಂಭಗೊಂಡು ಸುಮಾರು **144** ವರ್ಷದ ಭವ್ಯ ಇತಿಹಾಸವನ್ನು ಹೊಂದಿರುತ್ತದೆ. ಶಾಲೆಯು **ಪಾರಂಪರಿಕ ಶಾಲೆಯ** ಪಟ್ಟಿಗೆ ಸೇರಿರುವುದು ಹೆಮ್ಮೆಯ ಸಂಗತಿಯಾಗಿರುತ್ತದೆ. ಹಾಗೇಯೇ ಶಿಕಾರಿಪುರ ತಾಲ್ಲೂಕಿನಲ್ಲಿಯೇ ಅತಿ ಹೆಚ್ಚು ಮಕ್ಕಳನ್ನು ಹೊಂದಿರುವ ಶಾಲೆಗಳಲ್ಲಿ ಪ್ರಥಮ ಸ್ಥಾನದಲ್ಲಿದೆ.

**ಹಿನ್ನಲೆ**

ಈ ಶಾಲೆಯು **1875** ರಲ್ಲಿ ಕೇವಲ ಒಬ್ಬ ಶಿಕ್ಷಕರಿಂದ ಆರಂಭಗೊಂಡಿದ್ದು ಕೇವಲ ಒಂದು ಕಲ್ಲು ಕಂಬದ ಕೊಠಡಿಯನ್ನು ಒಳಗೊಂಡಂತೆ 10–20 ಮಕ್ಕಳನ್ನು ಒಳಗೊಂಡಿತ್ತು. ಪ್ರಸ್ತುತ 09 ಜನ ಶಿಕ್ಷಕರನ್ನು ಒಳಗೊಂಡು 09 ಕೊಠಡಿಗಳೊಂದಿಗೆ 243 ಮಕ್ಕಳನ್ನು ಹೊಂದಿರುವ ಶಾಲೆಯಾಗಿರುತ್ತದೆ. 2020–21 ನೇ ಸಾಲಿನಲ್ಲಿಯೂ ಸಹ ಅತಿ

ಹೆಚ್ಚು ದಾಖಲಾತಿಯನ್ನು ಹೊಂದಿರುವ ಶಾಲೆಯಾಗಿರುತ್ತದೆ.

**ಶತಮಾನೋತ್ಸವ ಆಚರಣೆ**

ವಿದ್ಯುತ್ ದೀಪಗಳ ಅಲಂಕಾರದಿಂದ ಮಧುವಣಗಿತ್ತಿಯಂತೆ ಸಿಂಗಾರಗೊಂಡು, ಗೋಡೆಗಳು ವರ್ಣಮಯ ಚಿತ್ರಗಳಿಂದ ಕಂಗೊಳಿಸುತ್ತಿದ್ದು. ಶಾಲೆಯು ದಿನಾಂಕ 29-12-2019 ರ ಭಾನುವಾರದಂದು ಪಾರಂಪರಿಕ ಶಾಲೆಯ ಶತಮಾನೋತ್ಸವ ಸಮಾರಂಭಕ್ಕೆ ಸಿದ್ಧವಾಗಿತ್ತು. ಮುಂಜಾನೆಯಿಂದಲೇ ಇಡೀ ಊರಿನಲ್ಲಿ ಹಬ್ಬದ ವಾತಾವರಣವಿತ್ತು. ತಳಿರು ತೋರಣ, ಬಣ್ಣ ಬಣ್ಣದ ರಂಗೋಲಿಗಳು ಎಲ್ಲರನ್ನೂ ಕೈಬೀಸಿ ಕರೆಯುತ್ತಿದ್ದವು.

ಶಾಲೆಯ ಮುಖ್ಯ ದ್ವಾರದಲ್ಲಿ ವರ್ಣರಂಜಿತವಾಗಿ ತಯಾರಾಗಿ ಮಕ್ಕಳು ಅತಿಥಿ ಗಣ್ಯರ ಸ್ವಾಗತಕ್ಕಾಗಿ ನಿಂತಿದ್ದು ಬಂದ ಅತಿಥಿಗಳನ್ನು ಪೂರ್ಣ ಗೌರವಗಳೊಂದಿಗೆ ಶಾಲೆಯೊಳಗೆ ಕರೆತಂದರು. ನಂತರ ಶಾಲೆಯಿಂದ ಸಭಾಭವನಕ್ಕೆ ಮೆರವಣಿಗೆ ವೈಭವಯುತವಾಗಿ ಸಾಗಿತ್ತು. ಬಂದ ಅತಿಥಿಗಳು, ಗಣ್ಯರು ಗುರುವೃಂದದವರನ್ನು ಬಾಲಕಿಯರ ಡೊಳ್ಳುಕುಣಿತ, ಪೂರ್ಣಕುಂಭ ಮೇಳ, ಕಂಸಾಳೆ ಮುಂತಾದ ಪಾರಂಪರಿಕ ಕಲಾತಂಡಗಳ ಮಧ್ಯೆ ಭವ್ಯವಾಗಿ ಕರೆದೊಯ್ಯಲಾಯಿತು.

ವೇದಿಕೆ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು. ಕಾರ್ಯಕ್ರಮದಲ್ಲಿ ಈ ಶಾಲೆಯಲ್ಲಿ ಸೇವೆಸಲ್ಲಿಸಿದ ಗುರುವೃಂದಕ್ಕೆ ಗುರುವಂದನೆಯ ಮೂಲಕ ಸನ್ಮಾನಿಸಿ ಗುರುನಮನ ಸಲ್ಲಿಸಲಾಯಿತು. ಈ ಶಾಲೆಯಲ್ಲಿ ಓದಿ, ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಿಗೆ ವಿಶೇಷವಾಗಿ ಸನ್ಮಾನಿಸಲಾಯಿತು.

ಈ ಕಾರ್ಯಕ್ರಮಕ್ಕೆ ನಮ್ಮ ಇಲಾಖಾ ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು, ಊರ ಹಿರಿಯರು ಸಂಪೂರ್ಣ ಸಹಕಾರ ನೀಡಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಅತ್ಯಂತ ವಿಜೃಂಭಣೆಯಿಂದ ಈ ಪಾರಂಪರಿಕ ಶಾಲೆಯ ಶತಮಾನೋತ್ಸವ ಕಾರ್ಯಕ್ರಮದ ಸಂಪೂರ್ಣ ಜವಾಬ್ದಾರಿಯನ್ನು ತನು, ಮನ, ಧನದ ಅರ್ಪಣೆಯಿಂದ ಹಳೆಯ ವಿದ್ಯಾರ್ಥಿಗಳ ಸಂಘವು ವಹಿಸಿಕೊಂಡು ಅತ್ಯಂತ ಅದ್ಭುತವಾಗಿ ನೆರವೇರಿಸಿಕೊಟ್ಟಿತು.

ಈ ಕಾರ್ಯಕ್ರಮಕ್ಕೆ ಇಡೀ ಊರಿನ ಸಮಸ್ತ ಜನಸಮೂಹ ಸಾಗರೋಪಾದಿಯಲ್ಲಿ ತಮ್ಮ ಬಂಧುಬಾಂಧವರೊಂದಿಗೆ ಆಗಮಿಸಿ ಕಾರ್ಯಕ್ರಮಕ್ಕೆ ಕಳೆಕಟ್ಟಿದರು. ನೆರೆದ ಸಮಸ್ತ ಜನಸಾಗರಕ್ಕೆ ಸಿಹಿ ಊಟದೊಂದಿಗೆ ಬೀಳ್ಕೊಡುಗೆ ನೀಡಲಾಯಿತು.

ಮಕ್ಕಳ ಮನರಂಜನೆ ಕಾರ್ಯಕ್ರಮವು ಅದ್ದೂರಿಯಾಗಿ ನಡೆದು ಜನ ಸಮುದಾಯದ ಕಣ್ಮನ ಸೆಳೆಯಿತು. ಐತಿಹಾಸಿಕ ಸ್ಥಳದಲ್ಲಿ ನಡೆದ ಈ ಪಾರಂಪರಿಕ ಶಾಲೆಯ ಶತಮಾನೋತ್ಸವ ಕಾರ್ಯಕ್ರಮ ಊರ ಸಮಸ್ತ ಜನರ ಮನದಲ್ಲಿ ಅಚ್ಚಳಿಯದೇ ಹಚ್ಚ ಹಸಿರಾಗಿ ಇಂದೂ ಸಹ ಉಳಿದಿದೆ.

**ಬಡ್ತಿ ಮುಖ್ಯೋಪಾಧ್ಯಾಯರು**
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ,
ಉಡುಗಣಿ, ಶಿಕಾರಿಪುರ ತಾ॥

# ಮಲೆನಾಡಿನ ಹಸೆ ಚಿತ್ತಾರ

ನಮ್ಮ ಗ್ರಾಮೀಣ ಜನರ ಜೀವನ ಪ್ರೀತಿ. ಜೀವನದ ಮೌಲ್ಯಗಳು, ಮಾದರಿಯ ಜೀವನ, ತಾವು ಬದುಕು ಕಟ್ಟಿಕೊಳ್ಳುತ್ತಾ ಸೂರ್ಯನ ಕಿರಣಗಳ ತರಹ ತಮ್ಮ ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಪ್ರತಿ ಹಂತದಲ್ಲಿ ಪ್ರಯತ್ನಿಸಿದ ರೀತಿ ಮಾದರಿಯಾಗಿದೆ. ಅದರಂತೆ ಮಲೆನಾಡಿನ ಹಳ್ಳಿಗಳ ಜನರು ಪ್ರಕೃತಿಯನ್ನು ಆರಾಧಿಸಿ, ಅವಲಂಬಿಸುವ ಪ್ರಕೃತಿ ಆರಾಧಕರು, ಪ್ರಕೃತಿಯ ನಡುವೆ ಕಲೆಯನ್ನು ಚಿತ್ರಕಲೆಯನ್ನು ಹುಟ್ಟುಹಾಕುವ ಮೋಡಿಗಾರರು, ನಮ್ಮ ಜನಪದೀಯರು.

ಜನಪದರು ತಮ್ಮ ಅನುಭವಕ್ಕೆ ಅನುಭೂತಿಗೆ ಜೀವ ಕೊಟ್ಟಿದ್ದು. ಭಾವನೆಗಳ ಬಣ್ಣ ತುಂಬಿದ್ದು. ಇಂತಹ ನಾಗರಿಕತೆಯ ಕಲೆಯ ಮೂಲಕ ಎಂಬುದನ್ನು ಮರೆಯುವ ಹಾಗಿಲ್ಲ. ಜನಪದರ ಬದುಕಿನ ಕಲಾಪರಂಪರೆಯು ಅವರ ಬದುಕಿನ ದಿಕ್ಸೂಚಿಯಾಗಿ ನಮಗೆ ಮಾದರಿಯ ಸಂಸ್ಕಾರವಂತಿಕೆಯನ್ನು ಬೋಧನೆ ಮಾಡುತ್ತದೆ. ಜನಪದರ ಮೂಲಪ್ರಜ್ಞೆಯು ವರ್ಣರೇಖಾ ಚಿತ್ರಗಳ ಮೂಲಕ ಒಡಮೂಡಿದ ಶ್ರೀಮಂತ ಕಲೆಯೇ ಜನಪದ ಚಿತ್ರಕಲೆ. ಈ ಕಲೆಯಲ್ಲಿ ಸೌಂದರ್ಯವೇ ಮೂಲವಾಗಿದೆ. ಈ ಜನಪದ ಚಿತ್ರಕಲೆಯನ್ನು ಸೌಂದರ್ಯ ಮೂಲ, ಪ್ರಯೋಜನ ಮೂಲ, ಮನರಂಜನೆಯ ಮೂಲ, ಧರ್ಮ ಮೂಲ, ಕರ್ಮ ಮೂಲ, ಸದುಪಯೋಗ ಮೂಲವೆಂದು ವರ್ಗೀಕರಿಸಬಹುದೇನೊ? ಇಂತಹ ಜನಪದ ಚಿತ್ರಕಲೆಯನ್ನು ಸಂಪನ್ನಗೊಳಿಸಿದ ಸಿಂಹಪಾಲು ಮಹಿಳೆಯರದ್ದೇ ಆಗಿದೆ. ಅಂತಹ ಹೆಸರಾಂತ ಜನಪದ ಚಿತ್ರಕಲೆಯಲ್ಲಿ ಒಂದಾದ ಹಸೆ ಚಿತ್ತಾರದ ಬಗ್ಗೆ ಒಂದು ಪಕ್ಷಿನೋಟ.

ಹಚ್ಚ ಹಸಿರಿನ ಪಚ್ಚೆ ಬಣ್ಣದಿಂದ ರಚಿಸಲಾದ ಚಿತ್ರ ಪ್ರಕಾರವೇ ಹಸೆ ಚಿತ್ತಾರ. ಪ್ರಕೃತಿಯ ನೈಜ ಬಣ್ಣಗಳಿಂದ ಬರೆದ ಶೃಂಗಾರದ ಬಂಗಾರದ ಕಲೆಯಾಗಿದೆ. ಮಲೆನಾಡಿನ ಶಿವಮೊಗ್ಗ ಜಿಲ್ಲೆಯ ಸಾಗರ, ಸೊರಬ, ಶಿಕಾರಿಪುರ, ಹೊಸನಗರ, ತೀರ್ಥಹಳ್ಳಿ, ತಾಲ್ಲೂಕುಗಳು ಹಾಗೂ ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಸಿದ್ಧಾಪುರ, ತಾಲ್ಲೂಕುಗಳಲ್ಲಿ ಹೆಚ್ಚಾಗಿ ಕಂಡುಬರುವ ವಿಶ್ವವ್ಯಾಪಿ ಕಲೆ ಹಸೆ ಚಿತ್ತಾರ. ಮಹಿಳೆಯೊಬ್ಬರು ತಮ್ಮ ಭಾವನೆಗಳ ರೇಖೆಗಳನ್ನು, ಮನದ ರೇಖೆಗಳನ್ನು ನೆಲದಲ್ಲಿ, ಗೋಡೆಯಲ್ಲಿ, ಭೂಮಣಿಬುಟ್ಟಿಯಲ್ಲಿ, ಚಾಪೆಯಲ್ಲಿ, ಮನೆಯ ಚಾವಡಿಯಲ್ಲಿ, ಸೀರೆಯ ದಾಟಿಯಲ್ಲಿ, ಬಾಗಿಲು ಮುಂಬಾಗದ ಅಂಚಿನಲ್ಲಿ, ಕಿಟಕಿಯ ಚೌಕಟ್ಟಿನ ಸುತ್ತಾ, ಅಡುಗೆ ಮಾಡುವ ಒಲೆಯ ಸುತ್ತ, ಕೈಗಳ ತೋಳುಗಳಲ್ಲಿ, ಶಿರಸಿಯ ಶ್ರೀ ಮಾರಿಕಾಂಬಾ ದೇವಾಲಯದ ಸುತ್ತಾ, ಈ ಹಸೆ ಚಿತ್ತಾರದ ವಿಸ್ತಾರ ರೂಪವನ್ನು ನೋಡಬಹುದು. ಕೈಯಲ್ಲಿ ಬರೆಸಿಕೊಂಡರೆ ಹಚ್ಚೆ, ಗೋಡೆಯಲ್ಲಿ ಬರೆದರೇ ಹಸೆ, ಬಾಗಿಲಿನಲ್ಲಿ, ಕಿಟಕಿಯಲ್ಲಿ ಬರೆದರೆ ಕೊಡೆ ಚಿತ್ತಾರ, ಸೀತೆ ಸೆರಗು, ಗೌರಿ ಮಂಟಪಕ್ಕೆ, ನೀರು ಇಡುವ ಚೌಕಟ್ಟಿಗೆ ಬರೆದರೆ ಗೌರಿ ಗದ್ದುಗೆ, ಕಂತ್ಲೆ ತುಂಬುವುದು. ಬುಟ್ಟಿಗಳಲ್ಲಿ ಬರೆದರೆ ಭೂಮಣಿ ಬುಟ್ಟಿಯ ಚಿತ್ತಾರ ಹೀಗೆ ವಿವಿಧ ರೂಪಗಳನ್ನು ಹಸೆ ಚಿತ್ತಾರ ಪಡೆದುಕೊಂಡಿದೆ.

ಹಸೆ ಚಿತ್ತಾರವನ್ನು ಹಿಂದೆ ಹಳ್ಳಿಯ ಮಹಿಳೆಯರು ಶುಭ ಸಂಕೇತವಾಗಿ ಶುಭ ಸಮಾರಂಭಗಳಲ್ಲಿ ಬರೆಯುತ್ತಿದ್ದರು. ಮದುವೆ, ಗೋಪೂಜೆ, ಭೂಹುಣ್ಣಿಮೆ ಹಬ್ಬದ ಭೂಮಣಿಬುಟ್ಟಿ ಶೃಂಗಾರ, ಹೊಸಮನೆಯ ಗೃಹಪ್ರವೇಶದ ವೇಳೆ, ಜಾತ್ರೆಗಳ ಸಮಯದಲ್ಲಿ ಯುಗಾದಿ, ದೀಪಾವಳಿ, ಚೌತಿ ಹಬ್ಬಗಳಲ್ಲಿ. ಸೂಕ್ತ ಮುಹೂರ್ತ ನೋಡಿ ಗೆರೆ ತೆಗೆದು ದೇವರಿಗೆ ದೀಪ ಹಚ್ಚಿ. ಈ ಚಿತ್ರ ಬರೆಯುವ ಚಿತ್ರಕಲಾವಿದೆ ಮಹಿಳೆಯರಿಗೆ ಮಡಲಕ್ಕಿ ಹಾಕಿ ಉಡಿತುಂಬಿ ನಂತರ ಈ ಚಿತ್ತಾರವನ್ನು ಬರೆಯಲು ಆರಂಭಿಸುತ್ತಿದ್ದರು. ಈ ಹಸೆ ಚಿತ್ತಾರ ಶುಭ ಸಂಕೇತವಾಗಿರುತ್ತಿತ್ತು ಮತ್ತು ಜನಪದರ ಉನ್ನತವಾದ ಸಂಪ್ರದಾಯದ ಒಂದು ಭಾಗವಾಗಿತ್ತು. ಮಲೆನಾಡಿನ ಜನಪದರು ಅಲಂಕಾರ ಪ್ರಿಯರಾದ್ದರಿಂದ ಈ ಕಲೆಯನ್ನು ಇಂದಿಗೂ ಪೋಷಿಸಿಕೊಂಡು ಬಂದಿರುವುದು ದಾಖಲಿಸಬಹುದಾದ ಸಂಗತಿಯಾಗಿದೆ.

**ಮಲೆನಾಡಿನ ಹಸೆ ಚಿತ್ತಾರವನ್ನು 3 ಪ್ರಕಾರವಾಗಿ ವಿಂಗಡಿಸಬಹುದಾಗಿದೆ.**

1. ಮದುವೆ ಮನೆಗಳಲ್ಲಿ ಬರೆಯುವ ಹಸೆ ಗೋಡೆ ಚಿತ್ತಾರಗಳು.
2. ಮನೆಯ ಅಲಂಕಾರಕ್ಕೆ ಬರೆಯುವ ಗೋಡೆ ಚಿತ್ತಾರಗಳು.
3. ಹಬ್ಬ ಶುಭ ಕಾರ್ಯಗಳಲ್ಲಿ ಬರೆಯುವ ನೆಲ, ಬುಟ್ಟಿ, ಚಾಪೆ, ವಸ್ತು ಚಿತ್ತಾರಗಳು.

**ಈ ಹಸೆ ಚಿತ್ತಾರವನ್ನು ಪ್ರಕೃತಿಯ ಪ್ರಸಿದ್ಧ ಮೂಲ ಬಣ್ಣಗಳಾದ ಬಿಳಿ, ಕೆಂಪು, ಕಪ್ಪು ಬಣ್ಣಗಳಿಂದ**

1. ಬಿಳಿ ಹಸೆ.
2. ಕೆಂಪು ಹಸೆ.
3. ಕಪ್ಪು ಹಸೆ ಎಂದು ವಿಭಾಗಿಸಿ ಬರೆಯುತ್ತಿದ್ದರು.

**ಬಿಳಿ ಹಸೆ**

ಬಿಳಿ ಹಸೆಯನ್ನು ಬರೆಯುವವರು ಮೊದಲು ನೆರೆಗುಳಿ, ಹೊನಸು, ಸೊಮಸಾಳೆ, ಹಳೆಯ ಅಥವಾ ಈಗಿರುವ ಭತ್ತದ ತಳಿಯ ಯಾವುದಾದರೂ ಒಂದು ಭತ್ತದ ತಳಿಯ ಭತ್ತವನ್ನು ತೆಗೆದು ಅದನ್ನು ಕುಟ್ಟಿ (ಈಗ ಮಿಲ್‌ಗಳಲ್ಲಿ) ಅಕ್ಕಿ ಮಾಡಿ ಅಕ್ಕಿಯನ್ನು ಚೆನ್ನಾಗಿ ತೊಳೆದು ಮೂರ್‍ನಾಲ್ಕು ದಿವಸ ನೆನೆಸಿ ಅದನ್ನು ನುಣ್ಣಗೆ ಅರೆದು ಅಕ್ಕಿ ಹಿಟ್ಟಿನ ಬಿಳಿ ಬಣ್ಣವನ್ನು ತಯಾರು ಮಾಡಿಕೊಳ್ಳುತ್ತಾರೆ. ಇದನ್ನು ಬರೆಯಲು ಪುಂಡಿನಾರಿನ, ಸೆಣಬಿನ ದಾರದ ಕೈಕುಂಚ ಮಾಡಿಕೊಂಡು ಬಣ್ಣ ಮತ್ತು ಕುಂಚ ತಯಾರು ಮಾಡಿಕೊಳ್ಳುತ್ತಾರೆ. ನಂತರ ಗೋಡೆಯನ್ನು ಕೆಮ್ಮಣ್ಣಿನಿಂದ ಸುಂದರವಾಗಿ ಅಲಂಕಾರಗೊಳಿಸುತ್ತಾರೆ. ತದನಂತರ ಜನಪದ ಸಂಪ್ರದಾಯದ ಹಾಡು ಹೇಳುತ್ತಾ ಸೋದರತ್ತೆ ಬಂದು ಗೆರೆ ತಗೆದ ನಂತರ ಹಸೆ ಚಿತ್ತಾರ ಆರಂಭಿಸುತ್ತಾರೆ. ಕೆಮ್ಮಣ್ಣಿನ ಮೇಲೆ ಅಕ್ಕಿಹಿಟ್ಟಿನ ಬಿಳಿ ಬಣ್ಣ ಬರೆದಾಗ ಎದ್ದುಕಾಣುತ್ತದೆ. ಈ ಬಿಳಿ ಹಸೆಯನ್ನು ಮಲೆನಾಡಿನ ಸಾಗರ, ಸೊರಬ, ಶಿಕಾರಿಪುರ, ಹೊಸನಗರ, ತೀರ್ಥಹಳ್ಳಿಗಳ ಕೆಲವು ಸೀಮೆಗಳಲ್ಲಿ ಕಾಣಬಹುದು.

**ಕಪ್ಪು ಹಸೆ**


ನಮ್ಮ ಪೂರ್ವಜ ಜನಪದರ ಬಣ್ಣಗಳ ಕಲ್ಪನೆ ನಮಗಿಂತಲೂ ಮಾದರಿ ಮತ್ತು ಮೇರುವಾಗಿದೆ. ಈ ಕಪ್ಪು ಹಸೆಗೆ ಮೊದಲು ವಿವಿಧ ಜಾತಿಯ ಭತ್ತವನ್ನು ಅಕ್ಕಿ ಮಾಡಿಸಿ ಆ ಅಕ್ಕಿಯನ್ನು ತಗೆದುಕೊಂಡು ಅದನ್ನು ಹದವಾಗಿ ಕಪ್ಪು ಬಣ್ಣವಾಗುವಂತೆ ಹುರಿದು ಅದಕ್ಕೆ ಗೇರು ಬೀಜವನ್ನು ಸುಟ್ಟು ಅಥವಾ ಹಗಣವನ್ನು ಸೇರಿಸಿ ಹದವಾಗಿ ರುಬ್ಬಿ ಅಂಟುಮಾಡಿ ಬಣ್ಣವಾಗಿ ತಯಾರಿಸುತ್ತಾರೆ. ಈ ಬಣ್ಣ ತಯಾರಾದ ಮೇಲೆ ಜೇಡಿ ಮಣ್ಣಿನಿಂದ ಗೋಡೆಯನ್ನು ಶೃಂಗಾರಗೊಳಿಸಿ ಹಸೆಯನ್ನು ಬರೆಯುತ್ತಾರೆ. ಈ ತರದ ಹಸೆಯನ್ನು ಉತ್ತರಕನ್ನಡ ಮತ್ತು ಕೆಳದಿ ಸೀಮೆಯ ಭಾಗಗಳಲ್ಲಿ ನೋಡಬಹುದು.


**ಕೆಂಪು ಹಸೆ**

ಕೆಮ್ಮಣ್ಣಿನಿಂದ ಬಣ್ಣ ತಯಾರಿಸಿ ಜೇಡಿ ಮಣ್ಣಿನಿಂದ ಗೋಡೆಯನ್ನು ಶೃಂಗಾರಮಾಡಿ ಬರೆಯುವ ಹಸೆಯಾಗಿದೆ. ಇದು ಮಲೆನಾಡಿನ ಕೆಲವು ಭಾಗಗಳಲ್ಲಿ ಕಂಡುಬರುತ್ತದೆ.

**ಭೂಮಣಿ ಬುಟ್ಟಿ ಚಿತ್ತಾರ**

ಭೂಮಿಹುಣ್ಣಿಮೆ ಹಬ್ಬಕ್ಕೆ ಮೊದಲು ಬಿದಿರಿನಿಂದ ನೇಯ್ದ ಸುಂದರವಾದ ಎರಡು ಭೂಮಣಿ ಬುಟ್ಟಿಯನ್ನು ತೆಗೆದುಕೊಂಡು ಹದಮಾಡಿ ನೀರಿನಲ್ಲಿ ನೆನೆಸಿ, ನಂತರ ತೆಗೆದು ಈ ಬುಟ್ಟಿಗೆ ಕೆಮ್ಮಣ್ಣಿನಿಂದ ಸುತ್ತಾ ಬಳಿದು ಸುಂದರವಾಗಿ ತೀಡಿ ನಯಗೊಳಿಸಿ ಒಣಗಿಸುತ್ತಾರೆ. ನಂತರ ಭೂಮಣಿ ಹಬ್ಬ ಇರುವ 7 ದಿನದ ಹಿಂದೆ ಅಕ್ಕಿ ಹಿಟ್ಟಿನ ಬಣ್ಣದಿಂದ ಸುಂದರವಾದ ಚಿತ್ತಾರವನ್ನು ಬರೆಯಲು ಆರಂಭಿಸಿ ಭೂಮಿಹುಣ್ಣಿಮೆಯೆಂದು ಭೂತಾಯಿಗೆ ಎಡೆಯನ್ನು ಈ ಬುಟ್ಟಿಯಲ್ಲಿ ಮನೆಯ ಯಜಮಾನ ಹೊತ್ತು ಹೋಗಿ ಭೂತಾಯಿಯ ಬಯಕೆಯನ್ನು ಪೂರೈಸುತ್ತಾನೆ.





ಈ ಹಸೆ ಚಿತ್ತಾರ ಮಹಾರಾಷ್ಟ್ರದ ವರ್ಲಿ ಕಲೆಯನ್ನು, ಬಿಹಾರದ ಮಧುಬನಿ ಕಲೆಗಳ ಸಾಮ್ಯತೆ ಕಂಡು ಬಂದರೂ ಬಹಳ ಭಿನ್ನವಾಗಿದೆ. ಇದು ವರ್ಲಿ ಕಲೆಯಂತೆ ಬಿಂಬಿತವಾದರೂ ಮಲೆನಾಡಿನ ಅಪ್ಪಟ ಜನಪದರ ಚಿತ್ತಾರ ಕಲೆಯಾಗಿದೆ. ಹೀಗೆ ಚಿತ್ತಾರಕಲೆಯಾಗಿ ಬಿಂಬಿತವಾಗಬೇಕೆಂಬುದು ನನ್ನ ಅಭಿಮತವಾಗಿದೆ.

ಇಂದು ಈ ಹಸೆ ಚಿತ್ತಾರ ಕಲೆ ಸಂಪ್ರದಾಯದ ಚೌಕಟ್ಟನ್ನು ಮೀರಿ ವಿಶ್ವವ್ಯಾಪಿಯಾಗಿ, ಸರ್ಕಾರಿ ಕಟ್ಟಡಗಳಲ್ಲಿ ನಮ್ಮ ಶಿವಮೊಗ್ಗದ ಉಪನಿರ್ದೇಶಕರ ಕಚೇರಿಯಲ್ಲಿ ರಂಜನೀಯವಾಗಿ ವರ್ಣಿಸಲಾಗಿದೆ. ಬಸ್ಸು ನಿಲ್ದಾಣಗಳಲ್ಲಿ, ಕೆಲವು ಧಾರ್ಮಿಕ ಸ್ಥಳಗಳಲ್ಲಿ, ಬಟ್ಟೆಗಳಲ್ಲಿ, ಮನೆಯ ಅಲಂಕಾರಗಳಲ್ಲಿ ಆಧುನಿಕ ಬಣ್ಣಗಳ ಜೊತೆಗೆ ಸೇರಿ ಹೊಸತನದೊಂದಿಗೆ  ಚಿತ್ರಕಲಾವಿದರ ಕುಂಚ ಸೇರಿದೆ.

ಮಲೆನಾಡಿನ ಈ ಚಿತ್ತಾರ ಕಲೆಯನ್ನು ಇಂದಿಗೂ ಹಳ್ಳಿಯ ಜನಪದೀಯರು ಉಳಿಸಿಕೊಂಡು ಬಂದಿದ್ದಾರೆ. ಈ ಕಲೆಯನ್ನು ಗ್ರಾಮೀಣ ಶಾಲೆಗಳಲ್ಲಿ ಅಭಿಯಾನದ ರೂಪದಲ್ಲಿ ಅಲಂಕಾರಕ್ಕಾಗಿ ಬಿಡಿಸಿ ಶೃಂಗಾರಗೊಳಿಸಿರು ನೋಡಬಹುದು. ಈ ಚಿತ್ತಾರ ಕಲೆಯಲ್ಲಿ ಪ್ರಕೃತಿ, ಸೂರ್ಯ, ಚಂದ್ರ, ನಕ್ಷತ್ರ, ಗುಡ್ಡ, ನದಿ, ಹಕ್ಕಿ, ಮೃಗ, ಮದುಮಕ್ಕಳು ಜೋಡಿಗೆರೆ. ಒಂಟಿಗೆರೆ, ವೃತ್ತಗಳು ಹೀಗೆ ನಮ್ಮ ಸುತ್ತಲಿನ ಪರಿಸರದ ಸರಳ ವಸ್ತುವನ್ನು ಮಾದರಿಯಾಗಿಟ್ಟುಕೊಂಡು ಸುಂದರವಾಗಿ ಚಿತ್ರಿಸುವ ನಮ್ಮ ಜನಪದೀಯರನ್ನು ಗೌರವಿಸಿ ಮರೆಯಾಗುತ್ತಿರುವ ಈ ಕಲೆಗೆ ಹೊಸ ರೂಪಾಂತರವನ್ನು ನೀಡಿ ಮುಂದಿನ ಪೀಳಿಗೆಗೆ ರವಾನೆ ಮಾಡುವ ಕಾರ್ಯ ನಮ್ಮ ನಿಮ್ಮ ಕೈಯಲ್ಲಿದೆ. ಸಂಸ್ಕೃತಿಗಳು ಒಂದು ಆಕೃತಿಯಾಗಿ, ತಲತಲಾಂತರದಿಂದ ಬಳುವಳಿಯಾಗಿ ಬಂದ ಈ ಕಲೆ ಶ್ರೇಷ್ಠ ಕಲೆಯಾಗಿ ದಾಖಲಾಗಬೇಕು. ಹಬ್ಬಗಳ ಶುಭಕಾರ್ಯಗಳ ಜೊತೆಗೆ ಚಿತ್ರಕಲೆಯ ಮಜಲೊಂದು ತನ್ನ ಹೆಜ್ಜೆಯನ್ನು ದಾಖಲಿಸುತ್ತಾ ಇಂದಿಗೂ ಉಳಿದುಕೊಂಡು ಬಂದಿದೆ ಎಂದರೆ ಇದೊಂದು ಅಮರ ಕಲೆಯಾಗಿದೆ. ರೈತಕಲೆಯಾಗಿ ಇದು ಕಲಾವಿದರ ಜೀವನದ ಕಲೆಯಾಗಿ ಮಾರ್ಪಟ್ಟಿದೆ.

**ಚಂದ್ರಪ್ಪ ಅಳೂರು,** ಶಿಕ್ಷಕರು,
ಸ.ಹಿ.ಪ್ರಾ.ಶಾಲೆ ಹಾಳಸಸಿ, ಸಾಗರ ತಾಲ್ಲೂಕು

# ಜಿಲ್ಲೆಯ ಐತಿಹಾಸಿಕ ಸ್ಥಳಗಳ ಪರಿಚಯ

## ವೆಂಕಿಪುರ ಕ್ಷೇತ್ರಪಾಲಕ ಶ್ರೀ ಲಕ್ಷ್ಮೀನರಸಿಂಹಸ್ವಾಮಿ

ಭದ್ರಾವತಿಯು ಅನೇಕ ಪ್ರಥಮಗಳನ್ನು ಹೊಂದಿರುವ ಊರು, ಬಹು ಸಂಸ್ಕೃತಿ ಹೊಂದಿರುವ ಜನರ ಬೀಡಾಗಿದೆ. ಇಲ್ಲಿರುವ **ಶ್ರೀ ಲಕ್ಷ್ಮೀನರಸಿಂಹಸ್ವಾಮಿ** ದೇವಸ್ಥಾನವು ಎಲ್ಲರೂ ಒಮ್ಮೆ ಭೇಟಿ ಮಾಡಿ ನೋಡಬಹುದಾಗಿರುವ ಒಂದು ಸ್ಥಳವಾಗಿದೆ. ಇದು ಇತಿಹಾಸ ಪ್ರಸಿದ್ಧಿ ಹೊಂದಿರುವ ದೇವಾಲಯವಾಗಿದ್ದು. ಎಲ್ಲ ದೇವಾಲಯಗಳಿಗೂ ಇರುವಂತೆ ಈ ದೇಗುಲಕ್ಕೂ ಪುರಾಣದ ಹಿನ್ನೆಲೆ ಇದೆ.

ಯಾವುದೇ ಊರಿಗೆ ಆ ಸ್ಥಳದ ಮಹಾತ್ಮೆಯಿಂದಾಗಿ ಊರಿನ ಹೆಸರು ಬಂದಿರುವುದನ್ನು ನಾವು ಗುರುತಿಸುತ್ತೇವೆ. ಹಾಗೆಯೆ ಇಲ್ಲಿ ಭದ್ರಾನದಿಯು ಪಶ್ಚಿಮವಾಹಿನಿಯಾಗಿ ಹರಿಯುತ್ತಿದ್ದು ವೆಂಕಿ ಎಂಬ ಮಹರ್ಷಿ ಇಲ್ಲಿ ತಪಸ್ಸು ಮಾಡಿ ಶ್ರೀ ಲಕ್ಷ್ಮೀನರಸಿಂಹನನ್ನು ಒಲಿಸಿಕೊಂಡನು. ಒಮ್ಮೆ ಈ ಸ್ಥಳಕ್ಕೆ ಒಬ್ಬ ದೊಡ್ಡ ವ್ಯಾಪಾರಿ ನಷ್ಟವನ್ನು ಹೊಂದಿ ಸಂಸಾರ ಸಮೇತನಾಗಿ ಬಂದು ಈ ಸ್ವಾಮಿಯನ್ನು ಪ್ರಾರ್ಥನೆ ಮಾಡಿಕೊಂಡನು. ಅವನ ಭಕ್ತಿಯ ಪ್ರಾರ್ಥನೆಗೆ ಸ್ವಾಮಿ ನರಸಿಂಹನು ದಯೆತೋರಿ ಕಷ್ಟವೆಲ್ಲ ದೂರವಾಗಿ ದೊಡ್ಡ ವ್ಯಾಪಾರಿಯಾದನು. ಮಹಾಶಕ್ತಿಯನ್ನು ಹೊಂದಿದ ಈ ಸ್ಥಳದಲ್ಲಿ ಆ ವ್ಯಾಪಾರಿಯು ಶ್ರೀ ಲಕ್ಷ್ಮೀನರಸಿಂಹ ಸ್ವಾಮಿಯ ಪ್ರತಿಷ್ಠಾಪನೆ ಮಾಡಿಸಿದನೆಂಬುದು ಇಲ್ಲಿನ ಪುರಾಣ ಐತಿಹ್ಯವಾಗಿದೆ.

ಇಲ್ಲಿ **'ವೆಂಕಿ'** ಮಹರ್ಷಿಯ ತನ್ನ ತಪಶಕ್ತಿಯಿಂದ ಸಾಕ್ಷಾತ್ ಭಗವಂತನ ದರ್ಶನ ಪಡೆದ ಈ ಸ್ಥಳ ವೆಂಕಿಪುರವಾಯಿತೆಂದು, ಇದಕ್ಕೆ ಪುಷ್ಟೀಕರಿಸುವಂತೆ ವೆಂಕಿ ಮಹಿರ್ಷಿಯು ತಪಸ್ಸನ್ನು ಪಕ್ಕದ ಹೊನ್ನಟ್ಟಿ ಬೆಟ್ಟದಲ್ಲಿ ಮಾಡುತ್ತಿದ್ದ ಸಂದರ್ಭದಲ್ಲಿ, ಭದ್ರಾನದಿ ಪ್ರವಾಹದಿಂದ ಉಕ್ಕಿ ಬರುತ್ತಿದ್ದು ಅದನ್ನು ವೆಂಕಿ ಮಹರ್ಷಿಗಳು ತಮ್ಮ ತಪಶಕ್ತಿಯಿಂದ ಪ್ರವಾಹದ ದಿಕ್ಕನ್ನು ಬದಲಿಸಿದರು. ಇಲ್ಲಿ ಪಶ್ಚಿಮವಾಹಿನಿಯಾಗಿ ಹರಿಯುತ್ತಿರುವ ಭದ್ರಾನದಿ ತನ್ನ ದಿಕ್ಕನ್ನು ಬದಲಿಸಿಕೊಂಡು ವೆಂಕಿಯ (ಕುಂಬದ) ಆಕಾರದಲ್ಲಿ ಸುತ್ತಿಕೊಂಡು ಹರಿದು ಮುಂದೆ ಸಾಗಿ ಹೋಗಿರುತ್ತದೆ. ಹಾಗಾಗಿ ಈ ಊರನ್ನು ವೆಂಕಿಪುರವೆಂದು ಕರೆಯಲಾಗುತ್ತಿತ್ತು. ಇಲ್ಲಿ ಕುಲುಮೆಯ ಕೆಲಸಗಳು ಹೆಚ್ಚಾಗಿದ್ದುದ್ದರಿಂದ ವೆಂಕಿಪುರವೆಂದು, ಭದ್ರಾನದಿಯ ದಂಡೆಯ ಮೇಲಿರುವುದರಿಂದ ಇದನ್ನು ಭದ್ರಾಪುರ, ಭದ್ರಾಪುರಿ ಭದ್ರಾವತಿ ಎಂದು ಕರೆಯುತ್ತಿದ್ದರು ಎಂಬುದಾಗಿ ತಿಳಿದು ಬರುತ್ತದೆ.

ಈ ದೇವಾಲಯದ ಮಾಹಿತಿ ತಿಳಿಯುವಾಗ ಪುರಾಣ ಐತಿಹ್ಯದ ಜೊತೆಗೆ ಅಥವಾ ಅದಕ್ಕಿಂತ ಮುಖ್ಯವಾಗಿ ಇದರ ಐತಿಹಾಸಿಕ ಮಾಹಿತಿಗಳು ನಮಗೆ ಬಹುಮುಖ್ಯ ಸಂಗತಿಗಳಾಗುತ್ತವೆ. ಇದೊಂದು ಆಗಮೋಕ್ತ ದೇವಾಲಯವಾಗಿದ್ದು ಈ ದೇವಾಲಯಕ್ಕೆ ಸಂಬಂಧಿಸಿದ ಐತಿಹಾಸಿಕ ಆಧಾರಗಳು ಲಭ್ಯವಾಗುತ್ತವೆ, ನಮಗೆ ದೊರೆತಿರುವ ಪುರಾವೆಗಳ ಪ್ರಕಾರ ಈ ದೇವಾಲಯವು ಹೊಯ್ಸಳರ ಕಾಲದಲ್ಲಿ ನಿರ್ಮಾಣವಾಗಿದೆ. ಹೊಯ್ಸಳರ ಪ್ರಸಿದ್ಧದೊರೆ ವಿಷ್ಣುವರ್ಧನನ ಮೊಮ್ಮಗ 3ನೇ ವೀರ ಬಲ್ಲಾಳನು ಕಟ್ಟಿಸಿದ್ದಾನೆಂದು ಇತಿಹಾಸ ತಿಳಿಸುತ್ತದೆ. ವೀರಬಲ್ಲಾಳನ ಆಡಳಿತಾವಧಿಯಲ್ಲಿ ಭದ್ರಾವತಿಯು ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿದ್ದು, ಲಕ್ಷ್ಮೀನರಸಿಂಹ ಸ್ವಾಮಿಯ ಕೃಪೆಯಿಂದ ರಾಜ್ಯಾಡಳಿತವು ಸುಸೂತ್ರವಾಗಿ ಸಾಗಿದ್ದರಿಂದ 1226ರಲ್ಲಿ ವೇನಾಮ ಸಂವತ್ಸರದಲ್ಲಿ ಈ ದೇವಾಲಯವನ್ನು ಕಟ್ಟಿಸಿದರು, ಹಾಗಾಗಿ ಈಗಲೂ ಈ ದೇವಾಲಯವನ್ನು "13ನೇ ಶತಮಾನದ ಹೊಯ್ಸಳ ದೇವಾಲಯ ವೆಂಕಿಪುರ" ಎಂದು ಕರೆಯಲಾಗುತ್ತಿದೆ.

ಈ ದೇವಾಲಯದ ನಿರ್ಮಾಣ ಕಾರ್ಯ್ಯವು ನೂರು ವರ್ಷಗಳಿಗಿಂತ ಹೆಚ್ಚಾಗಿದ್ದು ಖ್ಯಾತಶಿಲ್ಪಿ ಜಕಣಾಚಾರಿಯ ಶಿಷ್ಯಂದಿರು ನಿರ್ಮಿಸಿದರು ಎಂದು ತಿಳಿದು ಬರುತ್ತದೆ. ಮಬಾ ಎಂಬ ಜಕಣಾಚಾರಿಯ ಶಿಷ್ಯನ ಹೆಸರು ದೇವಸ್ಥಾನದ ಹಿಂಭಾಗದ ಹಲವು ಶಿಲ್ಪಗಳ ಕೆಳಗೆ ಕೆತ್ತಲ್ಪಟ್ಟಿರುವುದು ಕಂಡುಬರುತ್ತದೆ. ಈ ದೇವಾಲಯವು ಹೊಯ್ಸಳ ಕಾಲದ ನಕ್ಷತ್ರಾಕಾರದಲ್ಲಿ ತ್ರಿಕೂಟಾಚಲ ಮಂಟಪದ ಮೇಲೆ ನಿರ್ಮಾಣವಾಗಿದೆ.

ಮತ್ತೊಂದು ಐತಿಹ್ಯದ ಪ್ರಕಾರ ಈ ಭಾಗದ ಸುತ್ತಮುತ್ತ ಅನೇಕ ಪಾಳೇಗಾರರು ಆಳ್ವಿಕೆ ನಡೆಸುತ್ತಿದ್ದು ಅವರೆಲ್ಲರೂ ಶ್ರೀ ಲಕ್ಷ್ಮೀನರಸಿಂಹಸ್ವಾಮಿಯ ಆರಾಧಕರಾಗಿದ್ದರು. ಪಾಳೇಗಾರ ಎರೇಹಕ್ಕನಾಯಕನು ಶ್ರೀ ಲಕ್ಷ್ಮೀನರಸಿಂಹಸ್ವಾಮಿಯನ್ನು ಅತ್ಯಂತ ನಿಷ್ಠೆಯಿಂದ ಆರಾಧನೆ ಮಾಡುತ್ತಿದ್ದನು. ಭದ್ರಾವತಿಯ ಸುತ್ತಮುತ್ತಲಿನ ಪಾಳೇಗಾರರು ಇಲ್ಲಿಗೆ ಬಂದು ತಮಗೆ ಬೇಕಾದ ಆಯುಧಗಳನ್ನು ಸಿದ್ಧಮಾಡಿಸಿಕೊಂಡು ಸ್ವಾಮಿಗೆ ಪೂಜೆಸಲ್ಲಿಸಿ ಹೋಗುತ್ತಿದ್ದರು ಎಂಬುದಾಗಿ ತಿಳಿದು ಬರುತ್ತದೆ. ಈ ಹಿನ್ನಲೆಯಲ್ಲಿ ಈ ಊರು ಬೆಂಕಿಪುರವೆಂದು ಕರೆಯಲ್ಪಡುತ್ತಿತ್ತು. ಇಲ್ಲಿ ಭದ್ರಾನದಿ ಪಶ್ಚಿಮವಾಹಿನಿಯಾಗಿ ಹರಿಯುತ್ತಿದ್ದು ಭದ್ರಾನದಿ ದಂಡೆಯ ಮೇಲಿರುವ ಕಾರಣ ಈ ಊರಿಗೆ ಭದ್ರಾವತಿ ಎಂದು ಹೆಸರು ಬಂದಿರುತ್ತದೆ. ಈ ಊರಿನಲ್ಲಿ ಶ್ರೀ ಲಕ್ಷ್ಮೀನರಸಿಂಹಸ್ವಾಮಿಯೇ ಕ್ಷೇತ್ರಪಾಲಕನಾಗಿದ್ದಾನೆಂದು ಐತಿಹ್ಯಗಳಿಂದ ನಮಗೆ ತಿಳಿದುಬರುತ್ತದೆ.



ಇಲ್ಲಿ ದೊರೆಯುವ 64 ಸಾಲಿನ ಹಳಗನ್ನಡ ನಿಲುಗಂಭ ಶಾಸನವು 1220ರ ಕಾಲಘಟ್ಟದ್ದಾಗಿದ್ದು, ಇದು ಭದ್ರಾವತಿಯ ಮತ್ತು ಲಕ್ಷ್ಮೀನರಸಿಂಹಸ್ವಾಮಿ ದೇವರ ಇತಿಹಾಸವನ್ನು ತಿಳಿಯಲು ಮಹತ್ವದ ಆಧಾರವಾಗಿದೆ. ಈ ಶಾಸನದಲ್ಲಿ ವೇನಾಮ ಸಂವತ್ಸರದಲ್ಲಿ ಭಕ್ತರು ದೇವಾಲಯದ ಜೀರ್ಣೋದ್ಧಾರಕ್ಕೆ ದಾನದತ್ತಿ ನೀಡಿರುವ ಬಗೆಯನ್ನು ತಿಳಿಸುತ್ತದೆ. ಬಾಬಳ್ಳಿ, ದೇವರ ನರಸೀಪುರ, ದೇವರಹಳ್ಳಿ, ಕೊವಮ್ಮಾರನಹಳ್ಳಿ, ಪದ್ಮೇನಹಳ್ಳಿ, ಲಕ್ಷ್ಮೀಪುರ ಮುಂತಾದ ಕಡೆಗಳಲ್ಲಿ ಜಮೀನು ಇರುವುದಾಗಿ ತಿಳಿದುಬರುತ್ತದೆ.

ಸಾಮಾನ್ಯವಾಗಿ ಯಾವುದೇ ದೇವಾಲಯದ ರಚನೆ ಐದು ಪ್ರಾಂಗಣಗಳನ್ನು ಹೊಂದಿರುತ್ತದೆ. ಆದರೆ ಈ ದೇವಾಲಯದ ರಚನೆ ತ್ರಿಕೂಟಾಚಲ ರಚನೆಯನ್ನು ಹೊಂದಿದೆ. ತ್ರಿಕೂಟಾಚಲ ದೇವಾಲಯ ಎಂದರೆ ಮೂರು ಪ್ರಾಂಗಣಗಳನ್ನು ಹೊಂದಿರುವುದು ಈ ರೀತಿಯ ದೇಗುಲ ಭದ್ರಾವತಿ ಬಿಟ್ಟರೆ 'ಅರಳುಗುಪ್ಪೆ' ಎಂಬಲ್ಲಿ ಮಾತ್ರ ಕಂಡುಬರುತ್ತದೆ. ಈ ದೇವಾಲಯವು ಮೂರು ಪ್ರಾಂಗಣ ಹೊಂದಿದ್ದು ಎಡಭಾಗದಲ್ಲಿ ವೇಣುಗೋಪಾಲ, ಬಲಭಾಗದಲ್ಲಿ ಪುರುಷೋತ್ತಮ, ಮಧ್ಯದಲ್ಲಿ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವರುಗಳ ಪ್ರತಿಷ್ಠಾಪನೆ ಮಾಡಲಾಗಿದೆ. ಈ ವಿನ್ಯಾಸವೇ ತ್ರಿಕೂಟಾಚಲ ವಿನ್ಯಾಸ. ಈ ದೇಗುಲದ ನಿರ್ಮಾಣಕ್ಕೆ ಬಳಪದ ಕಲ್ಲುಗಳನ್ನು ಬಳಸಲಾಗಿದೆ. ಈ ದೇವಾಲಯದ ಪ್ರಮುಖ ರಚನಾ ಶೈಲಿ ಏನೆಂದರೆ ಇಲ್ಲಿ 140 ರಿಂದ 150 ವಿವಿಧ ವಿನ್ಯಾಸದ ಗೋಪುರಗಳನ್ನು, ಬೇರ ಬೇರೆ ವಿಗ್ರಹಗಳನ್ನು ದೇವಾಲಯದ ಮೇಲ್ಭಾಗದಲ್ಲಿ ಸುತ್ತಲೂ ಕೆತ್ತನೆ ಮಾಡಿ ಜೋಡಿಸಿ ನಿರ್ಮಿಸಲಾಗಿದೆ.

ಭಾರತದಲ್ಲಿ ಎಷ್ಟು ಮಾದರಿಯ ಗೋಪುರಗಳಿವೆಯೋ, ಅಷ್ಟು ಶೈಲಿಯ ಗೋಪುರಗಳ ವಿನ್ಯಾಸವನ್ನು ನಾವಿಲ್ಲಿ ಕಾಣಬಹುದಾಗಿದೆ. ಈ ವಿಶೇಷತೆಯು ಆ ಕಾಲದ ಶಿಲ್ಪಿಗಳ ಕುಶಲಮತಿಗೆ ಹಿಡಿದ ಕನ್ನಡಿಯಾಗಿದೆ

ಗರ್ಭಗುಡಿಯಲ್ಲಿ ಶ್ರೀ ನರಸಿಂಹಸ್ವಾಮಿಯ ತೊಡೆಯ ಮೇಲೆ ಲಕ್ಷ್ಮೀದೇವಿ ಇರುವುದರಿಂದ ಲಕ್ಷ್ಮೀನರಸಿಂಹಸ್ವಾಮಿ ಎಂದು ಕರೆಯಲಾಗುತ್ತಿದೆ. ದೇವಸ್ಥಾನದ ಜಗುಲಿ, ಮುಖಮಂಟಪ, ಬಾಗಿಲು, ಸುಕನಾಸಿ, ಪ್ರಾಂಗಣ ದೇಗುಲದ ಒಳಗೆ ಹೊರಗೆ ಕೆತ್ತಿರುವ ಶಿಲ್ಪಕಲಾಕೃತಿಗಳು ಆ ಕಾಲದ ನಮ್ಮ ಶಿಲ್ಪಿಗಳ ತಾಂತ್ರಿಕ ಜ್ಞಾನ ಮತ್ತು ಸೌಂದರ್ಯ ಪ್ರಜ್ಞೆಗೆ ಹಿಡಿದಿರುವ ಕೈಗನ್ನಡಿಯಂತಿದೆ.

ಇಲ್ಲೊಂದು ನೀರನ್ನು ಸೇದುವ ಬಾವಿಯಿದೆ. ಇದರ ನೀರನ್ನು ಸ್ವಾಮಿಯ ಪೂಜೆಗೆ ಮಾತ್ರ ಬಳಸಲಾಗುತ್ತದೆ. ಇಲ್ಲಿರುವ ಪುರಾತನ ಬೃಹದಾಕಾರದ ಅರಳಿಮರವಿದ್ದು ಇಲ್ಲಿನ ಇತಿಹಾಸ ತಿಳಿಯಲು ಇದು ಕೂಡ ಆಧಾರವಾಗುತ್ತದೆ.



ಸಾಂಸ್ಕೃತಿಕವಾಗಿ ಈ ದೇವಾಲಯದ ಕೊಡುಗೆ ಅಪಾರವಾಗಿದೆ. ಈ ದೇವಸ್ಥಾನದಲ್ಲಿ 14 ಉತ್ಸವಗಳನ್ನು ಆಚರಿಸಲಾಗುತ್ತದೆ. ಬ್ರಹ್ಮೋತ್ಸವ, ರಥೋತ್ಸವ, ನಾಡಹಬ್ಬ ದಸರಾ, ರಾಮನವಮಿ, ವೈಕುಂಠ ಏಕಾದಶಿ ನರಸಿಂಹ ಜಯಂತಿ ಪ್ರಮುಖ ಆಚರಣೆಗಳು, ವಿಶೇಷವಾದ 23 ರೀತಿಯ ಸೇವಾರ್ಥಗಳು, ನಿತ್ಯ ತ್ರಿಕಾಲಪೂಜೆ, ಮಂಗಳವಾರ ಶುಕ್ರವಾರ, ಶನಿವಾರ ವಿಶೇಷ ಪೂಜೆ ನಡೆಯುತ್ತವೆ.

ಪ್ರಸ್ತುತ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯವು ಮುಜರಾಯಿ, ರಾಜ್ಯ ಪುರಾತತ್ವ ಇಲಾಖೆಯ ಸ್ವಾಧೀನಕ್ಕೆ ಒಳಪಟ್ಟಿದೆ. ದೇವಾಲಯದ ಪೂಜೆಯನ್ನು ಶ್ರೀ ರಂಗನಾಥ ಶರ್ಮ ಮತ್ತು ಅವರ ಮಕ್ಕಳು ನಿರ್ವಹಿಸುತ್ತಿದ್ದಾರೆ. ದೇವಾಲಯವು ಮುಜರಾಯಿ ಇಲಾಖೆಗೆ ಸೇರಿದ್ದರೂ ಭಕ್ತಿಯ ಸೇವೆಗಾಗಿ ಜೀರ್ಣೋದ್ಧಾರ ಸಮಿತಿ ಇಲ್ಲಿ ಭಕ್ತಿ ಪೂರಕವಾಗಿ ಕೆಲಸಕಾರ್ಯಗಳನ್ನು ಮಾಡುತ್ತಿದೆ. ದೇವಸ್ಥಾನದ ಬಗ್ಗೆ ಮಾಹಿತಿ ತಿಳಿಯಲು ಗೆಜೆಟಿಯರ್, ಶಾಸನ, ಪ್ರಕಟವಾಗಿರುವ ಪುಸ್ತಕಗಳು ಲಭ್ಯವಿವೆ.

**ಅರಳೀಹಳ್ಳಿ ಅಣ್ಣಪ್ಪ**
ಕನ್ನಡ ಅಧ್ಯಾಪಕರು, ಸ.ಪ್ರೌ.ಶಾಲೆ, ಅರಹತೊಳಲು
ಭದ್ರಾವತಿ ತಾಲ್ಲೂಕು.

# "ಸಾಂಸ್ಕೃತಿಕ ಸಿರಿವಂತಿಕೆಯ ಆಗರ ಸಾಗರ"

"ಕಟ್ಟಬೇಕು ಗುಡಿಯ ಚರಿತೆಯನೆಂದು ಗಟ್ಟಿ ಮನಸು ಮಾಡಿದವರು ಕಷ್ಟವಾದರೂ ಸರಿಯೇ, ಬೆಟ್ಟದ ಮೇಲಾದರೂ ಸರಿಯೇ... ಕಟ್ಟಿಯೇ ಕಟ್ಟುತ್ತಾರೆ" ಚರಿತ್ರೆ ಪುರಾಣ ಐತಿಹ್ಯಗಳು ಇತ್ಯಾದಿ ಸಿಂಹಾವಲೋಕನ ಕ್ರಮದಲ್ಲಿ ಪುಟಗಳನ್ನು ಗಮನಿಸಿದಾಗ ನಮಗೆ ಕೆಲವು ಅಜರಾಮರ ನಾಮಗಳು ಅವರ ಸಾಧನೆಗಳಿಂದ ಕೈಗೊಂಡ ಕೈಂಕರ್ಯಗಳಿಂದ ಅಮರವಾದವೇ ವಿನಃ ಜೀವಕ್ಕೆ ಪಡೆದ ಅಮರತ್ವದಿಂದಲ್ಲವೆಂಬುದು ನಿರ್ವಿವಾದವಾಗಿ ಒಪ್ಪಬಹುದು ಹಾಗೂ ಸ್ಮರಿಸಬಹುದು.

ಶಿವಮೊಗ್ಗ ಜಿಲ್ಲೆಯು ಮಲೆನಾಡಿನ ಹೆಬ್ಬಾಗಿಲಾಗಿ 07 ತಾಲ್ಲೂಕುಗಳನ್ನು ಭೌಗೋಳಿಕವಾಗಿ ಹೊಂದಿದ್ದು, ಪ್ರತಿಯೊಂದು ತಾಲ್ಲೂಕು ಕೂಡಾ ಹತ್ತು ಹಲವು ವೈಶಿಷ್ಟ್ಯತೆಗಳೊಂದಿಗೆ ಗುರುತಿಸಿಕೊಂಡಿರುವುದನ್ನು ತಿಳಿಯಬಹುದಾಗಿದೆ. "ಸಾಗರ" ತಾಲ್ಲೂಕಿನ ಬಗ್ಗೆ ನೋಡುವುದಾದರೆ 19.75 ಚದರ ಕಿ.ಮೀ ವಿಸ್ತೀರ್ಣ ಹೊಂದಿ 2011 ರ ಜನಗಣತಿಯಂತೆ 1.20.215 ಜನಸಂಖ್ಯೆ ಹೊಂದಿ ಸಾಹಿತ್ಯ ಕಲೆ, ಸಂಸ್ಕೃತಿ ಪರಂಪರೆ, ಧಾರ್ಮಿಕ, ಐತಿಹಾಸಿಕ, ಭೌಗೋಳಿಕ ಮತ್ತು ಪೌರಾಣಿಕವಾಗಿಯೂ ತನ್ನದೇ ಆದ ವೈಶಿಷ್ಟ್ಯತೆಯೊಂದಿಗೆ ರಾಜ್ಯ ರಾಷ್ಟ್ರಮಟ್ಟದಲ್ಲಿ ಗುರುತಿಕೊಂಡಿರುವ ತಾಲ್ಲೂಕಾಗಿ ಪ್ರಪಂಚದ ಭೂಪಟದಲ್ಲಿ ನಿಲ್ಲುವಂತಹದ್ದಾಗಿ ಗುರುತಿಸಲ್ಪಟ್ಟಿದೆ.

ನಮ್ಮ ನಾಡಿನ ಹೆಮ್ಮೆಯ ಕಲೆ, ಸಂಸ್ಕೃತಿ ಪುರಾಣ, ಧಾರ್ಮಿಕತೆ ಸಾರುವಂತಹ ಸಾಗರ ತಾಲ್ಲೂಕಿನ ಆಯ್ದ ಕೆಲವು ಸ್ಥಳ ಪರಿಚಯವನ್ನು ಪಡೆಯೋಣ.

**ಭೀಮೇಶ್ವರ :**

ಭೀಮೇಶ್ವರ ಸಾಗರದಿಂದ ಕಾರ್ಗಲ್ ಭಟ್ಕಳ ಮಾರ್ಗದಲ್ಲಿ ಬರುವ ಶರಾವತಿ ಕಣಿವೆಯಂಚಿನಲ್ಲಿರುವ ಕೋಗಾರು ಸಮೀಪದ ದಟ್ಟ ಅರಣ್ಯದಲ್ಲಿರುವ ಸಾಗರದಿಂದ ಸುಮಾರು 65 ಕಿ.ಮೀ. ದೂರದಲ್ಲಿರುವ ಪೌರಾಣಿಕ ಹಿನ್ನಲೆ ಹೊಂದಿರುವಂತಹ ಸ್ಥಳವಾಗಿದೆ. ಕಥೆಯ ಪ್ರಕಾರ ಶಿವಲಿಂಗವನ್ನು ಪಾಂಡವರ ಭೀಮನು ಅಜ್ಞಾತ ವಾಸದ ಸಂದರ್ಭದಲ್ಲಿ ಕಾಶಿಯಿಂದ ತಂದು ಪ್ರತಿಷ್ಠಾಪಿಸಿದನು. ಧಾರ್ಮಿಕ ಪೂಜಾ ಕೈಂಕರ್ಯಕ್ಕೆ ನೀರಿನ ಅಭಾವವಾದ ಕಾರಣ ಮಧ್ಯಮ ಪಾಂಡವ ತನ್ನ ಬಿಲ್ಲಿನಿಂದ ನೆಲಕ್ಕೆ ಬಾಣವನ್ನು ಬಿಡುವ ಮೂಲಕ ನೀರು ಚಿಮ್ಮುವಂತೆ ಮಾಡಿದನೆಂಬ ಐತಿಹ್ಯವಿದ್ದು, ಪ್ರಸ್ತುತ ದೇಗುಲವನ್ನು ಕಾಳು ಮೆಣಸಿನ ರಾಣಿಯು ಜೀರ್ಣೋದ್ಧಾರ ಮಾಡಿರುವಳೆಂಬ ಐತಿಹ್ಯಗಳಿವೆ. ಈ ಸ್ಥಳದಲ್ಲಿ ಭೀಮನು ಪ್ರತಿಷ್ಠಾಪಿಸಿದ ಲಿಂಗವಿರುವ ಕಾರಣ ದೇವಾಲಯಕ್ಕೆ ಭೀಮಲಿಂಗೇಶ್ವರವೆಂದೂ, ಊರನ್ನು ಭೀಮೇಶ್ವರವೆಂದು ಇಂದಿಗೂ ಕರೆಯಲಾಗುತ್ತಿದೆಯೆಂದು ಸ್ಥಳೀಯರು ಸ್ಮರಿಸುತ್ತಾರೆ.  ನಿಸರ್ಗದ ತಪ್ಪಲಿನ ಬೆಟ್ಟ-ಗುಡ್ಡಗಳ ರಾಶಿಯಂಚಿನ ಹಚ್ಚ ಹಸಿರಿನ ಕಾಡು, ನೀಲಿ ಆಕಾಶವನ್ನು ಸದಾ ಹೊದ್ದಿರುವಂತೆ ಭಾಸವಾಗುವ ಬೃಹತ್ ಶಿಲೆಗಳಿಂದ ನಿರ್ಮಿತ ಸ್ಥಳೀಯ ಪವಾಡಗಳ ಸ್ಥಳವಾಗಿ ಧಾರ್ಮಿಕ ಕ್ಷೇತ್ರವಾಗಿ ಭೀಮೇಶ್ವರ ನಿಂತಿದೆ.

**ಜೋಗ / ಗೇರುಸೊಪ್ಪೆ ಜಲಪಾತ :**

ಪ್ರಪಂಚ ಪ್ರಸಿದ್ಧ ಭಾರತದ ಎರಡನೆಯ ಅತಿ ಎತ್ತರದ ಜಲಪಾತವಾಗಿ ಉತ್ತರ ಕನ್ನಡ ಜಿಲ್ಲೆಯ ಸಿದ್ಧಾಪುರ ತಾಲ್ಲೂಕಿನ ದಟ್ಟವಾದ ಕಾಡು-ಗುಡ್ಡಗಳಿಂದ ಆವೃತವಾದ ಸ್ಥಳ ಜೋಗ ಜಲಪಾತವನ್ನು ವೀಕ್ಷಿಸುವ ತಾಣವು ಜೋಗದಲ್ಲಿದೆ. ಪ್ರಸಕ್ತ ಜಲಪಾತವು ಸಾಗರದಿಂದ ಸುಮಾರು 35 ಕಿ.ಮೀ. ದೂರದಲ್ಲಿದ್ದು ಸುಮಾರು 292 ಮೀಟರ್



ಎತ್ತರದಿಂದ ಶರಾವತಿ ನದಿಯು ನಾಲ್ಕು ಸೀಳಾಗಿ ವೈಭವದಿಂದ ಅವ್ಯಾಹತವಾಗಿ ಧುಮ್ಮಿಕ್ಕುತ್ತದೆ. ಅವ್ಯಾಹತವಾಗಿ ಧುಮ್ಮಿಕ್ಕುವ ರಾಜ, ಜೋರಾಗಿ ಆರ್ಭಟಿಸುತ್ತಾ ಧುಮುಕುವ ರೋರರ್, ಬಳುಕುತ್ತಾ ಜಾರುವ ರಾಣಿ, ರಭಸದಿಂದ ಹಲವಾರು ಬಂಡೆಗಳನ್ನು ಚಿಮ್ಮುತ್ತಾ ನುಗ್ಗುವ ರಾಕೆಟ್ ಈ ನಾಲ್ಕು ಜಲ ಭಾಗಗಳಾಗಿವೆ. ಮಳೆಗಾಲದಲ್ಲಿ ಅತ್ಯಂತ ರಮಣೀಯ ರೂಪ ತೊಡುವ ಈ ಜಲಪಾತ ಬಿಳಿಮೋಡಗಳ ಹಿಂದೆ ಕಣ್ಣಾಮುಚ್ಚಾಲೆಯಾಡುತ್ತಾ ನೋಡುಗರ ಕಣ್ಮನ ಸೆಳೆಯುವ ನಿಸರ್ಗ – ಸೌಂದರ್ಯದ ವೈಭವ ಸಾರುವ ರಮಣೀಯ ಸ್ಥಳವಾಗಿ ಪ್ರವಾಸಿಗರನ್ನು ಸೆಳೆಯುತ್ತಿದೆ.

**ಹೊನ್ನೇಮರಡು :**

ಇತ್ತೀಚಿಗೆ ಜನಪ್ರಿಯವಾಗಿರುವ ಹೊನ್ನೇಮರಡು ಶರಾವತಿ ಹಿನ್ನೀರಿನಿಂದ ಆವೃತವಾದ, ಸಾಹಸ ಪ್ರಿಯರನ್ನು ಆಹ್ವಾನಿಸಿರುವ ಸುಂದರವಾದ ಸ್ಥಳವಾಗಿದೆ. ಸಾಗರದಿಂದ ಕಾರ್ಗಲ್ ಜೋಗ ಸಾಗುವ ಮಾರ್ಗದಲ್ಲಿ ತಾಳಗುಪ್ಪ ಸಮೀಪದಲ್ಲಿರುವ ಸ್ಥಳವಾಗಿದೆ. ಸಾಗರದಿಂದ ಸುಮಾರು 25 ಕಿ.ಮೀ. ದೂರದಲ್ಲಿರುವಂತಹ ಹೊನ್ನೇಮರಡು ನೀರಿನ ಸಾಹಸ ಕ್ರೀಡೆಗಳಿಗೆ ಜಲಯೋಗ ಇತ್ಯಾದಿಗಳಿಗೆ ಪ್ರಸಕ್ತವಾದ ಸ್ಥಳವಾಗಿದೆ. ಸುತ್ತಲೂ ಪ್ರಶಾಂತವಾದ ವಾತಾವರಣ ಹೊಂದಿರುವ ನೈಸರ್ಗಿಕ ರಮಣೀಯತೆಯೊಂದಿಗೆ ಪ್ರವಾಸಿಗರನ್ನು ಆಕರ್ಷಿಸುವ ಸುಂದರ ಪ್ರವಾಸಿ ಸ್ಥಳವಾಗಿ ಸಾಗರ ತಾಲ್ಲೂಕಿನಲ್ಲಿ ಗುರುತಿಸಲ್ಪಡುತ್ತಿದೆ.

**ಕಾನೂರು ಕೋಟೆ :**

ಗೇರುಸೊಪ್ಪೆ ಸಂಸ್ಥಾವನ್ನು ಕ್ರಿ.ಶ. 1552 ರಿಂದ 1606ರ ವರೆಗೆ ಆಳಿದ ವೀರ ಮಹಿಳೆ ಚೆನ್ನಭೈರಾದೇವಿಯ ಚರಿತ್ರೆಸಾರುವ ನಿಧಿಯೊಳಗೆ ದಟ್ಟ ಕಾನನದ ಮಧ್ಯೆ ಅವಸಾನದ ಅಂಚಿನಲ್ಲಿರುವ ಕೋಟೆಯಾಗಿದೆ. ದೇಶಕ್ಕೆ ವ್ಯಾಪಾರಿ ಸೋಗಿನಲ್ಲಿ ಬಂದ ಆಕ್ರಮಣಕಾರರಲ್ಲಿ ಪೋರ್ಚುಗೀಸರು ಅವರ ಬಲವೃದ್ಧಿ ಕಂಡು ಆಪತ್ಕಾಲದಲ್ಲಿ ನೆರವಾಗಲೆಂದು ದವಸ–ಧಾನ್ಯ, ಧನ–ಕನಕ ಜೊತೆ ಮದ್ದು–ಗುಂಡುಗಳ ಸಂರಕ್ಷಣಾ ದೃಷ್ಟಿಯಿಂದ ದುರ್ಗಮವಾದ ಕಡಿದಾದ ಬೆಟ್ಟ ತುದಿಯಲ್ಲಿ ನಿರ್ಮಿತವಾದ ಕೋಟೆಯಾಗಿದೆ. 1559 ರಲ್ಲಿ ಪೋರ್ಚುಗೀಸರು ಗೇರುಸೊಪ್ಪೆಯ ಮೇಲೆ ದಾಳಿ ಮಾಡಿದಾಗ ರಾಣಿ ಸಹಿತ ಸರ್ವರೂ ಕಾನೂರು ಕೋಟೆಯಲ್ಲಿ ಆಶ್ರಯ ಪಡೆದಿರುತ್ತಾರೆ. ಇದನ್ನರಿತ ಕ್ಯಾಪ್ಟನ್ ಲೂಯಿದ್ ಅಟಾಯ್ದೆ ಸೈನ್ಯ ಸಹಿತ ಬೆಟ್ಟ ಏರ ತೊಡಗಿದಾಗ ದೊಡ್ಡದೊಡ್ಡ ಬಂಡೆಗಳನ್ನು ಬೆಟ್ಟದ ಮೇಲಿಂದ ಉರುಳಿಸಿ ಪೋರ್ಚುಗೀಸ್ ಸೈನ್ಯ ಹಿಮ್ಮೆಟ್ಟಿಸುತ್ತಾರೆ. ಇದೇ ಕಾರಣಕ್ಕೆ ಕಾನೂರು ಕೋಟೆಗೆ "ಉರುಳುಗಲ್ಲು ಕೋಟೆ" ಎಂದು ಕರೆಯುತ್ತಾರೆ. ಚರಿತ್ರೆಯಲ್ಲಿ ಸುವರ್ಣಾಕ್ಷರದಲ್ಲಿ ಬರೆದಿಡಬಹುದಾದ ಐತಿಹಾಸಿಕ ಸಂಗತಿಗಳ ಜೊತೆಗೆ ಅಚ್ಚರಿಯ ಮಡುವಿನಲ್ಲಿ ಕೆಡವದ ಅಭೇದ್ಯಕೋಟೆ ನಿರ್ಲಕ್ಷ್ಯ ಮತ್ತು ನಿಧಿಯಾಸೆಗೆ ನಜ್ಜುಗುಜ್ಜಾಗಿದೆ. ಸುರಂಗಮಾರ್ಗ, ರಾಣಿವಾಸ, ಭಾವಿ, ಧ್ವಜಕಂಬ, ಕೋಟೆಯ ಗೋಡೆಗಳು ಶಿಥಿಲಾವಸ್ಥೆ ತಲುಪಿವೆ.

**ಕೆಳದಿ :**

ಶಿವಮೊಗ್ಗ ಜಿಲ್ಲೆಯ ಸಾಗರದಿಂದ ಸುಮಾರು 08 ಕಿ.ಮೀ ದೂರದಲ್ಲಿರುವ 12ನೇ ಶತಮಾನದಲ್ಲಿ ಶಾಂತರಸರ, 16ನೇ ಶತಮಾನದಲ್ಲಿ ವಿಜಯನಗರದ ಕೃಷ್ಣದೇವರಾಯರ ಆಳ್ವಿಕೆಯಲ್ಲಿ ಸಾಮಾನ್ಯ ಮನೆತನಕ್ಕೆ ಸೇರಿದ್ದ ಚೌಡಗೌಡನೆಂಬ ರೈತನಿಗೆ ನಿಕ್ಷೇಪವೊಂದು ದೊರಕಿತ್ತು. ಅದರಿಂದ ಸಣ್ಣ ಪಾಳೆಯಪಟ್ಟವೊಂದನ್ನು ಕಟ್ಟಿಕೊಂಡು, ಮುಂದೆ ಇವರ ಪರಾಕ್ರಮಕ್ಕೆ ಕೃಷ್ಣದೇವರಾಯ ಎಂಟು ಮಾಗಣೆಗಳ ನಾಯಕತ್ವವನ್ನು ಕೊಟ್ಟು ಇವನನ್ನು ನಾಯಕನನ್ನಾಗಿ ಮಾಡಿದನು. ಹೀಗೆ ಕೆಳದಿ ಸುಮಾರು 1500ರಲ್ಲಿ ಪುಟ್ಟ ಸಂಸ್ಥಾನದ ರಾಜಧಾನಿಯಾಗಿತ್ತು. ಅರಮನೆ ಕೋಟೆ, ಕೆರೆಗಳನ್ನು ಹಾಗೂ ಸುಂದರವಾದ ರಾಮೇಶ್ವರ ದೇವಾಲಯವನ್ನು ಚೌಡಪ್ಪ ನಾಯಕ ಕಟ್ಟಿಸಿದರು. ಮುಂದೆ 60 ವರ್ಷ ಕಾಲ ಇವರ ವಂಶದ ರಾಜಧಾನಿಯಾಗಿ, ನಂತರ ಇಕ್ಕೇರಿಗೂ ತದನಂತರ ಬಿದನೂರಿಗೂ ವರ್ಗಾಯಿಸಲಾಯಿತು. ಕೆಳದಿಗೆ ಹೋಗುತ್ತಿದ್ದಂತೆ ಎದುರಿಗೆ ರಾಮೇಶ್ವರ ದೇವಾಲಯ, ರಾಮೇಶ್ವರ ಎಡಭಾಗದಲ್ಲಿ ಪಾರ್ವತಿ ಹಾಗೂ ಬಲಭಾಗದಲ್ಲಿ ವೀರಭದ್ರನ ಗುಡಿಗಳಿವೆ. ಇವುಗಳೆಲ್ಲವೂ ಹೊಯ್ಸಳ ಶೈಲಿಯಲ್ಲಿರುವ ದೇವಾಲಯಗಳಾಗಿದ್ದು, ಪಾರ್ವತಿ ದೇವಾಲಯದ ಇಕ್ಕೆಲಗಳಲ್ಲಿ ದೇವಾನುದೇವತೆಗಳ, ಅಪ್ಸರೆಯರ, ರಾಮಾಯಣ, ಮಹಾಭಾರತದ ಚಿತ್ರಗಳನ್ನು ಕಾಣಬಹುದು. ಹೊರಾಂಗಣದಲ್ಲಿ ಒಂದೆಡೆ ನಾಗರ ಬನ ಹಾಗೂ ಅದರ ಪಕ್ಕದಲ್ಲಿ ಆಗಿನ ಕಾಲದ ಪಣತವನ್ನು ಕಾಣಬಹುದು. ಕೆಳದಿಯ ಸುತ್ತ ಮುತ್ತ ಈಗಲೂ ಅಲ್ಲಲ್ಲಿ ಯುದ್ಧದಲ್ಲಿ ಮಡಿದ ವೀರರ ವೀರಗಲ್ಲುಗಳು, ಸತಿಯಾದವರ ಸತಿ ಕಲ್ಲುಗಳು ಸಿಗುವುದನ್ನು ಕಾಣಬಹುದು.

**ಸಿಗಂದೂರು :**

ಅದ್ಭುತವಾದ ಪ್ರಕೃತಿ ಮಡಿಲಲ್ಲಿ ಶರಾವತಿ ನದಿಯ ಹಿನ್ನೀರ ಅಂಚಿನಲ್ಲಿ ಪವಾಡಗಳ ಆಗರವಾಗಿ ದೇವಿಶಕ್ತಿ ಪೀಠಗಳಲ್ಲಿ ಶ್ರೀ ಕ್ಷೇತ್ರ ಸಿಗಂದೂರು ಕ್ಷೇತ್ರವೂ ಒಂದಾಗಿದೆ. ಅಪಾರ ಮಹಿಮೆಯನ್ನು ಹೊಂದಿರುವ ತನ್ನ ಶಕ್ತಿ ಹಾಗೂ ಮಹಿಮೆಯಿಂದ ಗುರುತಿಸಲ್ಪಟ್ಟ ಕ್ಷೇತ್ರವಾಗಿದೆ. ಆಸ್ತಿ ವಿಚಾರ, ಬೆಲೆ ಬಾಳುವ ವಸ್ತು, ಕಳೆದುಕೊಂಡವರು, ನ್ಯಾಯ ಬೇಡಿ ಬಂದವರು, ಮೊರೆ ಹೋಗುವುದು ಅಧಿಕ. ಸ್ಥಳೀಯರು ಹೇಳುವಂತೆ ಸಾವಿರಾರು ಭಕ್ತರು ಇಷ್ಟಾರ್ಥ ಸಿದ್ಧಿ ನಂತರ ಹರಕೆ ಒಪ್ಪಿಸಿ ಹೋದದ್ದನ್ನು ನೈಜ ನಿದರ್ಶನವಾಗಿ ನೀಡುತ್ತಾರೆ. ಸಾಗರದಿಂದ ಹೊಳೆಬಾಗಿಲು ಮಾರ್ಗವಾಗಿ ಸುಮಾರು 35 ಕಿ.ಮೀ ದೂರದಲ್ಲಿ ಈ ಸ್ಥಳವಿದೆ. ಸುಮಾರು 500 ವರ್ಷಗಳ ಇತಿಹಾಸ ಹೊಂದಿರುವ ಈ ಸ್ಥಳ ಐತಿಹ್ಯಗಳ ಪ್ರಕಾರ ಬೇಟೆಯಾಡಲು ಸಿಗಂದೂರು ಕಾಡಿಗೆ ತೆರಳಿ ದಾರಿ ತಪ್ಪಿ ರಾತ್ರಿ ಅಲ್ಲಿಯೇ ವಿಶ್ರಾಂತಿ ಪಡೆಯಲು ಶೇಷಪ್ಪ ಎಂಬುವವರು ಮಲಗಿದ್ದರಂತೆ. ಆತನ ಕನಸಿನಲ್ಲಿ ದೇವಿ ತಾನಿಲ್ಲಿ ನೆಲೆಸಿರುವ ಹಾಗೂ ಗುಡಿಕಟ್ಟಲು ಆಜ್ಞೆ ಮಾಡಿದರೆಂದೂ ಮರುದಿನವೇ ಘಟನೆಯನ್ನು ಬ್ರಾಹ್ಮಣ ದುಗ್ಗಜ್ಜರವರ ಬಳಿ ಹೇಳಿ ಗುಡಿ ಕಟ್ಟಲಾಯಿತೆಂದು ತಿಳಿದು ಬರುತ್ತದೆ. ಪ್ರಸಕ್ತ ದೇವಾಲಯದ ಬಳಿಯೇ ಭೂತ (ವೀರಭದ್ರ) ಸ್ಥಾನವೂ ಇದ್ದು ಸಿಗಂದೂರು ಜಾಗ ರಕ್ಷಕರೆಂಬ ನಂಬಿಕೆಯೂ ಇದ್ದೂ ಭಕ್ತರ ಪಾಲಿನ ಅಪಾರ ನಂಬಿಕಾ ಕ್ಷೇತ್ರವಾಗಿ ಗುರುತಿಸಿಕೊಂಡಿದೆ.

**ಹೊಸಗುಂದ :**

ದಟ್ಟ ಕಾಡಿನ ಮಡಿಲಿನಲ್ಲಿ ಸುಮಾರು 600 ಎಕರೆ ದೇವರ ಕಾಡಿನ ಮಧ್ಯಭಾಗದಲ್ಲಿರುವ ಒಂದೇ ತಾಣಗಳಲ್ಲಿ ವಿಭಿನ್ನ ಶಿಲ್ಪಗಳ ದೇಗುಲಗಳನ್ನು, ಶಾಸನಗಳ ಸಾಲು, ಬೃಹತ್‌ಗಾತ್ರದ ನೂರಾರು ವರ್ಷಗಳಷ್ಟು ವಯಸ್ಸಾದ ಮರಗಳ ಗುಚ್ಛ ಹೊಂದಿರುವ ಐತಿಹಾಸಿಕ ಶಿಲಾ ದೇಗುಲದ ತಾಣವೇ ಹೊಸಗುಂದ. ಶಿವಮೊಗ್ಗ, ಆನಂದಪುರ, ಸಾಗರ ಮಾರ್ಗ ಮಧ್ಯೆ ಸಾಗರದಿಂದ 16 ಕಿ.ಮೀ ಅಂತರದಲ್ಲಿ ಐತಿಹಾಸಿಕ ಶಿಲಾ ದೇಗುಲಗಳ ಪರಿಸರ ವೈವಿಧ್ಯ ಹೊಂದಿರುವ



ತಾಣವಾಗಿದೆ. ಸುಮಾರು 600 ಎಕರೆ ದೇವರ ಕಾಡಿನ ಮಡಿಲಿನಲ್ಲಿರುವ ಶಿಲಾ ದೇಗುಲಗಳಲ್ಲಿ ಮುಖ್ಯ ಆಲಯ ಉಮಾಮಹೇಶ್ವರ ದೇಗುಲ. ಈ ದೇಗುಲ ಹೊಯ್ಸಳ ಶೈಲಿಯಲ್ಲಿದ್ದು ಈ ದೇವಾಲಯದ ಮುಖ ಮಂಟಪದಲ್ಲಿ 20 ಕಂಬಗಳಿದ್ದು ಮೂರು ಕಡೆಗಳಿಂದಲೂ ದ್ವಾರ, ನವರಂಗದ ದ್ವಾರಕ್ಕೆ ಜಾಲಾಂದ್ರಗಳಿದ್ದು, ಬದಿಯಲ್ಲಿ ಕಿಟಕಿಯಂತಹ ರಚನೆಯಿದೆ. ಸ್ಥಳ ಇತಿಹಾಸ ನೋಡುವುದಾದರೆ, ಜೈನಧರ್ಮದ ಅತಿಶಯ ಮಹಾಕ್ಷೇತ್ರ ಹೊಂಬುಜ (ಹುಂಚ)ದ ಅರಸರು ಮೂಲ ಪುರುಷರು. ಶ್ರೀ ಬಿಲ್ಲೇಶ್ವರ ಪಾದ ಪದ್ಯಾರಾಧಕರಾದ ಹುಂಚದ ಶಾಂತರಸ ವಂಶಸ್ಥರ ಕುಟುಂಬದವರು ಒಂದು ಭಾಗವಾಗಿ ಕ್ರಿ.ಶ. 900 ಸುಮಾರಿಗೆ ಹೊಸಗುಂದಕ್ಕೆ ಬಂದು ರಾಜ್ಯ ಕಟ್ಟಿದರು. ನಂತರ ಸುಮಾರು 300 ವರ್ಷ ಆಳ್ವಿಕೆ ನಡೆಸಿದರೆಂದೂ ಕ್ರಿ.ಶ. 1110 ರಿಂದ 1130ರ ವರೆಗೆ ಹೊಸಗುಂದ ಅರಸರ ಆಳ್ವಿಕೆಯ ಪರ್ವಕಾಲವಾಗಿತ್ತೆಂದು ಇತಿಹಾಸಕಾರರು ದೃಢಪಡಿಸಿದ್ದಾರೆ.

**ವರದಹಳ್ಳಿ :**

ವರದಹಳ್ಳಿ ಅಥವಾ ವರದಪುರ ಅಥವಾ ವರದಹಳ್ಳಿಯ ಶ್ರೀಧರ ಸ್ವಾಮಿಗಳು ತಪಸ್ಸು ಮಾಡಿದ ಹಾಗೂ ಸಮಾಧಿ ಹೊಂದಿದ ಸ್ಥಳವಾಗಿ ಸಾಗರದಿಂದ ಸುಮಾರು 12 ಕಿ.ಮಿ. ದೂರದಲ್ಲಿರುವ ತಾಣವಾಗಿದೆ. ವರದಹಳ್ಳಿ ಪ್ರವೇಶಿಸುತ್ತಿದ್ದಂತೆ ಮೊದಲು ಕಾಣುವ ಗೋಮುಖ ತೀರ್ಥವೆಂಬ ಕೊಳ ವರ್ಷವಿಡೀ ಬೀಳುವ ಜಲಧಾರೆ ಹೊಂದಿದ್ದು ಅನೇಕ ಔಷಧೀಯ ಗುಣಗಳಿವೆ ಎಂದು ಭಕ್ತರು ನಂಬುತ್ತಾರೆ. ತೀರ್ಥದ ಪಕ್ಕದ ಮೆಟ್ಟಿಲುಗಳನ್ನು ಮೇಲಕ್ಕೇರಿ ಬಂದಾಗ ಶ್ರೀಧರಸ್ವಾಮಿಗಳ ತಪಸ್ಸು ಮಾಡಿದ ಸ್ಥಳ ಸಿಗುತ್ತದೆ. ಅಲ್ಲಿ ಶ್ರೀಧರ ತೀರ್ಥ ಬೆಟ್ಟದ ತಪ್ಪಲಿನ ಬಂಡೆಯ ಸಂಧಿಯಿಂದ ಬೀಳುವುದು ಕಂಡುಬರುತ್ತದೆ. ಹಾಗೆಯೇ ಬಲಕ್ಕೆ ತಿರುಗಿದರೆ ಗುರುಕುಲ ಕಾಣಸಿಗುತ್ತದೆ. ಇದರ ಪಕ್ಕದ ಕಾಡನ್ನು "ದೇವರ ಕಾಡು" ಎಂದು ಸಂರಕ್ಷಿತ ಅರಣ್ಯವಾಗಿ ಘೋಷಿಸಲಾಗಿದೆ. ಶ್ರೀಧರ ಸ್ವಾಮಿಗಳು ತಪಸ್ಸಿಗೆ ಕೂರುತ್ತಿದ್ದ ಮತ್ತೊಂದು ಜಾಗವೇ "ಧರ್ಮಧ್ವಜ". ಅಲ್ಲಿ ಅದರ ಮೂಲ ಆಶ್ರಮ ಮತ್ತು ಶರಾವತಿ ಹಿನ್ನೀರಿನ ಹಾಗೂ ಮುಳುಗಡೆಯ ದೃಶ್ಯಗಳನ್ನು ಕಾಣಬಹುದು. ವರದಹಳ್ಳಿಯಲ್ಲಿ ದುರ್ಗಾಂಬಾ ದೇವಾಲಯವಿದ್ದು, ದೇವಿಯು ಮೂಕಾಸುರನನ್ನು ಒದ್ದಾಗ ಇಲ್ಲಿ ಬಂದು ಬಿದ್ದನಂತೆ. ಆ ಕಾರಣ ಒದೆವಹಳ್ಳಿ "ವದ್ದಳ್ಳಿ"ಯಾಗಿ ಮುಂದೆ ವರದಹಳ್ಳಿಯಾಗಿದೆಯೆಂದು ಜನರು ಹೇಳುತ್ತಾರೆ. ಪಕ್ಕದಲ್ಲಿಯೇ ರಾಮನ, ಹನುಮನ ಸಣ್ಣಗುಡಿಗಳು, ಶ್ರೀಧರ ಸ್ವಾಮಿಗಳ ಬೃಂದಾವನವನ್ನೂ ಕಾಣಬಹುದು. ಇಲ್ಲಿರುವ ಪ್ರತಿ ಸಮಾಧಿಯ ಬಳಿಯೂ ಶಿವಲಿಂಗಗಳಿರುವುದು ವಿಶಿಷ್ಠ.

**ಶ್ರೀಕ್ಷೇತ್ರ ವಡನ್ ಬೈಲ್ :**

ವಿಶ್ವದ ವಿಖ್ಯಾತ ಜೋಗ ಜಲಪಾತಕ್ಕೆ ಸಮೀಪದಲ್ಲಿರುವ ಜೈನ – ಅತಿಶಯ ಧಾರ್ಮಿಕ ಕ್ಷೇತ್ರವಾಗಿ ಸಾಗರದಿಂದ ಸುಮಾರು 40 ಕಿ.ಮೀ. ಅಂತರದಲ್ಲಿರುವ ಕ್ಷೇತ್ರವಾಗಿದೆ. ವಿಶೇಷವಾಗಿ ಇಲ್ಲಿ ಮಹಾ ಮಾತೆ ಪದ್ಮಾವತಿ ಹಾಗೂ ಭಗವಾನ್ ಪಾರ್ಶ್ವನಾಥ ಬಸದಿಗಳಿರುವುದು ವಿಶೇಷವಾಗಿ ಜನಾಕರ್ಷಕ ಭಕ್ತರ ಸೆಳೆಯುವ ಕ್ಷೇತ್ರವಾಗಿ ಕಂಡು ಬರುತ್ತದೆ.

**ಲಿಂಗನಮಕ್ಕಿ ಅಣೆಕಟ್ಟು :**

ಕರ್ನಾಟಕದ ಪ್ರಸಿದ್ಧ ನದಿಯಾದ ಶರಾವತಿ ನದಿಗೆ ಅಡ್ಡಲಾಗಿ ಕ್ರಿ.ಶ. 1964ರಲ್ಲಿ ಅಣೆಕಟ್ಟು ನಿರ್ಮಿತವಾಯಿತು. ಸುಮಾರು 70ಕಿ.ಮೀ.ಗಳಷ್ಟು ಭಾಗ ನೀರಿನಿಂದ ಆವೃತ ಭೂ–ಭಾಗವಿದೆ. ಕರ್ನಾಟಕಕ್ಕೆ ಅಗತ್ಯತೆ ಇರುವ ವಿದ್ಯುತ್ತಿನಲ್ಲಿ ಹೆಚ್ಚಿನ ಪ್ರಮಾಣ ವಿದ್ಯುತ್‌ನ್ನು ಉತ್ಪಾದಿಸುವ ಸ್ಥಳವಾಗಿದೆ. ಈ ಅಣೆಕಟ್ಟಿನಲ್ಲಿ 4368 ಮಿಲಿಯನ್ ಕ್ಯೂಬಿಕ್ ಮೀಟರ್‌ನಷ್ಟು ನೀರನ್ನು ಸಂಗ್ರಹಿಸುವ ಸಾಮರ್ಥ್ಯವಿದ್ದು, ಸುಮಾರು 193 ಅಡಿ ಎತ್ತರವಿರುವ 2.4 ಕಿ.ಮೀ. ಉದ್ದವಿದೆ. ಪ್ರಮುಖವಾಗಿ ನಾಡಿಗೆ ಬೆಳಕು ನೀಡುವ ಸಲುವಾಗಿ ಅಪಾರ ಪ್ರಮಾಣದ ಭೂ ಒಡಲನ್ನು ತನ್ನಲ್ಲಿ ಹೊಂದಿ ಸಾವಿರಾರು ಮಂದಿ ನಿರಾಶ್ರಿತರಾಗಿದ್ದಾಗ್ಯೂ ನಾಡಿಗೆ ಬೆಳಕನ್ನು ನೀಡಿದ್ದು ಹೆಮ್ಮೆಯ ದ್ಯೋತಕವಾಗಿ ನಿಂತಿದೆ.

**ಇಕ್ಕೇರಿ :**

ಸಾಗರ ಪಟ್ಟಣದಿಂದ ಸುಮಾರು 6 ಕಿ.ಮೀ. ದೂರದಲ್ಲಿರುವ ಇಕ್ಕೇರಿ ಕ್ರಿ.ಶ 16 ಹಾಗೂ 17ನೇ ಶತಮಾನಗಳಲ್ಲಿ ಕೆಳದಿ ಅರಸರ ವೈಭವಾನ್ವಿತ ರಾಜಧಾನಿಯಾಗಿ ಮೆರೆದ ಹಳ್ಳಿಯಾಗಿದೆ. ವೀರಭದ್ರ ನಾಯಕನ ಆಡಳಿತದ ಕಾಲದಲ್ಲಿ ವಿಜಯ ನಗರದ ಅರಸರ ಅಧೀನತೆಯಿಂದ ಸ್ವತಂತ್ರ್ಯ ಸಂಸ್ಥಾನವೆನಿಸಿ, ತದನಂತರ ಬಿದನೂರಿಗೆ ಬದಲಾಯಿತು. ಇಕ್ಕೇರಿಯಿಂದ ಟಂಕಸಾಲೆ ವರ್ಗವಾದರೂ ಪಗೋಡೆ, ಇಕ್ಕೇರಿ ಪಣಗಳು ಇಲ್ಲಿಂದಲೇ ಚಲಾವಣೆಗೆ ಬರಲ್ಪಡುತ್ತಿದ್ದವು. ನಗರದ ಸುತ್ತಲೂ ಮೂರು ಸುತ್ತು ಕಟ್ಟು ಆವರಣಗಳಿದ್ದು ವಿಶಾಲವಾದ ಕೋಟೆಗೋಡೆಗಳಿಂದ, ಅರಮನೆ ಹಾಗೂ ಭವ್ಯ ಕಟ್ಟಡಗಳೂ ಆವರಿಸಿದ್ದವು. ಇವೆಲ್ಲವುಗಳ ಗತವೈಭವದ ಕುರುಹಾಗಿ ಅಘೋರೇಶ್ವರ ದೇವಾಲಯ ಮಾತ್ರ ಉಳಿದುಕೊಂಡಿದೆ. ಈ ದೇವಾಲಯದಲ್ಲಿನ ಮಧ್ಯದ ಕಂಬಗಳು ಪರಸ್ಪರ ದೂರವನ್ನು "ಬಗಾಯತಿನ ಪ್ರಮಾಣ ಬದ್ಧ ಅಳತೆ" ಎಂದು ಪರಿಗಣಿಸಲಾಗಿ, ಈ ಮಾನವನ್ನು "ದಾಯ" ಎಂದೂ ಕರೆಯುತ್ತಿದ್ದರು. ಇಲ್ಲಿನ ಪ್ರಮುಖ ಆಕರ್ಷಣೆಯಾಗಿ ಹೊಯ್ಸಳ ಕದಂಬ ಶೈಲಿಯಲ್ಲಿನ ಅಘೋರೇಶ್ವರ ದೇವಾಲಯವಿದ್ದು, ಹೊಂಬುಜದ ವೆಂಕಟಯ್ಯನೆಂಬ ಶಿಲ್ಪಿ ಕಟ್ಟಿದನೆಂದು ದಾಖಲಿಸಲಾಗಿದೆ. ಮಹಿಷ ಮರ್ಧಿನಿ, ಭೈರವ, ಗಣಪತಿ, ಷಣ್ಮುಖ, ಅಖಿಲಾಂಡೇಶ್ವರಿ ದೇಗುಲಗಳೂ ಇಲ್ಲಿವೆ. ದೇವಾಲಯದ ಎರಡೂ ಬದಿಗಳಲ್ಲಿ ಕೆರೆಗಳಿದ್ದು ಅವುಗಳಿಂದಲೇ ಈ ಊರಿಗೆ (ಎರಡು+ಕೆರೆ = ಇಕ್ಕೇರಿ) ಎಂಬ ಹೆಸರು ಬಂದಿದೆಯೆಂದು ಸ್ಥಳೀಯರು ಹೇಳುತ್ತಾರೆ. ಇಲ್ಲಿನ ದೇವಾಲಯದಲ್ಲಿ ಒಂದು ಗೆರೆಯಿಂದ ಬೇರ್ಪಟ್ಟಿರುವ ಎರಡು ಹಲ್ಲಿಗಳನ್ನು ಒಂದು ಚೇಳನ್ನೂ ಕೆತ್ತಲಾಗಿದ್ದು, ಆ ಹಲ್ಲಿಗಳು ಒಂದಕ್ಕೊಂದು ಮುಟ್ಟಿದಾಗ ಪ್ರಳಯವಾಗುತ್ತದೆ. ಆದರೆ ಅಲ್ಲಿರುವ ಚೇಳು ಅದನ್ನು ತಡೆಯುತ್ತದೆ ಎಂಬ ಐತಿಹ್ಯವಿದೆ.

ಹೀಗೆ ನಮ್ಮ ನಾಡು, ನುಡಿ ನೆಲ, ಜಲ, ಚರಿತ್ರೆ ಪರಂಪರೆಯ ಸಾಂಸ್ಕೃತಿಕ, ಧಾರ್ಮಿಕತೆಯ ಸಮನ್ವಯತೆ, ನಿಸರ್ಗದ ರಮಣೀಯತೆ ಬಗ್ಗೆ ನಮ್ಮ ಕಣ್ಮುಂದೆ ನಿದರ್ಶನಗಳಾಗಿ ನಿಂತಿರುವ, ಇಂತಹ ಸ್ಥಳ ಐತಿಹ್ಯ ಪರಿಚಯವನ್ನು ಮಾಡಿಕೊಡುವ ಮೂಲಕ ನಮ್ಮ ಪೂರ್ವಿಕರ ಶ್ರೀಮಂತ, ಸಾಂಸ್ಕೃತಿಕ, ಪಾರಂಪರಿಕ ಹಿನ್ನಲೆಯನ್ನು ಪ್ರಚುರ ಪಡಿಸುತ್ತಾ, ಅಭಿಮಾನದಿಂದ ಬಾಳಿ ಬದುಕಿ, ನಾಡು – ನುಡಿ ಕಟ್ಟಲು ನಮ್ಮ ಮುಂದಿನ ಪೀಳಿಗೆಗೆ ದಿಗ್ದರ್ಶಕರಾಗಿ ಗುರಿ ತೋರೋಣ.

**ಮಂಜುಕಮಲ್ .ಕೆ. ಇರುವಕ್ಕಿ**
ಸಿ.ಆರ್.ಪಿ. ತುಮರಿ, ಸಾಗರ ತಾ॥

# ಕನ್ನಡದ ಮೊದಲ ಪ್ರಾಚೀನ ವಿಶ್ವವಿದ್ಯಾಲಯ : ತಾಳಗುಂದ

ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲೂಕಿನ ಈಗಿನ ತಾಳಗುಂದ ಗ್ರಾಮವು ಸುಮಾರು ಒಂದು ಸಾವಿರದ ಏಳುನೂರು ವರುಷಗಳ ಹಿಂದೆ ಅತ್ಯಂತ ಶ್ರೇಷ್ಠ ಅಗ್ರಹಾರವಾಗಿ ಕಂಗೊಳಿಸುತಿತ್ತು. ಶಾಸನಗಳಲ್ಲಿ ಈ ಗ್ರಾಮದ ನಾಮವು ಸ್ಥಾಣಕುಂದೂರು, ತಾಣಗುಂದ ಸ್ಥಾಣಕುಂಜಾಪುರ ಮುಂತಾದ ಹೆಸರುಗಳಿಂದ ಉಲ್ಲೇಖಿತವಾಗಿದೆ. ಸ್ಥಾಣ ಎಂದರೆ ಲಿಂಗವೆಂದೂ, ಗುಂದ ಅಥವಾ ಕುಂದವೆಂದರೆ ಬೆಟ್ಟ ಅಥವಾ ಪರ್ವತವೆಂಬ ಅರ್ಥಗಳಿವೆ. ಎರಡನ್ನೂ ಸೇರಿಸಿದಾಗ ಬೆಟ್ಟದಂತ ಲಿಂಗವಿರುವ ಸ್ಥಳವೆಂದು ಅರ್ಥೈಸಬಹುದು. ಈ ಗ್ರಾಮದಲ್ಲಿ ಸುಮಾರು ಏಳು ಅಡಿ ಎತ್ತರವಿರುವ ಬೃಹತ್ ಪ್ರಾಚೀನ ಶಿವಲಿಂಗವಿದ್ದು ಈ ಶಿವನನ್ನು ಶಾತಕರ್ಣಿಗಳು (ಶಾತವಾಹನರು)ಆರಾಧಿಸಿದ ಕುರಿತು ಶಾಸನ ಉಲ್ಲೇಖವಿರುವುದರಿಂದ, ಈ ಶಿವಲಿಂಗದಿಂದಲೇ ಈ ಗ್ರಾಮಕ್ಕೆ ಸ್ಥಾಣಗುಂದೂರು ಎಂಬ ನಾಮ ಬರಲು ಕಾರಣವಾಗಿದೆ. ಮುಂದೆ ಅದು ತಾಳಗುಂದವಾಗಿ ಪರಿವರ್ತಿತವಾಗಿದೆ.

ಮಯೂರನ ಅವಧಿಯಲ್ಲಿಯೇ ಒಂದು ವಿದ್ಯಾಕೇಂದ್ರವಾಗಿದ್ದ ತಾಳಗುಂದ ಕರ್ನಾಟಕದಲ್ಲಿಯೇ ಅತ್ಯಂತ ಪ್ರಾಚೀನ ಉಪಲಬ್ದ ಅಗ್ರಹಾರವಾಗಿದೆ. ಇದೇ ಅಗ್ರಹಾರದ ವಿದ್ಯಾ ಕೇಂದ್ರವಾಗಿದ್ದ ಪ್ರಣವೇಶ್ವರ ದೇವಾಲಯದ ಪ್ರಾಂಗಣದಲ್ಲೆ ಮಯೂರ ಸ್ನಾತಕ ಹಂತದ ವಿದ್ಯಾಭ್ಯಾಸ ಪಡೆದಿದ್ದಾನೆ ಎಂದು ಶ್ರೀ ಚಿದಾನಂದಮೂರ್ತಿಗಳು ಉಲ್ಲೇಖಿಸಿದ್ದಾರೆ. ಶಾಸನಗಳಲ್ಲಿ ಪ್ರಾಚೀನ ತಾಳಗುಂದ ಅಗ್ರಹಾರದ ವರ್ಣನೆ ಹೇಗಿದೆ ಅಂದರೆ...

**"ಅರಿವೆಯಂ ಪೊದಳ್ದ ಗಿಳಿವಿಂಡುಗಳಿಂಕಳ ಮಾಲೆಯಂಗಳಿಂ**
**ವಾರಿಜಷಂಡದಿಂ ಬಹುತ ಟಾಕದಿನುಗ್ದ ಲತಾಗ್ರಿಹಂಗಳಿಂ**
**ಚಾರುವನಂಗಳಿಂ ಬೆಳೆದ ಕೆಯೊಲದಿಂ ಸೊಗೆಯಿಪ್ಪ**
**ತಾಣಗುಂದೂರತಿ ಸೋಭಿಕುಂಸಿರಿಯ ಕಂಬೊಲದಂನ್ತೆಧರಾತಳಾಗ್ರದೊಳು"**
**"ಅದೆನ್ತೆನೆ ಬೆಳೆದ ಮಳೆಯ ಜಪುಳಕಿನ ಮರ, ನಳಿ ಕಾಳಾಗರು ,**
**ನಾಳಿಕೇರ , ಲವಂಗ, ಮಾತುಳಂಗ, ಚೂತ, ಚಂಪಕ, ಬಕಬಕುಳ,**
**ಅಶೋಕ, ಪೂಗಪುನಾಗ, ನಾಗಲತಾವಿತಾನದೊಳು,**
**ವೋದಿನ, ಬಾದಿನ, ತರ್ಕ್ಕದ ತರ್ಕ್ಕಿಸುವ, ತಂತ್ರದ ಮಂತ್ರವಾದದ,**
**ಕವಿ ಪಠನ ಕದನದ ಯಾಗ್ನೀಕರ ಸೃಜ್ಞೆಗ್ಗಳಂಕಲ್ತುಪಲುಂಬುವ ಪಲಂತೆಳೆದ**
**ವಿಹಂಗತಿತಿಯಿಂದತಿಸಯಿಸಿತು, ನಂದನ ಮನಿಂದುತ್ತುರಪರಿಸರೋದ್ಯಾನ"**
**"ವೇದಂನಾಲ್ಕವಳಂಗಮಾಳುಕುಳುಪಿಂಮಿಮಾಂಸೆ**
**ಕಾಣ್ಡತ್ರಯಂಬಾದಿಂಗೋದುಮತರ್ಕ್ಕಮಾಳುಪದಿನೆಂಟುದ್ದು**
**ಪುರಾಣಸ್ಮೃತಿಪ್ರಾದುರ್ಭ್ರಾವವಿಶೇಷವಾಸ್ತುಭರತಾದ್ಯಂ**
**ಚತುಕಳಾಕೌಶಳಂಮಾದೇವಂಗೆತದಾಗ್ನೆಯಿಂದ್ವಿಜರ್ಗ್ಗಾ ಶ್ರೀತಾಣಗುಂದೂರಿನ "**

ಉದ್ಯಾನವನಗಳಲ್ಲಿ ಗಿಳಿ ಹಿಂಡುಗಳು, ಹಸಿರು ಭತ್ತದ ಹೊಲಗಳು, ಕಮಲಗಳಿಂದ ತುಂಬಿದ ಅನೇಕ ತಟಾಕಗಳು. ಸದಾ ಚಿಗುರುತ್ತಿರುವ ಬಳ್ಳಿಗಳು, ಇಂತೆಲ್ಲಾ ವಿಶಿಷ್ಟತೆ ಹೊಂದಿದ ಅನೇಕ ಉದ್ಯಾನಗಳು ಅಲ್ಲಿ ಕಂಗೊಳಿಸುತ್ತಿದ್ದವು. ತಾಣಗುಂದೂರಿನ ಈ ಪರಿಸರದ ಸಿರಿಗೆ ಲೋಕದಲ್ಲಿ ಸಾಟಿ ಇರಲಿಲ್ಲ. ಅಲ್ಲಿ ಅನೇಕ ವಿಧವಾದ ವೃಕ್ಷಗಳು ಬೆಳೆದಿದ್ದವು. ಬೆಳೆದು ಬಾಗಿದ ಕಬ್ಬು, ತೆಂಗಿನ ಮರ, ಲವಂಗ, ಮಾದಲ ಹಣ್ಣಿನ ಮರ, ಮಾವಿನ ಮರ, ಸಂಪಿಗೆ ಹೂವಿನ ಮರ, ನಾಗಕೇಸರ, ಅಶೋಕ, ಅಡಿಕೆ, ಸುರಹೊನ್ನೆ ಹೀಗೆ ವಿವಿಧ ಮರಗಳ ವನಗಳಿದ್ದವು. ಇಲ್ಲಿನ

ಪಕ್ಷಿಗಳು ಸಹ ಓದು ಬಲ್ಲವಾಗಿದ್ದವು, ತರ್ಕಿಸುವ ಅರಿವು ಪಡೆದಿದ್ದವು, ಬೋಧಿಸುವ ಜ್ಞಾನ ಹೊಂದಿದ್ದವು ಈ ಪಕ್ಷಿಗಳು ಮಂತ್ರಗಳನ್ನು, ಯಜ್ಞ ಶ್ಲೋಕಗಳನ್ನು ಕಲಿತಿದ್ದವು. ಅವುಗಳನ್ನು ನುಡಿಯುತ್ತಿದ್ದವು. ಈ ಎಲ್ಲವುಗಳಿಂದ ತಾಣಗುಂದ ಅಗ್ರಹಾರ ಕಂಗೊಳಿಸುತಿತ್ತು.

ಸ್ಥಂಭ ಶಾಸನದ ಮಾಹಿತಿಯಂತೆ ಮಯೂರನ ವಂಶವು ವೇದ ಆಗಮ ಶಾಸ್ತ್ರ ಗಳನ್ನು ಪೂರ್ಣ ಪ್ರಮಾಣದಲ್ಲಿ ಅಧ್ಯಯನಗೈದ ಕುಟುಂಬವಾಗಿತ್ತು. ಅವರ ಗೃಹದ ಸುತ್ತಲೂ ಷಡ್ವರ್ಗದ ಅಧ್ಯಯನ ಪೂರ್ಣಿತರ ಗೃಹಗಳಿದ್ದವು. ಅಂತೆಯೇ ಅಲ್ಲಿನ ಶಿವ ದೇವಾಲಯವು (ಪ್ರಣವೇಶ್ವರ) ವಿವಿಧ ಹೋಮ, ನಿಯಮ, ದೀಕ್ಷೆಗಳ ಕೇಂದ್ರವಾಗಿತ್ತು. ಪರಿಪೂರ್ಣ ಶಿಕ್ಷಣ ಹೊಂದಿದ ಸದ್ ಜ್ಞಾನದಿಂದ ಕೂಡಿದ ವಿಪ್ರರ ಮಂತ್ರಗಳಿಂದ ಆರಾಧಿಸಲ್ಪಡುತ್ತಿತ್ತು. ಇದರಿಂದಾಗಿ ಆ ವೇಳೆಗಾಗಲೇ ತಾಳಗುಂದದಲ್ಲಿ ಸಮಗ್ರ ವಿಧವಾದ ಅಧ್ಯಯನ ನಡೆಯುತಿತ್ತು ಎಂದು ತಿಳಿಯುತ್ತದೆ. ಖ್ಯಾತ ಇತಿಹಾಸಕಾರರಾದ ಶ್ರೀ ಚಿದಾನಂದಮೂರ್ತಿಗಳು ಇಲ್ಲಿನ ಮಹಾದೇವನು ಸ್ನಾತಕರಿಂದ ಪೂಜೆಗೊಳ್ಳುತ್ತಿದ್ದು, ಈ ಅಧ್ಯಯನ ಕೇಂದ್ರದಲ್ಲಿ ಸ್ನಾತಕ ಹಂತದವರೆಗೂ ವಿದ್ಯಾಭ್ಯಾಸ ದೊರೆಯುತ್ತಿದ್ದು, ಮಯೂರನು ಸ್ನಾತಕನಾಗಿಯೇ ಕಂಚಿಗೆ ಉನ್ನತ ವಿದ್ಯಾಭ್ಯಾಸಕ್ಕೆ ಹೊರಡುತ್ತಾನೆ ಎಂದಿದ್ದಾರೆ. 12ನೇ ಶತಮಾನದ ಶಾಸನವು (EC-VII-Sk-185) ಆ ವೇಳೆಗೆ ಇಲ್ಲಿನ ವಿದ್ಯಾಲಯದಲ್ಲಿ ಅಧ್ಯಯನ ವಿಷಯಗಳ ವಿವರಗಳನ್ನು ನೀಡುತ್ತದೆ. ಋಗ್ವೇದ ಖಂಡಿಕ, ಯಜುರ್ವೇದ ಖಂಡಿಕ, ಪದ ಖಂಡಿಕ, ಕಲ್ಪ ಖಂಡಿಕ, ಸಾಮವೇದ ಖಂಡಿಕ, ವೇದಾಂತ ಖಂಡಿಕ, ಹೀಗೆ ಆರು ವಿಧವಾದ ಖಂಡಿಕ(ವಿಭಾಗಗಳು)ಗಳ ಜೊತೆ ಕನ್ನಡ ಭಾಷೆ ಮತ್ತು ಅಕ್ಷರಗಳನ್ನು ಕಲಿಸುವ ಉಪಾಧ್ಯಾಯರು ಇದ್ದುದಾಗಿ ಶಾಸನ ಉಲ್ಲೇಖಿಸುತ್ತದೆ. 12ನೇ ಶತಮಾನದ ವೇಳೆಗೆ ಈ ವಿದ್ಯಾಲಯದಲ್ಲಿ 48 ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದು ಅವರಿಗೂ ಮತ್ತು ಅಲ್ಲಿನ ಬೋಧಕ ವರ್ಗಕ್ಕೂ ವಸತಿಸಹಿತ ವ್ಯವಸ್ಥೆ ಇದ್ದುದು ವಿಶೇಷವಾಗಿದೆ. ಅಲ್ಲಿನ ಬೋಧಕ ವರ್ಗಕ್ಕೆ ವಿಶೇಷ ಸೌಲಭ್ಯಗಳಿದ್ದು ಅದರಲ್ಲೂ ಅವರ ಭೋಜನದ ನಂತರ ಅವರಿಗೆ ತಾಂಬೂಲ ತಿನಿಸಲು ಮತ್ತು ಅವರ ಉಗುರುಗಳನ್ನು ತೆಗೆಯಲು, ಅಡುಗೆ ಮಾಡಲು ಸೇವಕರನ್ನು ನಿಯೋಜನೆ ಮಾಡಲಾಗಿತ್ತು. ಇದರಿಂದಾಗಿ ತಾಳಗುಂದದ ವಿದ್ಯಾಲಯವು ಉನ್ನತ ಸೌಲಭ್ಯಗಳಿಂದ ಕೂಡಿದ ಅಧ್ಯಯನ ಕೇಂದ್ರವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ

ಕನ್ನಡದ ಭಾಷಾ ಬೆಳವಣಿಗೆಯಲ್ಲಿ ಕದಂಬ ಸಾಮ್ರಾಜ್ಯದ ಕೊಡುಗೆ ಅಪಾರ. ಅವರ ಅನೇಕ ಶಾಸನಗಳು ಸಂಸ್ಕೃತದಲ್ಲಿದ್ದರೂ ಹಲ್ಮಿಡಿಯಂತಹ ಕನ್ನಡ ಶಾಸನ ಕದಂಬರ ಅವಧಿಯಲ್ಲಿ ರಚನೆಯಾಗಿದ್ದು ಎಂಬುದು ಅವರ ಭಾಷಾ ಪೋಷಣೆಗೆ ಸಾಕ್ಷಿಯಾಗಿದೆ. ಸ್ಥಳೀಯ ಕನ್ನಡಿಗರಾದ ಕದಂಬರ ಅವಧಿಯಲ್ಲಿ ಕನ್ನಡ ಭಾಷೆಯ ಬೆಳವಣಿಗೆ ಅಧಿಕೃತವಾಗಿ ಪುಟಿದೆದ್ದಿತು ಎಂಬುದು ವಾಸ್ತವ ಸಂಗತಿ. ಈ ಸಾಮ್ರಾಜ್ಯದ ಸ್ಥಾಪಕನಾದ ಮಯೂರನು ಸ್ವಾಭಿಮಾನಕ್ಕೆ ಧಕ್ಕೆ ಬಂದಾಗ ಸಾಮ್ರಾಜ್ಯ ಕಟ್ಟುವ ಕ್ರಾಂತಿಕಾರಿ ಹೆಜ್ಜೆ ಇಟ್ಟು ಅಚಲ ಛಲದಿಂದ ಕದಂಬ ಎಂಬುವ ಕರುನಾಡಿನ ಮೊದಲ ಸ್ವತಂತ್ರ ಸಾಮ್ರಾಜ್ಯ ರಚಿಸುತ್ತಾನೆ. ಆತನ ಜನ್ಮ ಸ್ಥಳ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಸ್ಥಾಣಗುಂದೂರು (ತಾಳಗುಂದ) ಎಂದು ಖ್ಯಾತ ಇತಿಹಾಸಕಾರರಾದ ಬಿ.ಎಲ್ ರೈಸ್, ಜಾರ್ಜ್ ಮೊರ್ಯಾಸ್ ಹಾಗೂ ಶ್ರೀ ಚಿದಾನಂದಮೂರ್ತಿಗಳಾದಿಯಾಗಿ ಅನೇಕರು ನಾಡಿಗೆ ತೋರಿಸಿಕೊಟ್ಟಿದ್ದಾರೆ.

ಕನ್ನಡ ಭಾಷೆಯ ಲಿಖಿತ ಶಾಸನೋಕ್ತ ಪ್ರಾಚೀನತೆಯನ್ನು ಹಲ್ಮಿಡಿ ಶಾಸನಕ್ಕಿಂತಲೂ ಸುಮಾರು 80 ವರುಷಗಳ ಕಾಲ ಹಿಂದಕ್ಕೆ ಒಯ್ಯುವ ಮೂಲಕ ಕನ್ನಡ ಭಾಷೆಯ ಪ್ರಾಚೀನತೆಯನ್ನು ಇನ್ನಷ್ಟು ದೃಢಪಡಿಸಿದ ಶಾಸನ : ತಾಳಗುಂದ ಶಾಸನ. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ತಾಳಗುಂದದ ಶ್ರೀ ಪ್ರಣವೇಶ್ವರ ದೇವಾಲಯದ ಪ್ರಾಂಗಣದಲ್ಲಿ –2013–14ನೇ ಸಾಲಿನಲ್ಲಿ ಕೇಂದ್ರ ಪುರಾತತ್ವ ಇಲಾಖೆಯು ಪ್ರಾಯೋಗಿಕ ಉತ್ಖನನ ಕಾರ್ಯ ಕೈಗೊಂಡಿತ್ತು. ಆಗ ಸಿಂಹ ಕಟಾಂಜನ ರಚನೆ ದೊರೆತಿತ್ತು.ಅದರ ಪಾರ್ಶ್ವಭಾಗದಲ್ಲಿ ಕದಂಬರ ಕಾಲದ ಲಿಪಿ ಗೋಚರಿಸಿದ್ದು, ಅದು

ಕನ್ನಡದ ಮೊದಲ ಶಾಸನವಾಗುವ ಲಕ್ಷಣ ಹೊಂದಿದೆ ಎಂದು ತಿಳಿಯಲಾಗಿತ್ತು. ಆ ಉತ್ಖನನ ಕ್ರಿಯೆಯ ಅಧ್ಯಯನ ನಾಯಕತ್ವವನ್ನು ಭಾರತೀಯ ಪುರಾತತ್ವ ಸರ್ವೇಕ್ಷಣಾ ಸಂಸ್ಥೆಯ ಬೆಂಗಳೂರು ವಲಯದ ಆಗಿನ ಅಧೀಕ್ಷಕರಾಗಿದ್ದ ಶ್ರೀ ಕೇಶವತಿರುಮಲೈರವರು ವಹಿಸಿದ್ದರು. ಶ್ರೀಯುತರ ನಿರಂತರ ಅಧ್ಯಯನ ಹಾಗೂ ಕಾರ್ಯ ದಕ್ಷತೆಯ ಪರಿಣಾಮವಾಗಿ 2016 ರ ಕೊನೆಯಲ್ಲಿ ASI ಉತ್ಖನನ ಕ್ರಿಯೆಯ ವರದಿ ಪ್ರಕಟಿಸಿತು. ಆ ರಾಷ್ಟ್ರ ಮಟ್ಟದ ವರದಿಯ ಮುಖಪುಟವನ್ನು ಆವರಿಸಿದ್ದು ತಾಳಗುಂದದ ಚಿತ್ರ. ವರದಿಯಲ್ಲಿ ಉತ್ಖನನದಲ್ಲಿ ಸಿಕ್ಕ ಶಾಸನವು ಕನ್ನಡ ಶಾಸನವಾಗಿದ್ದು ಅದರ ಕಾಲವನ್ನು ಕ್ರಿ.ಶ. 370 ರಿಂದ ಕ್ರಿಶ 400 ಎಂದು ತಿಳಿಸಲಾಗಿತ್ತು. ಅಂದರೆ ಶಾಸನವು ಈಗಿನ ಕನ್ನಡದ ಮೊದಲ ಶಾಸನವಾದ ಹಲ್ಮಿಡಿ ಶಾಸನ (ಕ್ರಿ.ಶ450)ಕ್ಕಿಂತಲೂ ಪೂರ್ವದ ಅವಧಿಯ ಶಾಸನ ಇದು ಎಂದು ತಿಳಿಯಬಹುದು. ಇತ್ತೀಚಿಗೆ ಬನವಾಸಿಯಲ್ಲಿ ನಡೆದ ಕದಂಬೋತ್ಸವದಲ್ಲಿ ಉತ್ಖನನದ ಅಧ್ಯಯನಕಾರರಾದ ಹಾಗೂ ನಾಡಿನ ಪ್ರಸಿದ್ಧ ಸಂಶೋಧನಾಕಾರರಾದ ಶ್ರೀ ಕೇಶವಸರ್ ರವರು "ಕನ್ನಡದ ಮೊದಲ ಶಾಸನ" ಎಂಬ ಶೀರ್ಷಿಕೆಯಡಿ ಕನ್ನಡ ಭಾಷಾ ಪಾವಿತ್ರ್ಯವನ್ನು ಸಾರುವ ತಮ್ಮ ಸಂಶೋಧನಾ ಪ್ರಬಂಧ ಮಂಡಿಸಿದರು.

**ಶಾಸನದ ಪಾಠ....**

**............... ವುಸ**

**.............ತ್ನೋಮಿಯಾ**

**.....ಕೊಟ್ಟಾರ್ ಪುಲೋನಾಗೇ ಸ್ಕ**

**..... ಯಾಮಾಂ ಚನ್ದ್ರಾದಿತ್ಯ**

**ಮೋಗಬೋಯ್ಗರಾ ನಾವಿದಾವಜೀ ನಾಗ (ಣ*)**


**ಪುಲಿ (ಣ್ಡ * ) ಗೆಯಾ ಹಲಮಿ ಕೊಳ್ಳೆ ನಾಲ್ಕುಂ ಮಾಸೇ ತು**

**........ ಜಾ.... ಮಿ............ ಭೂ**

**ಸಾರಾಂಶ :** ಚಂದ್ರಾದಿತ್ಯನ ಆಡಳಿತ ಕಾಲದಲ್ಲಿ ಕ್ಷೌರಿಕ ವೃತ್ತಿಯ ನಾಗಣ್ಣನಿಗೆ ನಾಲ್ಕು ಮಾಸ ಪರ್ಯಂತ ಅನುಭವಿಸಿಕೊಂಡು ಬರಲು ಪುಲಿಂದಿಗೆಯಲ್ಲಿ ಇನ್ನೂ ಉತ್ತಿರದ ಭೂಮಿಯನ್ನು ದಾನವಾಗಿ ನೀಡಲಾಗಿದೆ. ಕೆಲವು ಶಾಸನಗಳ ಕಾಲವನ್ನು ಲಿಪಿಯ ಶೈಲಿ, ಭಾಷೆಯ ಆಧಾರದ ಮೇಲೆ ನಿರ್ಧಾರ ಮಾಡಬಹುದು. ಕೆಲವು ಶಾಸನಗಳ



ಕಾಲವನ್ನು ಅವುಗಳನ್ನು ಹೊಂದಿಸಿರುವ, ಅಳವಡಿಸಿರುವ ಸ್ಥಳಗಳ ಆಧಾರದ ಮೇಲೆ ನಿರ್ಧರಿಸಲು ಸಾಧ್ಯವಿದೆ, ಆದರೆ ತಾಳಗುಂದದ ಶಾಸನ ತುಸು ಭಿನ್ನವಾಗಿದ್ದು ಸಾಂದರ್ಭಿಕ ಆಧಾರಗಳನ್ನು ಹಾಗೂ ಲಿಪಿಯ ಶೈಲಿಯ ಮೇಲೆ ನಿರ್ಧರಿಸಬೇಕಾಗುತ್ತದೆ.



ಈ ಶಾಸನದ ಅಕ್ಷರಗಳು ಕದಂಬ ಲಿಪಿಯನ್ನು ಹೋಲುತ್ತವೆ. ಮೇಲ್ನೋಟಕ್ಕೆ ಹಲ್ಮಿಡಿ ಶಾಸನದಂತೆ ಕಾಣುತ್ತವೆ. ಆದರೆ ಸೂಕ್ಷ್ಮವಾಗಿ ಅವಲೋಕಿಸಿದಾಗ ಶಾತವಾಹನ ಮತ್ತು ಕದಂಬರ ನಡುವಿನ ಲಿಪಿ ಎಂದು ಅರಿವಾಗುತ್ತದೆ. ಈ ಶಾಸನದ ಕಾಲನಿರ್ಣಯಕ್ಕೆ ಅನೇಕ ಪ್ರಾಚೀನ ಶಾಸನಗಳ ಲಿಪಿಗಳ ವಿನ್ಯಾಸವನ್ನು ಸುಮಾರು ಒಂದು ವರುಷಗಳ ಕಾಲ ಈ ಶಾಸನದ ಲಿಪಿಯೊಂದಿಗೆ ಮತ್ತೆ ಮತ್ತೆ ತುಲನಾತ್ಮಕ ಅಧ್ಯಯನ ಮಾಡಲಾಗಿದೆ. ಶಾಸನ ದೊರಕಿದ ಸ್ಥಳದಲ್ಲಿನ ಮಣ್ಣಿನ ಸ್ಥರಗಳ ಅಧ್ಯಯನ ಹಾಗೂ ದೊರೆತ ನಾಣ್ಯಗಳ ಆಳ ಇಂತಹ ಸೂಕ್ಷ್ಮ ವಿಚಾರಗಳನ್ನು ಸಹ ಕಾಲ ನಿರ್ಣಯಕ್ಕೆ ಪೂರಕವಾಗಿ ಅಧ್ಯಯನ ಮಾಡಲಾಗಿದೆ.

ಮೇಲಿನ ಅಂಶಗಳಿಂದ ಭಾರತ ದೇಶಕ್ಕೆ ಉತ್ತರದ ನಲಂದ ವಿಶ್ವವಿದ್ಯಾಲಯವು ಪ್ರಾಚೀನ ವಿದ್ಯಾಕ್ಷೇತ್ರವಾದರೆ, ಕರ್ನಾಟಕ ರಾಜ್ಯಕ್ಕೆ ತಾಳಗುಂದವು ಪ್ರಾಚೀನ ವಿದ್ಯಾಕ್ಷೇತ್ರವಾಗಿದೆ.

**ರಮೇಶ್ ಹಿರೇಜಂಬೂರು**
ಶಿಕ್ಷಕರು, ಸ.ಪ್ರೌ.ಶಾಲೆ
ಚಿಟ್ಟೂರು, ಸೊರಬ

## ಪುರಂದರರ ಹುಟ್ಟೂರು ಮಲೆಸೀಮೆ – ಆರಗವೇ ??..

ಕರ್ನಾಟಕ ಸಂಗೀತ ಪಿತಾಮಹ ಪುರಂದರದಾಸರು ತಮ್ಮ ಕೀರ್ತನೆಗಳ ಮೂಲಕ ಇಂದಿಗೂ ಜೀವಂತ. ಆದರೆ ಇವತ್ತಿಗೂ ಪುರಂದರದಾಸರ ಹುಟ್ಟೂರಿನ ಬಗ್ಗೆ ಜಿಜ್ಞಾಸೆಗಳಿವೆ. ಸುಮಾರು 4.75 ಲಕ್ಷ ಕೀರ್ತನೆಗಳನ್ನು ಬರೆದ ಪುರಂದರದಾಸರು ಎಲ್ಲಿಯೂ ತಮ್ಮ ಹುಟ್ಟೂರಿನ ಗುಟ್ಟು ಬಿಟ್ಟುಕೊಟ್ಟಿಲ್ಲ. ಪುರಂದರದಾಸರ ಹುಟ್ಟೂರಿನ ಬಗ್ಗೆ ತಿಳಿಸುವ ಖಚಿತ ದಾಖಲೆಗಳೂ ಲಭ್ಯವಾಗಿಲ್ಲ.

ಊರುಗಳ ಹೆಸರು, ಕೆಲವು ಐತಿಹ್ಯಗಳು, ದಾಸರು ಬಳಸಿದ ಭಾಷೆ, ದಾಸ ಸಾಹಿತ್ಯದ ಪರಂಪರೆಯ ಆಧಾರದ ಮೇಲೆ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲೂಕಿನ **“ಆರಗ”** ಪ್ರಾಂತ್ಯವೇ ದಾಸಶ್ರೇಷ್ಠ ಪುರಂದರದಾಸರ ಹುಟ್ಟೂರು ಎಂಬ ವಾದವನ್ನು ಹಲವು ಸಂಶೋಧಕರು ಮಂಡಿಸಿದ್ದಾರೆ. ಇದಕ್ಕೆ ಹುಟ್ಟೂರು ಆರಗ ಪ್ರಾಂತ್ಯವೇ ಆಗಿದೆ ಎಂಬುದಕ್ಕೆ ಪುಷ್ಠಿ ನೀಡುವಂತಿದೆ.

**ಸಂಶೋಧಕರ ವಾದವೇನು** ?......

ಪುರಂದರದಾಸರ ಹುಟ್ಟೂರು ಮಹಾರಾಷ್ಟ್ರದ ಪುರಂದರಗಡ ಎಂಬುದನ್ನು ಅನೇಕ ಸಂಶೋಧಕರು ಸಾರಾಸಗಟು ತಿರಸ್ಕರಿಸಿದ್ದಾರೆ. ಕಪಟರಾಳ ಕೃಷ್ಣರಾಯರು, ಹರಿದಾಸ ಪರಂಪರೆ ಆರಗ ರಾಜ್ಯದಲ್ಲಿ ಮೊಟ್ಟಮೊದಲು ಉಗಮವಾಯಿತು. ಎಂಬುದಕ್ಕೆ ಅನೇಕ ಪುರಾವೆಗಳನ್ನು ನೀಡಿದ್ದಾರೆ. ತೀರ್ಥಹಳ್ಳಿಯ ಭೀಮನಕಟ್ಟೆ ಮಠದ


ಗರುಡವಾಹನತೀರ್ಥರು ಮತ್ತು ಕೂಡಲಿ ಅಕ್ಷೋಭ್ಯತೀರ್ಥ ಮಠದ ಸುಲಭಾಚಾರ್ಯರಿಂದ ಪಶ್ಚಿಮದಲ್ಲಿ ದಾಸ ಸಾಹಿತ್ಯ ಆರಂಭವಾಗಿ ಮುಂದೆ ಹಂಪೆ, ರಾಯಚೂರು, ಆದವಾನಿ ನಾಡುಗಳಲ್ಲಿ ಬೆಳೆದು ಬಂದಿರುವುದಕ್ಕೆ ಹಲವು ಆಧಾರಗಳನ್ನು ನೀಡಿದ್ದಾರೆ. ಆದರೆ ಇದೇ ಅವಧಿಯಲ್ಲಿ ಆರಗದಲ್ಲಿ 60 ಮಂದಿ ಆದ್ಯ ಮತ್ತು ಆರಾಧ್ಯರು ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದರು ಎಂದು ಗೊರಬಾಳು ಹನುಮಂತರಾಯರು ಉಲ್ಲೇಖಿಸಿದ್ದು, ಆದ್ಯರು ಮತ್ತು ಆರಾಧ್ಯರು ರಚಿಸಿದ 51 ಪದಗಳು, 20 ಸುಳಾದಿಗಳು, ಉಗಾಭೋಗಗಳನ್ನು ಸಂಗ್ರಹಿಸಿದ್ದಾರೆ. ಪುರಂದರದಾಸರ ಹುಟ್ಟೂರು ಪುರಂದರಗಡ ಎಂಬುದನ್ನು ಒಪ್ಪದ ಕಪಟರಾಳ ಕೃಷ್ಣರಾಯರು ತೀರ್ಥಹಳ್ಳಿ ತಾಲೂಕಿನ ಆರಗ ಪ್ರಾಂತ್ಯವೇ ದಾಸರ ಹುಟ್ಟೂರು ಎಂಬ ಬಗ್ಗೆ ವಿ.ಸೀತಾರಾಮಯ್ಯ ಅವರ 'ಪುರಂದರದಾಸರು' ಕೃತಿಯ 18ನೇ ಪುಟದಲ್ಲಿ ಉಲ್ಲೇಖಿಸಿದ್ದಾರೆ.

**ಐತಿಹ್ಯಗಳು ಏನಿವೆ?........**

ಶಾಸನಗಳ ಪ್ರಕಾರ ಕ್ರಿ.ಶ. 8ನೇ ಶತಮಾನದಲ್ಲಿ ಆರಗದ ಉಲ್ಲೇಖ ಬರುತ್ತದೆ. ಕ್ರಿ.ಶ. ಸುಮಾರು 10 ರಿಂದ 17ನೇ ಶತಮಾನದವರೆಗೆ ವೇಂಟೆ, ಕಂಪಣ, ರಾಜ್ಯ, ಪುರ ಪುತ್ತನ ಶೀರ್ಷಿಕೆಯಡಿ ಆರಗ ಮಲೆರಾಜ್ಯದ ರಾಜಧಾನಿಯಾಗಿತ್ತು. ಒಂದಷ್ಟು ವರ್ಷಗಳ ಕಾಲ ಚಂದ್ರಗುತ್ತಿಯೊಂದಿಗೆ ಸೇರಿ ಆರಗ ಗುತ್ತಿರಾಜ್ಯವೆಂದು ಗುರುತಿಸಲ್ಪಟ್ಟಿತ್ತು. ವಿಜಯನಗರದ ಅರಸು ವಂಶದವರು ಆರಗದಲ್ಲಿ ಆಡಳಿತ ನಡೆಸಿ ಅನುಭವ ಗಳಿಸಿದ ಬಗ್ಗೆ ಶಾಸನಗಳಲ್ಲಿ ಉಲ್ಲೇಖವಿದೆ. ಕೆಳದಿಯ ಹಿರಿಯ ವೆಂಕಟಪ್ಪನಾಯಕ ಕೆಲಕಾಲ ಆರಗದಲ್ಲಿ ಆಡಳಿತ ನಡೆಸಿದ್ದ ಕ್ರಿ.ಶ. 1500ರಲ್ಲೇ ಕೆಳದಿ ಸಂಸ್ಥಾನ ಸ್ಥಾಪನೆಗೊಂಡಿತು. ಈ ಸಂಸ್ಥಾನದಲ್ಲಿ ಕನ್ನಡ ಮತ್ತು ಸಂಸ್ಕೃತ ಸಾಹಿತ್ಯ ಕೃತಿಗಳು 1592ರ ನಂತರ ಸೃಷ್ಟಿಯಾಗುತ್ತವೆ. ಆದರೆ 1564 ರಲ್ಲೇ ಪುರಂದರದಾಸರು ಕಾಲವಾದ ಕಾರಣ ಕೆಳದಿ ಸಂಸ್ಥಾನದ ಸಾಹಿತ್ಯ ಕೃಷಿಯಲ್ಲಿ ಪುರಂದರದಾಸರ ಹೆಸರು ಉಲ್ಲೇಖವಾಗಿರುವ ಸಾಧ್ಯತೆ ಇಲ್ಲ ಎಂದು ಕೆಲವರು ವಾದಿಸುತ್ತಾರೆ. ಆದರೆ ಈ ಅವಧಿಯಲ್ಲಿ ಆರಗ ವಿಠಲಭಕ್ತಿಯ ನೆಲೆಯಾಗಿದ್ದ ಬಗ್ಗೆ ಸಾಕಷ್ಟು ಐತಿಹ್ಯಗಳು ಲಭಿಸಿವೆ. ಆರಗ ಪ್ರಾಂತ್ಯದ ಅನೇಕ ಕುಟುಂಬಗಳಿಗೆ 'ವಿಠಲ' ನೇ ಆರಾಧ್ಯ ದೈವವಾಗಿದ್ದ. ಶಾಸನಗಳಲ್ಲಿ ಕೂಡ 'ವಿಠಲ ಗದ್ಯಾಣ' 'ವಿಠಲ ಪಂಡಗ' ಎಂಬ ಉಲ್ಲೇಖವಿದೆ. ಆರಗದ ವೈಷ್ಣವರ ಹೆಸರಿನ ಮುಂದೆ 'ನಾಯಕ' ಎಂಬ ಉಪನಾಮ ಸಾಮಾನ್ಯವಾಗಿತ್ತು.

**ಕುರುಹುಗಳು ಇವೆ:–**

ಪುರಂದರದಾಸರ ಹುಟ್ಟೂರು ಮಲೆಸೀಮೆಯ ಶರಾವತಿನದಿ ಉಗಮವಾಗುವ ಆಸುಪಾಸಿನ ಕ್ಷೇಮಪುರ ಎಂಬ ವಾದವಿದೆ. ಆ ಕ್ಷೇಮಪುರವೇ ಕ್ರಮೇಣ ಆಡುಮಾತಿನಲ್ಲಿ 'ಕೇಶವಪುರ'ವಾಗಿದೆ ಎಂದು ಹೇಳಲಾಗುತ್ತಿದೆ. ಶರಾವತಿ ನದಿ ಉಗಮವಾಗುವ ಅಂಬುತೀರ್ಥದಿಂದ 7–8 ಕಿ.ಮೀ, ಆರಗದಿಂದ ಕೇವಲ 2 ಕಿ.ಮೀ. ದೂರದಲ್ಲಿ



'ಕೇಶವಪುರ' ಎಂಬ ಊರು ಇಂದಿಗೂ ಇದೆ. ವರದಪ್ಪನಾಯಕ ವರ್ತಕನಾಗಿದ್ದು. ಶ್ರೀನಿವಾಸನಾಯಕ ಕೂಡ ಇದೇ ವ್ಯವಹಾರ ಮುಂದುವರಿಸಿದ್ದ. ಈ ಅವಧಿಯಲ್ಲಿ ಆರಗ ಪ್ರಮುಖ ವ್ಯಾವಹಾರಿಕ ಕೇಂದ್ರವಾಗಿದ್ದನ್ನು ಇತಿಹಾಸ ಹೇಳುತ್ತಿದ್ದು. ವರ್ತಕರಿಗಾಗಿಯೇ ವಿಶಾಲ ಜಾಗದ ವ್ಯವಸ್ಥೆ ಮಾಡಲಾಗಿತ್ತು. ಇದನ್ನು ಜನ ವರ್ತಕರ ಕೇರಿ ಎಂದು ಕರೆಯುತ್ತಿದ್ದರು. ವರ್ತಕರ ಕೇರಿ ಕ್ರಮೇಣ 'ವರ್ತೇಕೇರಿ'ಯಾಗಿ ಮಾರ್ಪಟ್ಟಿದ್ದು, ಈ ಊರು ಕೂಡ ಇಲ್ಲಿದೆ. ಆರಗ ಪ್ರಾಂತ್ಯದಲ್ಲಿ ವಿಠಲನ ಭಕ್ತರ ಸಂಖ್ಯೆ ಅಪಾರ ಪ್ರಮಾಣದಲ್ಲಿದ್ದು, 'ವಿಠಲನ ಗುಡಿ'ಯನ್ನೂ ನಿರ್ಮಿಸಲಾಗಿತ್ತು. ಆರಗಕ್ಕೆ ಹೊಂದಿಕೊಂಡಂತೆ ಇಂದಿಗೂ 'ವಿಠಲಗುಂಡಿ' ಎಂಬ ಊರಿದ್ದು ಇಲ್ಲಿ ಶ್ರೀ ಕೃಷ್ಣ, ಬಲರಾಮನ ವಿಗ್ರಹ, ನೆಲಸಮವಾದ ಕಲ್ಲುಚಪ್ಪಡಿಗಳು, ಬಾವಿಗಳು ಮತ್ತಿತರ ಕುರುಹುಗಳಿವೆ. ಪುರಂದರದಾಸರ ಹೆಂಡತಿ ಸರಸ್ವತಿ ಮೂಗುತಿ ಕಳೆದುಕೊಂಡು ಆತಂಕದಿಂದ ಕಾಳಿಕಾದೇವಿ ಬಳಿ ನಿವೇದಿಸಿಕೊಳ್ಳುವ ಉಲ್ಲೇಖವಿದ್ದು, ವಿಠಲಗುಂಡಿ ಪಕ್ಕದಲ್ಲೇ 'ಕಾಳಮ್ಮನಗುಡಿ' ಎಂಬ ಊರು, ಇದೇ ಊರಿನಲ್ಲಿ ಕಾಳಿಕಾದೇವಿಯ ದೇವಾಲಯ ಇಂದಿಗೂ ಇದೆ. ಹರಿದಾಸರಾಗಿ ಪರಿವರ್ತನೆಗೊಂಡ ನಂತರ ಪುರಂದರದಾಸರು 'ಅರುಣಗಿರಿ ವೆಂಕಟರಮಣ' ಮತ್ತು 'ಗೋಪಿನಾಥ ಹೊಳೆ' ಬಗ್ಗೆಯೇ ಒಂದೊಂದು ಕೀರ್ತನೆ ರಚಿಸಿರುವುದಾಗಿ ಹೇಳುತ್ತಿದ್ದು, ವಿಠಲಗುಂಡಿ ಪಕ್ಕದಲ್ಲೇ ಗೋಪಿನಾಥ ಹೊಳೆ, ಮಲೆನಾಡಿನಲ್ಲಿ ಎರಡನೇ ತಿರುಪತಿ ಎಂದೇ ಹೆಸರಾಗಿರುವ 'ಅರುಣಗಿರಿ ಶ್ರೀ ಲಕ್ಷ್ಮೀವೆಂಕಟರಮಣ' ದೇವಸ್ಥಾನವೂ ಇವೆ. ದಾಸರಿಗೆ ಉಂಬಳಿಯಾಗಿ ನೀಡಿದ್ದ ಗದ್ದೆಗಳು ಕಾಲಕ್ರಮೇಣ 'ದಾಸನಗದ್ದೆ' ಎಂದು ಹೆಸರಾಗಿದ್ದು, ಈ ಭಾಗದಲ್ಲಿ ದಾಸನಗದ್ದೆ ಎಂಬ ಎರಡು ಊರುಗಳಿವೆ.

**ಮಲೆನಾಡಿನ ಭಾಷೆ ...**

ಪುರಂದರದಾಸರು ತಮ್ಮ ಕೀರ್ತನೆಗಳಲ್ಲಿ ಹೆಚ್ಚಾಗಿ ಮಲೆಸೀಮೆಯ ಭಾಷೆ ಬಳಸಿರುವುದು ಕೂಡ ಪುರಂದರರ ಮೂಲ ಮಲೆನಾಡು ಎಂಬುದಕ್ಕೆ ಪುಷ್ಠಿ ನೀಡುತ್ತದೆ. ಮಲೆನಾಡಿನ ಸರಳವಾದ ಆಡುಭಾಷೆ ರಾಜ್ಯದ ಬೇರಾವುದೇ ಭಾಗಗಳಲ್ಲಿ ಬಳಕೆ ಆಗುವುದಿಲ್ಲ 'ಮಾಡು ಸಿಕ್ಕದಲ್ಲ ಮಾಡಿನ ಗೂಡು ಸಿಕ್ಕದಲ್ಲ' ಎಂಬ ಕೀರ್ತನೆ ಇದಕ್ಕೊಂದು ಸ್ಪಷ್ಟ ನಿದರ್ಶನ. 'ಮಾಡು' ಎಂದರೆ ಮಲೆನಾಡಿನ ಭಾಷೆಯಲ್ಲಿ ಮನೆಯ ಮೇಲ್ಚಾವಣಿ. ಇದು ಮಲೆನಾಡು ಭಾಗದಲ್ಲಿ ಮಾತ್ರ ಪ್ರಚಲಿತದಲ್ಲಿರುವ ಪದ. 'ಮನಶುದ್ಧಿ ಇಲ್ಲದವನಿಗೆ ಮಂತ್ರದ ಫಲವೇನು? ತನುಶುದ್ಧಿ ಇಲ್ಲದವನಿಗೆ ತೀರ್ಥದ ಫಲವೇನು? ಮಿಂದಲ್ಲಿ ಫಲವೇನು? ಮೀನು ಮೊಸಳೆಗಳಂತೆ, ಹೊರಗೆ ಮಿಂದು ಒಳಗೆ ಮೀಯದವನ ಕಂಡು, ಬೆರಗಾಗಿ ನಗುತ್ತಿದ್ದ ನಮ್ಮ ಪುರಂದರ ವಿಠಲ ಕೀರ್ತನೆಯಲ್ಲಿ ಬರುವ 'ಮೀಯು' (ಸ್ನಾನ ಮಾಡು) ಎಂಬ ಪದ ಕೂಡ ಮಲೆನಾಡು ಭಾಗದ್ದು. ಬರವಣಿಗೆಯಲ್ಲಿ ಸ್ಥಳೀಯ ಆಡುಭಾಷೆಯ ಪರಿಣಾಮ ಇದ್ದೇ ಇರುತ್ತದೆ. ಪುರಂದರರು ಕೀರ್ತನೆಗಳಲ್ಲಿ ಬಳಸಿದ ಪದಗಳು ಕೂಡ ಅವರ ಹುಟ್ಟೂರು ಮಲೆಸೀಮೆ ಎಂಬುದನ್ನು ಸಾರುತ್ತವೆ. ಎಂಬುದು ಸಂಶೋಧಕರ ವಾದ.

ಸುತ್ತಮುತ್ತ ಇರುವ ಕೆಲವು ಐತಿಹ್ಯಗಳನ್ನು ಆಧರಿಸಿ ಉತ್ಖನನ ನಡೆಸಿದರೆ, ಲಭ್ಯವಿರುವ ಶಾಸನಗಳ ಆಳ ಅಧ್ಯಯನ ನಡೆಸಿದರೆ ಮತ್ತಷ್ಟು ಪುರಾವೆಗಳು ಲಭಿಸುತ್ತವೆ. ಈ ನಿಟ್ಟಿನಲ್ಲಿ ಇತಿಹಾಸ ಸಂಶೋಧಕರು, ಸರಕಾರ ಗಮನಹರಿಸಬೇಕು. ಪುರಂದರದಾಸರ ಹುಟ್ಟೂರಿನ ಬಗ್ಗೆ ಇರುವ ಗೊಂದಲಗಳ ಪರಿಹಾರಕ್ಕೆ ತೆರೆ ಎಳೆಯಬೇಕು ಎಂಬ ಒತ್ತಾಯ ಕೇಳಿಬಂದಿದೆ.

**ಲೇಖನ ಕೃಪೆ ; ಆರಗ ರವಿ, ಪತ್ರಕರ್ತರು**

ಸಂಗ್ರಹ : ರಾಮಕೃಷ್ಣ ಸಹಶಿಕ್ಷಕರು ಸರ್ಕಾರಿ ಪ್ರೌಢಶಾಲೆ,
ಆರಗ, ತೀರ್ಥಹಳ್ಳಿ ತಾಲ್ಲೂಕು.

# ಮೃಗವಧೆಯ ಐತಿಹಾಸಿಕ ಹಿನ್ನೆಲೆ

**ಹಿನ್ನಲೆ**

ಮೃಗವಧೆ (ಮಿಗವನ್ನು ವಧಿಸಿದ ಸ್ಥಳ) ಕ್ಷೇತ್ರ, ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನಿಂದ 25 ಕಿ.ಮೀ. ಹಾಗೂ ಕೊಪ್ಪದಿಂದ 22 ಕಿ.ಮೀ. ದೂರದಲ್ಲಿದೆ. ಮಲಹಾನಿಕರೇಶ್ವರ ಎಂಬ ಮೂಲ ಹೆಸರಿನ ಈ ಲಿಂಗವಿರುವ ದೇವಸ್ಥಾನ ಇಂದು ಮಲ್ಲಿಕಾರ್ಜುನ ದೇವಸ್ಥಾನವೆಂದು ಪ್ರಸಿದ್ಧಿ ಪಡೆದಿದೆ.

**ಐತಿಹ್ಯ**

ವನವಾಸ ಸಂದರ್ಭದಲ್ಲಿ ಶ್ರೀ ರಾಮನು, ಚಿನ್ನದ ಜಿಂಕೆಯ ರೂಪದಲ್ಲಿ ಬಂದ ಮಾರೀಚನನ್ನು ವಧೆ ಮಾಡಿದ್ದು ಈ ಸ್ಥಳದಲ್ಲೆಂದು ಪ್ರತೀತಿ. (ಮೃಗವನ್ನು ವಧೆ ಮಾಡಿದ್ದರಿಂದ ಈ ಕ್ಷೇತ್ರಕ್ಕೆ ಮೃಗವಧೆ ಎಂದು ಹೆಸರಾಯಿತು) ಇದರಿಂದುಂಟಾದ ಬ್ರಹ್ಮಹತ್ಯಾ ದೋಷದಿಂದ ಪಾರಾಗಲು ಶ್ರೀರಾಮನು ಮಾರೀಚನ ದೇಹದಲ್ಲಿದ್ದ ಬಾಣವನ್ನು ಹೊರತೆಗೆದು ಬ್ರಾಹ್ಮೀ ನದಿಯ ದಂಡೆಯ ಮೇಲೆ ಶಿವಲಿಂಗವೊಂದನ್ನು ಸ್ಥಾಪಿಸಿದನು. ಇದೇ ಇಂದಿನ ಪ್ರಸಿದ್ಧ ಮಲ್ಲಿಕಾರ್ಜುನ ದೇವಸ್ಥಾನ, ಸುತ್ತಲೂ ಈಶ್ವರನ ಸಮಸ್ತ ಗಣಗಳು ನೆಲೆಸಿವೆ ಎನ್ನುತ್ತಾರೆ. ದೇವಸ್ಥಾನದ ಹತ್ತಿರ ಬ್ರಾಹ್ಮೀ ನದಿ ಹರಿಯುತ್ತಿದೆ.



**ದೇವಸ್ಥಾನದ ಒಳಭಾಗ**

**ನಿರ್ಮಾಣ**

ಈ ದೇವಾಲಯವನ್ನು ಚಾಲುಕ್ಯರ ಅರಸನಾದ ತ್ರಿಭುವನಮಲ್ಲನು ಕ್ರಿ.ಶ. 1060 ರಲ್ಲಿ ನಿರ್ಮಿಸಿದನು. ಕಾಲಾಂತರದಲ್ಲಿ ಕೆಳದಿ ಸೋಮಶೇಖರನ ಕಾಲದಲ್ಲಿ ದೇವಾಲಯವನ್ನು ಪುನುರುತ್ಥಾನ ಮಾಡಲಾಯಿತು. ನಾಲ್ಕೂವರೆ ಅಡಿ ಎತ್ತರದ ಶಿವಲಿಂಗ ಇಲ್ಲಿನ ವೈಶಿಷ್ಟ್ಯ.

**ಇಲ್ಲಿನ ಇತರ ಪ್ರಮುಖ ದೇವಾಲಯಗಳು**

ಶನೀಶ್ವರ ದೇವಾಲಯ, ಮೃಗವಧೆ – ಈ ದೇವಸ್ಥಾನದಲ್ಲಿರುವ ಶನೀಶ್ವರ ದೇವಾಲಯವೂ ಮಲೆನಾಡಿನಲ್ಲಿ ಪ್ರಸಿದ್ಧಿ ಹೊಂದಿದೆ ಹಾಗೂ ಅತಿ ಹೆಚ್ಚು ಭಕ್ತರು ಈ ದೇವರ ದರ್ಶನಕ್ಕೆ ಬರುತ್ತಾರೆ. ಇದಲ್ಲದೇ ಈ ದೇವಸ್ಥಾನದಲ್ಲಿ ಶಂಕರೇಶ್ವರ, ಉಗ್ರ ನರಸಿಂಹ, ಆಂಜನೇಯ ಮತ್ತು ಪಂಜುರ್ಲಿ ದೇವಾಲಯಗಳೂ ಇವೆ.

# ಚಂದ್ರಗುತ್ತಿ – ಐತಿಹ್ಯ ಮತ್ತು ಇತಿಹಾಸ

ಮಲೆನಾಡಿನ ಸುಂದರ ಬೆಟ್ಟಗುಡ್ಡಗಳ ನಡುವೆ ಮೈ ಚೆಲ್ಲಿ ನಿಂತ ಬೆಟ್ಟಗಳು, ಕಲ್ಲು ರಾಶಿ.ಅದರ ನಡುವೆ ಸುಂದರ ವನರಾಶಿ. ಆಕಾಶಕ್ಕೆ ತಲೆ ಎತ್ತಿನಿಂತ ಮರಗಳು, ಮೈ ಚಾಚಿದ ಬೆಟ್ಟಗಳಿಗೆ ಪೈಪೋಟಿ ನೀಡುವಂತೆ ಕಾಣುತ್ತವೆ. ಅಲ್ಲಿಯೇ ಅನತಿ ದೂರದಲ್ಲಿಯೇ ಜುಳು ಜುಳು ಹರಿಯುವ ವರದಾ ನದಿ ಪ್ರಾಚೀನ ನದಿ. ಪಂಪ ಕವಿ ಬನವಾಸಿಯ ವರದೆಯ ದಡದಲ್ಲಿ ನಿಂತು ಇದರ ಸೌಂದರ್ಯವನ್ನು ಹಾಡಿ ಹೊಗಳಿದ್ದಾನೆ. "ಸೋಗಯಿಸಿ ಬಂದ ಮಾಮರನೆ" ಎಂದು ಅವನು ಹೇಳುವುದು ಬನವಾಸಿಯು ಆವರಿಸಿರುವ ಚಂದ್ರಗುತ್ತಿಯ ಪ್ರದೇಶವನ್ನು ಕುರಿತೇ ಹೊರತು ಮತ್ತೇನಲ್ಲ. ಇಂತಹ ಸುಂದರ ಪ್ರದೇಶದ ನಡುವೆ ನಮ್ಮೂರು ನಿಂತಿದೆ. ಅಲ್ಲಿ ತಾಯಿ ರೇಣುಕಾಂಬೆ ಮೈದಳೆದು ಕೃಪೆ ತೋರಿದ್ದಾಳೆ. ಲಕ್ಷಾಂತರ ಭಕ್ತರ ಕಣ್ಮಣಿಯಾಗಿ ಕಂಗೊಳಿಸುತ್ತಿದ್ದಾಳೆ. ಸಣ್ಣ ಸಣ್ಣ ಕಲ್ಲುಗಳು ಉರುಳಿ ಬಿದ್ದಿವೆಯೇನೋ ಅನ್ನುವಂತೆ ಚಂದ್ರಗುತ್ತಿ ಊರಿನ ಉದ್ದಕ್ಕೂ ಹರಡಿ ನಿಂತಿದೆ. ಇಂತಹ ಊರಿನಲ್ಲಿ ಹತ್ತಾರು ಜಾತಿ– ಕೋಮುಗಳು ಸೌಹಾರ್ಧತೆಯಿಂದ ಬಾಳುತ್ತಿವೆ. ಕೃಷಿ ಪ್ರಧಾನವಾದ ಈ ಊರು ಶೈಕ್ಷಣಿಕವಾಗಿ ಅಷ್ಟೇನೂ ಮುಂದುವರಿದಿಲ್ಲವಾದರೂ ವಿದ್ಯಾವಂತರ ಸಂಖ್ಯೆಯೇನೂ ಕಡಿಮೆಯಿಲ್ಲ. ಸುತ್ತ ಹತ್ತಾರು ಹಳ್ಳಿಗಳಿಗೆ ಕೇಂದ್ರವಾಗಿರುವುದರಿಂದ ವ್ಯಾಪಾರ ವಹಿವಾಟು ಚುರುಕಾಗಿರುತ್ತದೆ. ಸುತ್ತಲೂ ಹೂಕೆರೆ, ತಾವರೆಕೆರೆ, ಮಲ್ಲೆ ಕೆರೆ, ಹೊಟ್ಟುಗೆರೆ ಎಂಬ ಏಳೆಂಟು ಕೆರೆಗಳಿದ್ದು, ಬೃಹತ್ತಾದ ಕೋಟೆಯು ಇದೆ. ಸುಮಾರು ಹನ್ನೆರಡನೆ ಶತಮಾನಕ್ಕಿಂತಲೂ ಮೊದಲೇ ನಿರ್ಮಿಸಿರುವ ಈ ಕೋಟೆ ಮರು ರೂಪುಗೊಂಡ ಸ್ಮಾರಕವಾದಂತಿದೆ.

**ಚಂದ್ರಗುತ್ತಿ ಎಂಬ ಹೆಸರಿನ ಹಿನ್ನಲೆಯನ್ನು ಹೀಗೆ ಗಮನಿಸಬಹುದಾಗಿದೆ.**

1. ಬೇಟೆಗಾರರು, ಪಶುಪಾಲಕರು ಹುಣ್ಣಿಮೆಯ ದಿನ ಒಂದೆಡೆ ಸೇರಿ ಸಂತಸವನ್ನು ಹಂಚಿಕೊಳ್ಳುತ್ತಿದ್ದರಿಂದ ಚಂದ್ರನ ದಿನ ಸೇರುವ ಸ್ಥಳವನ್ನು ಚಂದ್ರಗುತ್ತಿ ಎಂದಿರಬಹುದು. ಈಗಲೂ ಗುತ್ಯಮ್ಮನ ಭಕ್ತರಾದ ಪಶುಪಾಲಕ ಸಂಸ್ಕೃತಿಯುಳ್ಳವರು ತಮ್ಮ ಆಕಳೊಂದು ಕರು ಹಾಕಿದಾಗ ಮೊದಲ ಹಾಲು, ಬೆಣ್ಣೆ, ತುಪ್ಪಗಳನ್ನು ಮೀಸಲೆಂದು



ದೇವಿಗೆ ಅರ್ಪಣೆ ಮಾಡಿದ ಮೇಲೆಯೇ ತಾವು ಸೇವಿಸುವುದು. ಅಲ್ಲದೆ ಕರುಗಳನ್ನು ದೇವರಿಗೆ ಅರ್ಪಿಸುತ್ತಾರೆ. ಅಷ್ಟೆ ಅಲ್ಲದೆ ಹುಣ್ಣಿಮೆಯಲ್ಲಿ ಈಗಲೂ ಭಕ್ತರ ಸಂಖ್ಯೆ ಹೆಚ್ಚು.

2. ಕತ್ತಲು–ಬೆಳದಿಂಗಳು ಲೈಂಗಿಕ ಪ್ರವೃತ್ತಿಗೆ ಪೂರಕ ಮತ್ತು ಪ್ರೇರಣೆ. ಚಂದ್ರ ಉಭಯಲಿಂಗೀ ದೇವರು. ಪುರುಷ ಹಾಗೂ ಸ್ತ್ರೀಯರೆನ್ನದೆ ಇಲ್ಲಿ ಸೇರುತ್ತಿದ್ದರು. ಶಾಕ್ತರಿಗೆ ಈ ದೇವರು ಪೂಜನೀಯ.
3. ನಾಥ ಪಂಥದ ಗುರು ಮಚ್ಛೇಂದ್ರನಾಥರು ಹುಟ್ಟಿದ್ದು ಚಂದ್ರಗಿರಿಯಲ್ಲಿ ಹಾಗಾಗಿ ನಾಥ–ಬೌದ್ಧರು ಬದುಕಿ ಹೋದ ಈ ಊರು ಚಂದ್ರಗುತ್ತಿ ಎನಿಸಿಕೊಂಡಿದೆ.
3. ಚಂದ್ರಗುಪ್ತ ಅಥವಾ ಕತ್ತೆಕಿವಿ ರಾಜ ಎಂಬುವವನು ಇದ್ದು, ಮಗಳಿಗೆ ಆಸೆ ಪಟ್ಟಿದ್ದರಿಂದ ನಾಶವಾದ ಎಂಬ ಜನಪದ ಕಥೆಗಳಿವೆ.
4. ಬಹುತೇಕ ಶಾಸನಗಳಲ್ಲಿ ಗುತ್ತಿಯ ನಾಡು ಎಂದು ಕರೆಯಲಾಗಿದೆ. ವಿಜಯನಗರದ ಅರಸನಾಗಿ ಹರಿಹರನು ಪಟ್ಟ ಸ್ವೀಕರಿಸಿದ ಮೇಲೆ ತನ್ನ ಸಹೋದರನನ್ನು ಚಂದ್ರಗುತ್ತಿಯ ಕಂಪಣಕ್ಕೆ ನೇಮಿಸಿದ.
5. ಆದರೆ ಜನಪದ ಸಾಹಿತ್ಯದಲ್ಲಿ ಚಂದ್ರಗುತ್ತಿ ಎಂಬ ಹೆಸರು ಎಲ್ಲೂ ಬರದೆ ಗುತ್ತಿ, ಗುತ್ತಿಗುಡ್ಡ ಎಂದೇ ಕರೆಯಲಾಗುತ್ತದೆ.

ಎಲ್ಲರ ಅಮ್ಮ ಎಕ್ಕಲಮ್ಮ ಆಗಿದ್ದಾಳೆ. ಎಕ್ಕೆ ಎಂದರೆ ಹಾಲು ಬರುವ ಮರ. ಆದ್ದರಿಂದ ಎಲ್ಲರ ಅಮ್ಮ ಎಲ್ಲಮ್ಮ ಆಗಿದ್ದಾಳೆ. ಶಿವನ ವರ ಪ್ರಸಾದದಿಂದ ಪರಶುರಾಮ ಹುಟ್ಟುತ್ತಾನೆ. ರಾಜ ಕುಟುಂಬದಲ್ಲಿ ಹುಟ್ಟಿದ ರೇಣುಕೆ ಜಮದಗ್ನಿಯನ್ನು ಮದುವೆಯಾಗುತ್ತಾಳೆ. ಆದರೆ ಅವನಿಂದ ದೂಷಣೆಗೆ ಒಳಗಾದ ರೇಣುಕೆ ಜಮದಗ್ನಿಯ ಆದೇಶದಂತೆ ಪರಶುರಾಮನಿಂದ ಕೊಲ್ಲಲ್ಪಡುತ್ತಾಳೆ. ಬೆನ್ನು ಹತ್ತಿ ಬಂದ ಪರಶುರಾಮನಿಂದ ತಪ್ಪಿಸಿಕೊಳ್ಳಲು ಗುಹೆ ಸೇರಿದ ಕಾರಣಕ್ಕಾಗಿ ಈಗಲೂ ರೇಣುಕೆಗೆ ಹಿಂಭಾಗದ ಪೂಜೆ.

ಜೈನರು, ಬೌದ್ಧರ ಆರಾಧನಾ ಕೇಂದ್ರವಾಗಿದ್ದ ಚಂದ್ರಗುತ್ತಿಯಲ್ಲಿ ಈಗಲೂ ನಾಥ ಪಂಥದ ಮಠವಿದೆ. ಭೈರವನನ್ನು ಪೂಜಿಸುವ ಇವರು ದಸರಾ ಹಬ್ಬದಲ್ಲಿ ಘಟಸ್ಥಾಪನೆಯಲ್ಲೂ ಪ್ರಮುಖ ಪಾತ್ರ ವಹಿಸುತ್ತಾರೆ. ಸುತ್ತಲೂ ವಿವಿಧ ಜಾತಿಯವರು ಪೂಜಿಸುವ ಶೂಲದ ಭೈರವ, ಮಾತಂಗಿ, ಪರುಶುರಾಮ ಮುಂತಾದ ದೇವರುಗಳಿವೆ. ಈಗಲೂ ಜೋಗತಿಯರ ಹಾಡು ಕುಣಿತಗಳನ್ನು ಕಾಣಬಹುದಾಗಿದೆ. ಗುತ್ತಿಯ ಅಮ್ಮನನ್ನು ರೇಣುಕಾಂಬೆ ಎಂದು ಕರೆದರೂ ಕೂಡಾ ಗುತ್ತಿ ಕನ್ನವ್ವ, ಮಾಯಕಾರ್ತಿ, ಗುಡ್ಡದವ್ವಳಾಗಿಯೆ ಇನ್ನು ಜನರ ಬಾಯಲ್ಲಿ ಉಳಿದುಕೊಂಡಿದ್ದಾಳೆ.

ಚಂದ್ರಗುತ್ತಿ ಜಾತ್ರೆ ಅತ್ಯಂತ ಪ್ರಸಿದ್ಧವಾಗಿದ್ದು ನೂರಾರು ಹಳ್ಳಿಗಳಿಂದ ಜನ ಗಾಡಿ ಕಟ್ಟಿಕೊಂಡು ಬಂದು ಮೂರ್‍ನಾಲ್ಕು ದಿನ ಇದ್ದು ಸಂಭ್ರಮಿಸುತ್ತಾರೆ, ಮೊದಲೆಲ್ಲ ತಿಂಗಳುಗಟ್ಟಲೇ ನಡೆಯುತ್ತಿದ್ದ ಈ ಜಾತ್ರೆಯು ಈಗ ಈ ಅಬ್ಬರವನ್ನು ಕಳೆದುಕೊಂಡಿದೆ. ಆದರೂ ಹೊಸ ರೂಪವನ್ನು ಪಡೆದುಕೊಳ್ಳುತ್ತಾ ಸಾಗಿದೆ.

**ಪ್ರಭಾಕರ ಎಚ್.ಎಸ್.**
ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಹೊಳೆ ಮರೂರು. ಸೊರಬ

# ಉರ್ದು ನಲಿ-ಕಲಿ ತರಗತಿಗಳ ಕಲ್ಪನೆ

ದಿನಾಂಕ : 23-01-2018 ರಂದು ಡಯಟ್ ಶಿವಮೊಗ್ಗ ದಿಂದ ಬಿ.ಆರ್.ಸಿಯ ಮೂಲಕ ಒಂದು ಆದೇಶ ಕೈ ಸೇರಿತು. ಮನ್ಸೂರ್ ಅಹಮದ್, ಸಿ.ಆರ್.ಪಿ., ಲಷ್ಕರ್ ಮೊಹಲ್ಲಾ, ಶಿವಮೊಗ್ಗ ತಮಗೆ ದಿನಾಂಕ : 27-01-2018 ರಿಂದ 30-01-2018ರ ವರೆಗೆ 04 ದಿನ ಉರ್ದು ನಲಿ-ಕಲಿಯ ಸಂಪನ್ಮೂಲ ವ್ಯಕ್ತಿಯಾಗಿ ಜಾಮೆ-ಉಲ್-ಉಲೂಮ್ ಶಾಲೆ, ವಂಡರ್ ಲಾ ಹತ್ತಿರ, ಬಿಡದಿ ಹೋಬಳಿ, ರಾಮನಗರ ಜಿಲ್ಲೆಗೆ ನಿಯೋಜಿಸಲಾಗಿದೆ. ಆದೇಶ ನೋಡಿದ ತಕ್ಷಣ ಒಂದು ನಿಮಿಷ ಆಲೋಚಿಸಿದೆ. ಒಂದು ಕ್ಲಸ್ಟರ್‌ನ ಸಮೂಹ ಸಂಪನ್ಮೂಲ ವ್ಯಕ್ತಿಯ ಜವಾಬ್ದಾರಿಗಳು, ಜೊತೆಯಲ್ಲಿ ನಲಿ-ಕಲಿ ಸಂಪನ್ಮೂಲ ವ್ಯಕ್ತಿ ಜವಾಬ್ದಾರಿಗಳು, ಇನ್ನೊಂದು ಕಡೆ ಆಸಕ್ತಿ ಆದ್ದರಿಂದ ಇಲಾಖೆಯ ಆದೇಶವೆಂದು ತರಬೇತಿಯಲ್ಲಿ ಭಾಗವಹಿಸಿ ತರಬೇತಿ ಪಡೆದುಕೊಂಡು ಬಂದೆ. ನಂತರ ಡಯಟ್‌ನ ಆದೇಶದಂತೆ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಉರ್ದು ನಲಿ-ಕಲಿ ಸಂಪನ್ಮೂಲ ವ್ಯಕ್ತಿಯಾಗಿ, ಶ್ರೀ ಫಣೀಶ ಸರ್ ಹಿರಿಯ ಉಪನ್ಯಾಸಕರು ಹಾಗೂ ಜಿಲ್ಲಾ ನೋಡಲ್ ಅಧಿಕಾರಿಗಳು ನಲಿ-ಕಲಿ, ಇವರ ಮಾರ್ಗದರ್ಶನ, ಶ್ರೀಮತಿ ಶಬಾನ ಅಂಜುಂ ಇವರ ಸಹಕಾರದಲ್ಲಿ ಜಿಲ್ಲಾಮಟ್ಟದ ಉರ್ದು ನಲಿ-ಕಲಿ ತರಬೇತಿಗಳನ್ನು ಏಕೆ ಯಶಸ್ವಿಯಾಗಿ ಮುಗಿಸಿದೆವು.

ನಂತರ ನನ್ನ ಒಂದು ಕಲ್ಪನೆ, ನಾನು ಒಬ್ಬ ಉರ್ದು ನಲಿ-ಕಲಿ ಸಂಪನ್ಮೂಲ ವ್ಯಕ್ತಿಯಾಗಿ ನಾನು ನನ್ನ ಕ್ಲಸ್ಟರ್ ವ್ಯಾಪ್ತಿಯ ಶಾಲೆಗಳಲ್ಲಿ ನಲಿ-ಕಲಿ ತರಗತಿಗಳ ಬಲವರ್ಧನೆ ಮತ್ತು ಮಾದರಿ ನಲಿ-ಕಲಿ ತರಗತಿಗಳನ್ನು ಏಕೆ ನಿರ್ಮಿಸಬಾರದು ಎಂದು ಚಿಂತಿಸುವ ಸಮಯದಲ್ಲೆ, ಶಿವಮೊಗ್ಗ ಬಿ.ಆರ್.ಸಿ.ವತಿಯಿಂದ ಬಿ.ಆರ್.ಜಿ. ಸಭೆಯನ್ನು ಆಯೋಜಿಸಲಾಯಿತು. ಪ್ರತಿ ಒಬ್ಬ ಸಿ.ಆರ್.ಪಿ. ಗಳು ತಮ್ಮ ವ್ಯಾಪ್ತಿಯ ಒಂದು ಶಾಲೆ ದತ್ತು ತೆಗೆದುಕೊಂಡು ನಲಿ-ಕಲಿ ತರಗತಿಗಳ ಬಲವರ್ಧನೆ ಮಾಡಬೇಕೆಂದಾಗ ನಾನು ಆಯ್ಕೆ ಮಾಡಿಕೊಂಡಿದ್ದು ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ಹೊಳಲೂರು, ಆ ಸಮಯದಲ್ಲಿ ಸದರಿ ಶಾಲೆಯಲ್ಲಿ ನಲಿ-ಕಲಿ ಶಿಕ್ಷಕಿಯಾಗಿ ಶ್ರೀಮತಿ ನೂರ್ ಫಾತೀಮ ಕಾರ್ಯ ನಿರ್ವಹಿಸುತ್ತಿದ್ದರು. ನಿರಂತರ ಭೇಟಿಗಳು ನಲಿ-ಕಲಿ ತರಗತಿ ಬಲವರ್ಧನೆ ಕುರಿತು ಒಂದು ಕಿರಿಯ ಯೋಜನೆ ತಯಾರಿ, ಎಸ್.ಡಿ.ಎಂ.ಸಿ. ರವರ ಸಹಕಾರ, ಸ್ಥಳೀಯ ಸಂಘಗಳು, ಗ್ರಾಮ ಪಂಚಾಯತ್‌ರವರ ಸಹಕಾರ ದೊಂದಿಗೆ ನಲಿ-ಕಲಿ ತರಗತಿ ಕೋಣೆಯಲ್ಲಿ ವಿಭಿನ್ನ ಗುಂಪು ತಟ್ಟೆಗಳು, ಗೋಡೆಫಲಕ, ಕಲಿಕಾ ಚಪ್ಪರ ರಚನೆ, ಮೆಟ್ಟಿಲುಗಳಿಗೆ ಅನುಗುಣವಾಗಿ ವಿಷಯವಾರು ಕಲಿಕೋಪಕರಣಗಳ ತಯಾರಿ, ದಾನಿಗಳಿಂದ ಮಕ್ಕಳಿಗೆ ಕೂರಲು ನಲಿ-ಕಲಿ ಟೇಬಲ್‌ಗಳ ಮತ್ತು ಕುರ್ಚಿಗಳ ವ್ಯವಸ್ಥೆ, ಪ್ರೊಜೆಕ್ಟರ್ ಅಳವಡಿಕೆ ಮುಂತಾದ ವಸ್ತುಗಳ ಸಂಗ್ರಹಣೆಯ ಮೂಲಕ ನಲಿ-ಕಲಿ ತರಗತಿ ಕೋಣೆಯ ಬಲವರ್ಧನೆ ಮಾಡಲಾಯಿತು. ಜೊತೆಗೆ ಆಸಕ್ತ ಶಿಕ್ಷಕಿ ಇರುವುದರಿಂದ ಮಕ್ಕಳ ಕಲಿಕಾ ಗುಣಮಟ್ಟ ಉತ್ತಮ ಪಡಿಸಲಾಯಿತು.

ಸದರಿ ಶಾಲೆಯ ನಲಿ-ಕಲಿ ತರಗತಿಯ ಬಲವರ್ಧನೆ ಮತ್ತು ಮಕ್ಕಳ ಕಲಿಕೆಯ ಉತ್ತಮ ಸುದ್ದಿ ಮತ್ತು ಭೇಟಿ ನೀಡಿದವರ ಅಭಿಪ್ರಾಯ ತಿಳಿದು ಸದರಿ ಶಾಲೆಯಲ್ಲಿ ಶಿವಮೊಗ್ಗ, ಭದ್ರಾವತಿ ಮತ್ತು ಶಿಕಾರಿಪುರ ತಾಲ್ಲೂಕುಗಳಿಂದ ಉರ್ದು ನಲಿ-ಕಲಿ ಶಿಕ್ಷಕರ ಸಿ.ಆರ್.ಜಿ ಸಭೆಗಳನ್ನು ಆಯೋಜಿಸಲಾಯಿತು. ಡಯಟ್ ಹಂತದ "ಸಾಧ್ಯವೆಂದರೆ ಸಾಧ್ಯ" ಪ್ಲೆಕ್ಸ್ ನಲ್ಲಿ ಸದರಿ ಶಾಲೆಯ ನಲಿ-ಕಲಿ ಮಕ್ಕಳ ಚಟುವಟಿಕೆಗಳನ್ನು ಪ್ರದರ್ಶಿಸಲಾಯಿತು. 2018-19 ನೇ ಸಾಲಿನಲ್ಲಿ ಡಯಟ್ ವತಿಯಿಂದ ಶ್ರೇಯಸ್ಸಿನ ನಾವೀನ್ಯಯುತ ಯಶೋಗಾಥೆ ಅಭಿನಂದನ ಪತ್ರ ನೀಡಲಾಯಿತು. 2018-19 ನೇ ಸಾಲಿನಲ್ಲಿ ಇಲಾಖೆಯಿಂದ ನಡೆದ ಮೈಕ್ರೋ ಅಧ್ಯಯನದಲ್ಲಿ ಸದರಿ ಶಾಲೆ ಎ+ ಶ್ರೇಣಿ ಗಳಿಸಿತು. ಎ+ ಶ್ರೇಣಿ ಪಡೆದಿದ್ದಕ್ಕೆ ಸದರಿ ಶಾಲೆಗೆ ಉತ್ತಮ ನಲಿ-ಕಲಿ ಶಾಲೆ ಪ್ರಶಸ್ತಿ ನೀಡಲಾಯಿತು 2019-20 ನೇ ಸಾಲಿನಲ್ಲಿ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ನಲಿ-ಕಲಿ ಶಿಕ್ಷಕರಾದ ಶ್ರೀಮತಿ ನೂರ್ ಫಾತೀಮಾ ಇವರ ಕಾರ್ಯ ಮೆಚ್ಚಿ ಇವರಿಗೆ ಜಿಲ್ಲಾ ಉತ್ತಮ ಶಿಕ್ಷಕಿ ಪ್ರಶಸ್ತಿ ನೀಡಲಾಯಿತು. ಸದರಿ ಶಾಲೆಯ ಜೊತೆಗೆ ಕ್ಲಸ್ಟರ್‌ನ ಇತರೆ ಶಾಲೆಗಳಲ್ಲಿಯೂ ಸಹ ನಲಿ-ಕಲಿ ತರಗತಿಗಳ ಬಲವರ್ಧನೆಗೆ ಪ್ರಯತ್ನಿಸಲಾಗುತ್ತಿದೆ. ಮಕ್ಕಳು ಕೂರಲು ನಲಿ-ಕಲಿ ಟೇಬಲ್ ಮತ್ತು ಕುರ್ಚಿ, ಉತ್ತಮ ಕಲಿಕಾ ವಾತಾವರಣ, ವಿಭಿನ್ನ ಗುಂಪು ತಟ್ಟೆಗಳು, ಗೋಡೆಫಲಕಗಳು, ಮಕ್ಕಳಿಂದ ನಿರ್ವಹಿಸಲಾದ ಚಟುವಟಿಕೆಗಳು, ಸಮರ್ಪಕ ದಾಖಲೆಗಳ ನಿರ್ವಹಣೆ, ನೈಜ ತರಬೇತಿ ಹೊಂದಿರುವ ಶಿಕ್ಷಕರು ಒಟ್ಟಾರೆ ಕ್ಲಸ್ಟರ್ ಹಂತದಲ್ಲಿ ನಲಿ-ಕಲಿ ತರಗತಿಗಳ ಬಲವರ್ಧನೆ ಮತ್ತು ಮಾದರಿ ನಲಿ-ಕಲಿ ತರಗತಿಗಳನ್ನು ನಿರ್ಮಿಸಲು ಪ್ರಯತ್ನಿಸಲಾಗುತ್ತಿದೆ.


**ಮನ್ಸೂರ್ ಅಹಮದ್ ಸಿ.ಆರ್.ಪಿ.**
ಲಷ್ಕರ್ ಮೊಹಲ್ಲಾ, ಶಿವಮೊಗ್ಗ

# ಧಾರ್ಮಿಕ ಸಹಿಷ್ಣುತ ಕೇಂದ್ರಗಳು

## ಧಾರ್ಮಿಕ ಭಾವೈಕ್ಯದ ಸಂಗಮ – ಹಣಗೆರೆ

ಭಾರತ ಸರ್ವಧರ್ಮ ಸಮನ್ವಯ ಮತ್ತು ಜ್ಯಾತ್ಯಾತೀತ ರಾಷ್ಟ್ರ, ಇದಕ್ಕೆ ಸಾಕ್ಷಿ ಎಂಬಂತೆ ತಲೆ ಎತ್ತಿ ಸಮನ್ವಯ ಸಾರುತ್ತಿರುವ ಪುಟ್ಟಗ್ರಾಮ ಹಣಗೆರೆ. ಮಲೆನಾಡಿನ ಹೆಬ್ಬಾಗಿಲು ಎನ್ನುವ ಶಿವಮೊಗ್ಗ ಜಿಲ್ಲೆ ಚೆಲುವೆಲ್ಲಾ ತನ್ನದೆನ್ನುವ ಮಲೆನಾಡಿನ ತೀರ್ಥಹಳ್ಳಿ ತನ್ನ ಸಾಹಿತ್ಯಿಕ, ಸಾಂಸ್ಕೃತಿಕ ಶ್ರೀಮಂತಿಕೆಯಿಂದಲೂ ಎಲ್ಲರ ಆಕರ್ಷಣೀಯ ಕೆಂದ್ರವಾಗಿದೆ. ಮಲೆನಾಡಿನ ಸೊಬಗು, ತಂಪಿನ ತಾಣ, ಶೆಟ್ಟಿಹಳ್ಳಿ ಅಭಯಾರಣ್ಯ ಇಲ್ಲಿ ನೆಲೆನಿಂತಿದೆ. ಸುಪ್ರಸಿದ್ದ ಭಾವ್ಯಕ್ಯತೆಯ ಧಾರ್ಮಿಕ ಸಂಗಮ ಕೇಂದ್ರ ಹಣಗೆರೆ. ಇಲ್ಲಿಯ ವಿಶೇಷವೆಂದರೆ ಒಂದೇ ಸೂರಿನಡಿಯಲ್ಲಿ ಮಂದಿರ ಮತ್ತು ಮಸೀದಿಗಳು ಇರುವುದು. ಒಂದೇ ಸೂರಿನಲ್ಲಿ ಬರುವ ದೇವರುಗಳು ಭೂತಪ್ಪ, ಚೌಡಮ್ಮ ಹಾಗೂ ಸೈಯದ್ ಸಾದತ್ ದರ್ಗಾ. ಇಲ್ಲಿಗೆ ಪ್ರತಿನಿತ್ಯ ಬರುವ ಭಕ್ತರ ಸಂಖ್ಯೆ ಅಪಾರ, ಭಾನುವಾರ, ಅಮಾವಾಸ್ಯೆ ಮತ್ತು ಹುಣ್ಣಿಮೆ ದಿನಗಳಲ್ಲಿ ಸಾವಿರಾರು ಭಕ್ತರು ನಾನಾ ಕಡೆಗಳಿಂದ ಬರುತ್ತಾರೆ. ಭಕ್ತರು ಸ್ವತಃ ತಾವೇ ದೇವರ ಮುಂದೆ ನಿಂತು ತಮ್ಮ ಇಷ್ಟಾರ್ಥಗಳನ್ನು ಈಡೇರೀಸುವಂತೆ ಬೇಡಿಕೊಳ್ಳುತ್ತಾರೆ. ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಹರಕೆ ರೂಪದಲ್ಲಿ ಒಡವೆ, ಹಣ, ಕೋಳಿ, ಕುರಿ, ಹೀಗೆ ದೇವರಿಗೆ ಒಪ್ಪಿಸುತ್ತಾರೆ. ಸೈಯದ್ ಸಾದತ್ ದರ್ಗಾ ಇಲ್ಲಿ ಮುಜಾವರ್ ಎನ್ನುವ ಧಾರ್ಮಿಕ ಮುಖಂಡರು, ಭಕ್ತರು ತಂದ ಕಲ್ಲು ಸಕ್ಕರೆಯ ಓದಿಕೆ ಮಾಡಿ ಅರಾಬಿಕ್ ಮಂತ್ರ ಪಠಿಸಿ ನವಿಲು ಗರಿಯಿಂದ ಭಕ್ತರ ತಲೆ ಮೇಲೆ ಇಟ್ಟು, ಇಷ್ಟಾರ್ಥ ಸಿದ್ಧಿಗಾಗಿ ದೇವರಲ್ಲಿ ಪ್ರಾರ್ಥಿಸುತ್ತಾರೆ ಭಕ್ತರು ಇಲ್ಲಿ ಹಣ್ಣು ಕಾಯಿಗಳನ್ನು ತಾವೇ ದೇವರಿಗೆ ಒಡೆದು ಅರ್ಪಿಸುವುದು ವಿಶೇಷ. ಈ ದೇವಾಲಯಕ್ಕೆ ಬಹಳ ವರ್ಷಗಳ ಇತಿಹಾಸವಿದೆ. ಪ್ರತಿ ವರ್ಷ ಮೇ ತಿಂಗಳಲ್ಲಿ ಉರುಸ್ ನಡೆಯುತ್ತದೆ. ಇಲ್ಲಿಯ ಬೇಡಿಕೆಯ ವಿಶೇಷವೆಂದರೆ ಮರಕ್ಕೆ ಮೊಳೆ ಹೊಡೆಯುವುದು. ಬೀಗ ಹಾಕುವುದು ಮತ್ತು ಬಟ್ಟೆಯಲ್ಲಿ ಹಣ ಕಟ್ಟುವುದು. ಭಕ್ತರು ಬೇಡಿಕೆ ಈಡೇರಿದ ನಂತರ ಹಾಕಿದ ಬೀಗಗಳನ್ನು ತೆಗೆಯುತ್ತಾರೆ.





ತೀರ್ಥಹಳ್ಳಿ ತಾಲ್ಲೂಕು ಸಹ್ಯಾದ್ರಿ ತಪ್ಪಲಿನ ಮಡಿಲಲ್ಲಿ ಇರುವ ಈ ಕೇಂದ್ರ ಅತಿ ಸುಂದರವಾದ ಮತ್ತು ಪ್ರಕೃತಿ ಪ್ರಿಯರಿಗೆ ರಸದೌತಣ ನೀಡುವಂತಿದೆ. ದೇವಾಲಯವು ಮುಜರಾಯಿ ಇಲಾಖೆಗೆ ಸೇರಿದ್ದಾಗಿದೆ. ಇದರ ನಿರ್ವಹಣೆಯನ್ನು ಇಲಾಖೆಗೆ ಸೇರಿದ ಸಮಿತಿಯು ಮಾಡುತ್ತದೆ. ಇಲ್ಲಿ ಧಾರ್ಮಿಕ ಭಾವನೆಯೊಂದಿಗೆ ಪ್ರಕೃತಿ ಪ್ರಿಯರಿಗೆ ಇಷ್ಟವಾದ ತಾಣವಾಗಿದೆ. ಇದು ಪ್ರಕೃತಿ ಸೌಂದರ್ಯಕ್ಕೆ ಹೆಸರುವಾಸಿಯಾದ್ದರಿಂದ ಸ್ವಚ್ಚತೆ ಸ್ವಲ್ಪಮಟ್ಟಿಗೆ ಕಡೆಗಣಿಸಿದರೂ ಈಗ ಅದು ಸ್ವಲ್ಪ ಮಟ್ಟಿಗೆ ಸುಧಾರಿಸಿ ಸುಂದರವಾಗಿ ಕಾಣುವಂತಾಗಿದೆ. ಈ ಕಮಿಟಿಯೊಂದಿಗೆ ಹಣಗೆರೆ ಗ್ರಾಮ ಪಂಚಾಯತ್ ಸ್ವಚ್ಛತೆಯಲ್ಲಿ ಭಾಗಿಯಾಗಿರುತ್ತದೆ.

**ಕೆ.ಪಿ. ಗಣಪತಿ ಸಹಶಿಕ್ಷಕರು,**
ಶ್ರೀ ತಿಪ್ಪೇಸ್ವಾಮಿ ಪ್ರೌಢಶಾಲೆ ಅರನಲ್ಲಿ, ತೀರ್ಥಹಳ್ಳಿ ತಾಲ್ಲೂಕು.

# ಪವಿತ್ರ ಹೃದಯ ಪ್ರಧಾನಾಲಯ, ಶಿವಮೊಗ್ಗ

ಪವಿತ್ರ ಹೃದಯ ಪ್ರಧಾನಾಲಯ ಕೇವಲ ಶಿವಮೊಗ್ಗದಲ್ಲಿ ಮಾತ್ರವಲ್ಲ, ದೇಶದಾದ್ಯಂತವೂ ಪ್ರಸಿದ್ಧ. ಏಕೆಂದರೆ, ಭಾರತದ ಎತ್ತರದ ಕ್ರೈಸ್ತ ದೇವಾಲಯಗಳಲ್ಲಿ ಪವಿತ್ರ ಹೃದಯ ಪ್ರಧಾನಾಲಯವು ದ್ವಿತೀಯ ಸ್ಥಾನದಲ್ಲಿ ನಿಲ್ಲುತ್ತದೆ. ಈ ದೇವಾಲಯಕ್ಕೆ 200 ವರ್ಷಕ್ಕೂ ಹೆಚ್ಚಿನ ಇತಿಹಾಸವಿದೆ ಎಂದು ಚರಿತ್ರೆಯ ಪುಟಗಳು ನಮಗೆ ತಿಳಿಸುತ್ತವೆ.

ನಮಗೆಲ್ಲಾ ತಿಳಿದಿರುವಂತೆ, ದಕ್ಷಿಣ ಭಾರತವನ್ನು ಅನೇಕ ರಾಜರು, ಅರಸರು ಆಳುತ್ತಿದ್ದರು. ಕ್ರಿ. ಪೂ. 3ನೇ ಶತಮಾನದಲ್ಲಿ ಮೌರ್ಯ ಸಾಮ್ರಾಜ್ಯದ ಅರಸನಾದ ಚಕ್ರವರ್ತಿ ಅಶೋಕನು ಈ ನಾಡನ್ನು ಆಕ್ರಮಿಸಿದ್ದನು. ತದನಂತರ ಕದಂಬರು, ಗಂಗರು, ಬಾದಾಮಿ ಚಾಲುಕ್ಯರು, ಹೊಯ್ಸಳರು, ರಾಷ್ಟ್ರಕೂಟರು, ಮೈಸೂರು, ವಿಜಯನಗರ ಸಂಸ್ಥಾನದಲ್ಲಿದ್ದ ಶಿವಮೊಗ್ಗ ಹಾಗೂ ಇತರ ಜಿಲ್ಲೆಯನ್ನು ತಮ್ಮ ವಶಕ್ಕೆ ಅಧೀನಪಡಿಸಿಕೊಂಡರು. ನಂತರ ಕ್ರಿ. ಶ. 1500 ರಿಂದ ಶಿವಮೊಗ್ಗವನ್ನು 263 ವರ್ಷಗಳ ಕಾಲ ಕೆಳದಿ ನಾಯಕರು ಆಳತೊಡಗಿದರು. ಇಂದಿಗೂ ಅವರ ಕಾಲದಲ್ಲಿ ಕಟ್ಟಿದಂತಹ ಕೋಟೆ, ದೇವಾಲಯಗಳು, ವಾಸ್ತು ಶಿಲ್ಪಗಳು ಮತ್ತು ಮ್ಯೂಸಿಯಂಗಳನ್ನು ಕಾಣಬಹುದು. 16ನೇ ಶತಮಾನದಲ್ಲಿ ಪೋರ್ಚುಗೀಸ್ ವ್ಯಾಪಾರಿಗಳು ಭಾರತಕ್ಕೆ ವ್ಯಾಪಾರಕ್ಕೋಸ್ಕರ ಬಂದರು. ಇವರೊಂದಿಗೆ ಕೆಲವು ಕ್ರೈಸ್ತಧರ್ಮದ ಗುರುಗಳು ಕೂಡ ಈ ಭರತ ಭೂಮಿಗೆ ಕಾಲಿಟ್ಟರು. ಇವರು ಕೆಳದಿ ನಾಯಕರೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದವರಾಗಿದ್ದರು ಮತ್ತು ತಮ್ಮ ಕೆಲಸಕಾರ್ಯಗಳಿಗೆ ಹಾಗೂ ಪೂಜಾಕಾರ್ಯಗಳಿಗಾಗಿ ಸ್ವಲ್ಪ ಜಾಗವನ್ನು ಕೆಳದಿ ನಾಯಕರಿಂದ ಪಡೆದುಕೊಂಡರು. ಕೆಳದಿ ನಾಯಕರು ಅವರ ಪರಿಶ್ರಮ ಹಾಗೂ ಉತ್ತಮ ಕೆಲಸವನ್ನು ಕಂಡು ಅನೇಕ ಕ್ರೈಸ್ತ ದೇವಾಲಯಗಳನ್ನು ಕಟ್ಟಿಸಿಕೊಟ್ಟ ಉಲ್ಲೇಖವನ್ನು ಚರಿತ್ರೆಯ ಪುಟಗಳಲ್ಲಿ ನಾವು ಕಾಣಬಹುದು.

**ಉದಾಹರಣೆ :** ಬಿದನೂರು ಸಂಸ್ಥಾನದಲ್ಲಿ ಶಿವಪ್ಪನಾಯಕನ ಕಾಲದಲ್ಲಿ ಗೋವಾದಿಂದ ಬಂದ ಸಂತ ಜೋಸೆಫ್ ವಾಸ್ ಅವರು ಕೇಳಿಕೊಂಡಾಗ ಅವರಿಗೆ ಒಂದು ಪುಟ್ಟ ಕ್ರೈಸ್ತ ದೇವಾಲಯವನ್ನು ಸ್ಥಾಪಿಸಿಕೊಟ್ಟಿದ್ದಾರೆ. ನಂತರ ಬಂದ ಕೆಲವು ರಾಜರುಗಳು ಆ ದೇವಾಲಯವನ್ನು ಉತ್ತಮ ರೀತಿಗೆ ತರಲು ಸಹಕರಿಸಿದ್ದಾರೆ. ಕೆಳದಿ ನಾಯಕರ ಈ ಕಾಲಘಟ್ಟದಲ್ಲಿ ಸುಮಾರು 40 ರಿಂದ 50 ಸಾವಿರ ಕ್ರೈಸ್ತ ಜನರು ಅವರ ರಾಜ್ಯದಲ್ಲಿದ್ದರು ಎಂದು ಹೇಳಲಾಗಿದೆ. ಕಾಲ ಕ್ರಮೇಣ ನಂತರ ಬಂದ ಮೈಸೂರಿನ ಹೈದರ್ ಅಲಿ ಹಾಗೂ ಟಿಪ್ಪು ಸುಲ್ತಾನರು ಈ ಕ್ರೈಸ್ತ ಜನರನ್ನು, ದೇವಾಲಯಗಳನ್ನು ಹಾಗೂ ಕೆಳದಿ ನಾಯಕರ ಸಂಸ್ಥಾನವನ್ನು ಕೋಟೆಯನ್ನು ಆಕ್ರಮಿಸಿಕೊಂಡರು. 17ನೇ ಶತಮಾನದ ಅಂತ್ಯದಲ್ಲಿ “ಪ್ಯಾರಿಸ್ ಫಾರಿನ್ ಮಿಷನ್ ಸೊಸೈಟಿ” ಅವರು ಈ ಮೈಸೂರು ಸಾಮ್ರಾಜ್ಯದ ಆಡಳಿತವನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಈ ಸಮಯದಲ್ಲಿ “ಮಲೆನಾಡಿನ ಹೆಬ್ಬಾಗಿಲು” ಎಂದು ಪ್ರಸಿದ್ಧಿ ಪಡೆದಿರುವ ಶಿವಮೊಗ್ಗ, ಚಿತ್ರದುರ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳು ಪ್ಯಾರಿಸ್ ಫಾರಿನ್ ಮಿಷನ್ ಸೊಸೈಟಿ ಅಧೀನಕ್ಕೆ ಬಂದವು. ಅವರು ತುಂಗಾ ನದಿಯ ದಡದಲ್ಲಿ ಒಂದು ಪುಟ್ಟ ಕ್ರೈಸ್ತ ದೇವಾಲಯವನ್ನು ಪೂಜೆ ಪ್ರಾರ್ಥನೆಗೆಂದು ನಿರ್ಮಿಸಿದರು ಹಾಗೂ ಸಮಾಧಿಗೆ ಒಂದು ಸ್ಥಳವನ್ನು ಖರೀದಿಸಿದರು.

ನಂತರ ಶಿವಮೊಗ್ಗ ಕ್ರೈಸ್ತ ಧರ್ಮಸಭೆಯ ಚರಿತ್ರೆಯ ಪುಟಗಳನ್ನು ತಿರುವಿ ಹಾಕಿದಾಗ, ಫಾದರ್ ಶೆವೆಲಿಯರ್ ಎಂಬುವವರು ಧರ್ಮಗುರುವಾಗಿ (1847–1849) ಶಿವಮೊಗ್ಗಕ್ಕೆ ಬಂದಾಗ ತುಂಗಾ ನದಿಯ ದಡದ ಮೇಲಿದ್ದ ಹಳೇ ಕ್ರೈಸ್ತ ದೇವಾಲಯವನ್ನು ದುರಸ್ತಿಪಡಿಸಿದರು. ಅದರ ಕಾಮಗಾರಿಯನ್ನು ನಿರ್ವಹಿಸಿ ಒಂದು ಸುಂದರ ದೇವಾಲಯವನ್ನು ನಿರ್ಮಿಸಿದರು ಎಂದು ತಿಳಿದು ಬರುತ್ತದೆ. ಅಲ್ಲದೆ ಈ ದೇವಾಲಯವನ್ನು ಮೇರಿ ಮಾತೆಯ

ಪವಿತ್ರ ನಾಮಕ್ಕೆ (Holy Name of Mary) ಸಮರ್ಪಿಸಲಾಯಿತು ಎಂದು ಹೇಳಲಾಗಿದೆ. ಸುಮಾರು ಕ್ರಿ ಶ. 1871 ರಲ್ಲಿ ಈಗಿನ ದೇವಾಲಯದ ಜಾಗವನ್ನು ಆಗಿನ ಮೈಸೂರಿನ ಧರ್ಮಾಧ್ಯಕ್ಷರು, ಒಬ್ಬ ಹಿಂದು ಶ್ರೀಮಂತ ಇಂಜಿನಿಯರ್ ಅವರಿಂದ ಖರೀದಿಸಿದ ಬಳಿಕ ಒಂದು ಬೃಹತ್ ದೇವಾಲಯವನ್ನು ಕಟ್ಟುವ ಕೆಲಸವನ್ನು ಕೈಗೆತ್ತಿಕೊಂಡರು. ಆಗಿನ ಮೈಸೂರಿನ ಧರ್ಮಾಧ್ಯಕ್ಷರಾಗಿದ್ದ ಮೊ। ಶೆವಲಿಯರ್ (ಹಿಂದಿನ ಶಿವಮೊಗ್ಗದ ಧರ್ಮಗುರು) ಇವರು ಕ್ರಿ. ಶ. 1875 ಏಪ್ರಿಲ್ 04 ರಂದು ಈ ನೂತನ ದೇವಾಲಯವನ್ನು ಯೇಸುವಿನ ಪವಿತ್ರ ಹೃದಯಕ್ಕೆ (Sacred Heart Of Jesus) ಸಮರ್ಪಿಸಿ ಪವಿತ್ರೀಕರಿಸಿದರು.

ಜನರಲ್ಲಿ ಹೆಚ್ಚಿನ ಭಕ್ತಿ ಬೆಳೆಸುವ ಹಾಗೂ ಜನಸೇವಾ ಕಾರ್ಯಗಳಲ್ಲಿ ಕೆಲ ಜನರನ್ನು ಒಂದು ಸಂಘಟನೆಯ ಮೂಲಕ ತೊಡಗಿಸುವ ಉದ್ದೇಶದಿಂದ ಫಾದರ್ ಡಾವಿಯೋರವರು ಶಿವಮೊಗ್ಗ ಧರ್ಮಕೇಂದ್ರದ ಗುರುಗಳಾಗಿದ್ದ ಫಾದರ್ ಕ್ಲೈನರ್ ಇವರ ಜೊತೆ ಸಮಾಲೋಚಿಸಿ ಕಾರ್ಮೆಲ್ ಮಾತೆಯ ಸಭೆ (Confraternity of our Lady mount carmel) ಎಂಬ ಒಂದು ಭ್ರಾತೃತ್ವದ ಸಂಘವನ್ನು ಸ್ಥಾಪಿಸಿದರು. ಮುಂದೆ ಫಾದರ್ ಬಾರ್ರೆ ಎಂಬುವವರು ಕ್ರಿ. ಶ. 1877 ರಲ್ಲಿ ಇದನ್ನು ಪುನರ್‌ರಚಿಸಿ ಅದಕ್ಕೆ ವಿವಿಧ ನಿಯಮಾವಳಿಗಳನ್ನು ರೂಪಿಸಿದರಲ್ಲದೆ ಅಂದಿನ ಧರ್ಮಾಧ್ಯಕ್ಷರಾಗಿದ್ದ ಶೆವಲಿಯರ್ ಅವರಿಂದ ಫೆಬ್ರವರಿ 1879 ರಲ್ಲಿ ಈ ನಿಯಮಾವಳಿಗಳಿಗೆ ಅನುಮೋದನೆ ಪಡೆದುಕೊಂಡರು. ಫಾದರ್ ಜೆರ್ವಿಯರ್‌ರವರು ಎರಡನೇ ಬಾರಿಗೆ ಶಿವಮೊಗ್ಗಕ್ಕೆ ವರ್ಗವಾಗಿ ಬಂದಾಗ (ಜನವರಿ 1886 ರಿಂದ ಆಗಸ್ಟ್ 1891), ಈ ಸಭೆಯ ಸದಸ್ಯತ್ವವನ್ನು ಪರಿಷ್ಕರಿಸಿದರು. ಕಾರ್ಮೆಲ್ ಮಾತೆಯ ಸಭೆ, ಇತರ ಧಾರ್ಮಿಕ ಸಭೆಯ ವಿವಿಧ ಚಟುವಟಿಕೆಗಳು 1960ರವರೆಗೆ ಅತೀ ಉತ್ಸಾಹದಿಂದ ನಡೆದು ಬಂದವು.

ಕಾಲಕ್ರಮೇಣ, ಶಿವಮೊಗ್ಗದಲ್ಲಿ ಕ್ರೈಸ್ತ ಭಕ್ತವಿಶ್ವಾಸಿಗಳ ಸಂಖ್ಯೆ ಹೆಚ್ಚಾದ್ದರಿಂದ ಹಳೆಯ ದೇವಾಲಯದಲ್ಲಿ ಜನರಿಗೆ ಕೂರಲು ಸೂಕ್ತ ಜಾಗವಿಲ್ಲದ ಕಾರಣ ಈ ಪವಿತ್ರ ಹೃದಯ ದೇವಾಲಯವನ್ನು ನವೀಕರಣಗೊಳಿಸಿ 1976ರಲ್ಲಿ ಪವಿತ್ರೀಕರಿಸಲಾಯಿತು. 14 ನವೆಂಬರ್ 1988 ರಂದು ವಿಶ್ವಗುರು ದ್ವಿತೀಯ ಜಾನ್ ಪೌಲರು ಶಿವಮೊಗ್ಗವನ್ನು ಚಿಕ್ಕಮಗಳೂರಿನಿಂದ ಬೇರ್ಪಡಿಸಿ ನೂತನ ಹಾಗೂ ಒಂದು ಧರ್ಮಕ್ಷೇತ್ರವಾಗಿ ಘೋಷಿಸಿದರು. ಶಿವಮೊಗ್ಗದ ಜೊತೆಗೆ ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಗಳು ಈ ಶಿವಮೊಗ್ಗ ಧರ್ಮಕ್ಷೇತ್ರದ ಅಡಿಯಲ್ಲಿ ಬಂದವು. ವಿಶ್ವಗುರುಗಳು ಶಿವಮೊಗ್ಗ ಧರ್ಮಕ್ಷೇತ್ರಕ್ಕೆ ಮೊತ್ತಮೊದಲ ಧರ್ಮಾಧ್ಯಕ್ಷರನ್ನಾಗಿ ಪರಮಪೂಜ್ಯ ಇಗ್ನೇಶಿಯಸ್ ಪಿಂಟೋ ಅವರನ್ನು ನೇಮಿಸಿದರು. ಇವರು ಈ ಹಳೆಯ ಪವಿತ್ರ ಹೃದಯ ಪ್ರಧಾನಾಲಯವನ್ನು ಕೆಡವಿ, 31 ಜನವರಿ 1994ರಲ್ಲಿ ನೂತನ ದೇವಾಲಯದ ಕಾರ್ಯವನ್ನು ಆರಂಭಿಸಿದರು. ರೋಮನ್ ವಾಸ್ತುಶಿಲ್ಪ ಕಲೆಯ ರೀತಿಯಲ್ಲಿ ಈ ಬೃಹತ್ ನೂತನ ದೇವಾಲಯವನ್ನು ನಿರ್ಮಿಸಿ 31 ಜನವರಿ 1998 ರಂದು ಆಶೀರ್ವದಿಸಿದರು. ಇದರ ಸುಂದರ ಸೊಬಗು ಇಡೀ ಶಿವಮೊಗ್ಗದಲ್ಲಿ ಹಬ್ಬಿ ಹರಡುವುದು ಮಾತ್ರವಲ್ಲದೇ ದೇಶದ ಎತ್ತರದ ಕ್ರೈಸ್ತ ದೇವಾಲಯಗಳಲ್ಲಿ ಪವಿತ್ರ ಹೃದಯ ಪ್ರಧಾನಾಲಯವು ದ್ವಿತೀಯ ಸ್ಥಾನದಲ್ಲಿ ನಿಂತಿದೆ. ಈ ದೇವಾಲಯವು ಸುಮಾರು 180 ಅಡಿ ಎತ್ತರ, 18,000 ಚದರ ಅಡಿ ಜಾಗದಲ್ಲಿ ನಿರ್ಮಿಸಲಾಗಿದೆ. ಸುಮಾರು 5 ರಿಂದ 8 ಸಾವಿರ ಜನರು ಒಂದು ಬಾರಿಗೆ ಕೂರಬಹುದಾದ ಸ್ಥಳ ಈ ದೇವಾಲಯದಲ್ಲಿದೆ. ದೇವಾಲಯದ ಒಳಗೆ ಅತ್ಯಂತ ಸುಂದರವಾದ ಬಲಿಪೀಠ, ಕಣ್ಣಿಗೆ ಮುದಗೊಳಿಸುವ ದೀಪಾಲಂಕಾರಗಳನ್ನು, ಸುಂದರ ಯೇಸುವಿನ ಪವಿತ್ರ ಹೃದಯದ ಮೂರ್ತಿಗಳನ್ನು, ಇತರ ಸಂತರ ಪವಾಡ ಮೂರ್ತಿಗಳನ್ನು ನಿಲ್ಲಿಸಲಾಗಿದೆ. ಹಬ್ಬ ಜಾತ್ರೆಗಳ ಸಂದರ್ಭದಲ್ಲಿ ಈ ಕ್ರೈಸ್ತದೇವಾಲಯಕ್ಕೆ ದೀಪಾಲಂಕಾರ ಮಾಡಿದರೆ ಅದನ್ನು ನೋಡಲು ಎರಡು ಕಣ್ಣು ಸಾಲದು.

**ಶಿವಮೊಗ್ಗದ ಪವಿತ್ರ ಹೃದಯ ಪ್ರಧಾನಾಲಯದಲ್ಲಿ ಕಾರ್ಮೆಲ್ ಮಾತೆಯ ಭಕ್ತಿ ಮತ್ತು ವಿಶೇಷತೆ.**

ಪ್ರತಿ ವರ್ಷ, ಜುಲೈ 16 ರಂದು ಕಾರ್ಮೆಲ್ ಮಾತೆಯ ಹಬ್ಬವನ್ನು ಇಡೀ ವಿಶ್ವವೇ ಆಚರಿಸುತ್ತದೆ. ಪ್ಯಾಲೆಸ್ತಿನ್ ದೇಶದ ಕಾರ್ಮೆಲ್ ಎಂಬ ಬೆಟ್ಟದಲ್ಲಿ ಕೆಲವು ವಿರಕ್ತ ಯತಿಗಳು ವಾಸಿಸುತ್ತಿದ್ದರು. ಈ ಯತಿಗಳು ಕಾಲಕ್ರಮೇಣ ಕಾರ್ಮೆಲ್ ಧಾರ್ಮಿಕ ಸಭೆಯೊಂದನ್ನು (Carmelite order) ಸ್ಥಾಪಿಸಿದರು. ಈ ಕಾರ್ಮೆಲ್ ಸಭೆಯ ಸದಸ್ಯರಾದ ಸಂತ ಸೈಮನ್ ಸ್ಟಾಕ್ ಎಂಬುವವರಿಗೆ ಮೇರಿ ಮಾತೆಯು 1251 ರಲ್ಲಿ ಅನೇಕ ಬಾರಿ ದರ್ಶನ ನೀಡಿ, ಕಂದು ಬಣ್ಣದ ಉತ್ತರಿಕೆಯೊಂದನ್ನು ನೀಡಿ, ಯಾರು ಮೇರಿ ಮಾತೆಯಲ್ಲಿ ವಿಶ್ವಾಸವಿರಿಸಿ ವಿಧೇಯ ಭಕ್ತಿಯಿಂದ ವಿಧಿವತ್ತಾಗಿ ಧರಿಸುತ್ತಾರೋ ಅಂಥವರನ್ನು ಕಷ್ಟ–ಮರಣದ ಸಮಯದಲ್ಲಿ ಕಾಪಾಡುವ ಭರವಸೆ ನೀಡಿದರು. ಸಂತ ಸೈಮನ್ ಸ್ಟಾಕ್‌ರವರು ಉತ್ತರಿಕೆಯ ಭಕ್ತಿಯನ್ನು ವಿಶ್ವದ ಎಲ್ಲೆಡೆ ಪ್ರಚುರಪಡಿಸಿದರು.

ಶಿವಮೊಗ್ಗದಲ್ಲಿ ಕಾರ್ಮೆಲ್ ಮಾತೆಯ ಸಭೆಯ ಹಬ್ಬವನ್ನು ಜುಲೈ 16 ರಂದು ವಿಜೃಂಭಣೆಯಿಂದ ತಪ್ಪದೆ ಆಚರಿಸಿಕೊಂಡು ಬಂದಿದೆ. ವರ್ಷಗಳು ಉರುಳಿದಂತೆ ಪವಿತ್ರ ಹೃದಯದ ವಾರ್ಷಿಕ ಹಬ್ಬಕ್ಕಿಂತ ಕಾರ್ಮೆಲ್ ಮಾತೆಯ ಹಬ್ಬವೇ ಹೆಚ್ಚಿನ ಪ್ರಾಶಸ್ತ್ಯ ಪಡೆಯಿತು. ಕೇವಲ ಕಾರ್ಮೆಲ್ ಸಭೆಯ ಸದಸ್ಯರಿಂದ ಮಾತ್ರ ಆಚರಿಸಲ್ಪಡುತ್ತಿದ್ದ ಈ ಹಬ್ಬವನ್ನು ಶಿವಮೊಗ್ಗದ ಇಡೀ ಕ್ರೈಸ್ತ ಜನತೆಯಲ್ಲದೆ ಅಕ್ರೈಸ್ತ ಬಾಂಧವರೂ ಕೂಡಾ ಸೇರಿ ಆಚರಿಸತೊಡಗಿದರು. ಇದಕ್ಕೆ ಕೆಲವು ಕಾರಣಗಳು ಇವೆ.



ಶಿವಮೊಗ್ಗ ಕ್ರೈಸ್ತ ಹಿರಿಯರು ಈಗಲೂ ಹೇಳುವಂತೆ ಈ ಶತಮಾನದ ಪ್ರಾರಂಭದಲ್ಲಿ (ಸುಮಾರು 1915 ರಿಂದ 1922) ಧಾರಾಕಾರವಾಗಿ ಸುರಿದ ಮಳೆಯ ಪರಿಣಾಮವಾಗಿ, ಇಡೀ ಶಿವಮೊಗ್ಗ ನಗರವೇ ಮುಳುಗಿಹೋಗುವುದರಲ್ಲಿತ್ತು. ಆಗ ಕಾರ್ಮೆಲ್ ಸಭೆಯ ಸದಸ್ಯರು ಜುಲೈ 16ರ ಹಬ್ಬದ ಸಿದ್ದತೆಯಲ್ಲಿ ತೊಡಗಿದ್ದರು. ಜಾತಿ ಮತ ಭೇದವಿಲ್ಲದೆ ಇಡೀ ಶಿವಮೊಗ್ಗ ನಗರದ ಜನತೆ ಸೃಷ್ಟಿಕರ್ತರ ಮೊರೆ ಹೊಕ್ಕಿತು. ಕ್ರೈಸ್ತರು ಅಂದಿನ ಧರ್ಮಗುರುಗಳ ನೇತೃತ್ವದಲ್ಲಿ ಕಾರ್ಮೆಲ್ ಮಾತೆಯಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಿ, ಉತ್ತರಿಕೆಯೊಂದನ್ನು ಮೆರವಣಿಗೆಯಲ್ಲಿ ತೆಗೆದುಕೊಂಡು ಹಳೇ ತುಂಗಾ ಸೇತುವೆಯ ಬಳಿಯ ನೀರಿನಲ್ಲಿ ಬಿಟ್ಟರು. ಹೀಗೆ ಪ್ರಾರ್ಥಿಸಿ ವಾಪಾಸಾದ ಕೆಲನಿಮಿಷಗಳಲ್ಲೇ ಮಳೆ ಕಡಿಮೆಯಾಗಿ, ನೀರು ನಿಧಾನವಾಗಿ ಇಳಿಯಲು ಪ್ರಾರಂಭವಾಯಿತಂತೆ. ಈ ರೀತಿ ಬೆಳೆದು ಬಂದಂತಹ ಕಾರ್ಮೆಲ್ ಮಾತೆಯ ಭಕ್ತಿಯು, ಶಿವಮೊಗ್ಗದಲ್ಲಿ ಹಿಂದಿನಂತೆ ಉತ್ತುಂಗದ ಸ್ಥಿತಿಯಲ್ಲಿ ಇದೆ. ಮೇರಿ ಮಾತೆಯ ಮೇಲೆ ಅಪರಿಮಿತ ಭಕ್ತಿ ಗೌರವವನ್ನು ಇರಿಸಿರುವ ಜನರು ಆಕೆಯ ಬಳಿ ಪ್ರಾರ್ಥಿಸಲು ಬರುತ್ತಿದ್ದಾರೆ. ದಯಾಳು ತಾಯಿಯಾದ ಮೇರಿ ಮಾತೆಯು ಭಕ್ತಜನರ ಪ್ರಾರ್ಥನೆಗೆ ಖಂಡಿತ ಸ್ಪಂದಿಸಿ, ದೇವರಲ್ಲಿ ವಿನಂತಿಸಿ, ವರಗಳನ್ನು ನೀಡುತ್ತಿದ್ದಾರೆ.

**ಅಸುಂತ ಸಿಕ್ವೇರಾ**
ಉಪನ್ಯಾಸಕರು, ಡಯಟ್, ಶಿವಮೊಗ್ಗ

# ಕೊರೋನ ಮತ್ತು ವಾಷ್ ಕಾರ್ಯಕ್ರಮ

ಈಗ ನಾಲ್ಕು ವರ್ಷಗಳ ಹಿಂದೆ ಇಲಾಖೆಯಿಂದ ಒಂದು ಸುತ್ತೋಲೆ ಬಂದಿತು. ಇದರಲ್ಲಿ ಅಕ್ಟೋಬರ್ ಹದಿನೈದರಂದು ಕೈತೊಳೆಯುವ ದಿನವೆಂದು ಆಚರಿಸಿ, ಮಕ್ಕಳಿಗೆ ಹಾಗೂ ಪೋಷಕರಿಗೆ ಕೈ ತೊಳೆಯುವ ಸರಿಯಾದ ವಿಧಾನವನ್ನು ಪ್ರಾಯೋಗಿಕವಾಗಿ ತೋರಿಸಿ, ಅವರಿಗೂ ಕೈತೊಳೆಯುವುದನ್ನು ಕಲಿಸಬೇಕು ಎಂಬುದಾಗಿತ್ತು. ಇದಕ್ಕಾಗಿ ಸಮೀಪದ ಸರ್ಕಾರಿ ಆಸ್ಪತ್ರೆಯಲ್ಲಿ ನಮಗೆ ತರಬೇತಿಯನ್ನೂ ಕೊಡಲಾಗಿತ್ತು. ಈ "ಕೈ ತೊಳೆಯುವ" ದಿನದ ಸುತ್ತೋಲೆ ನೋಡಿದೊಡೆ ನಾವೆಲ್ಲರೂ ನಕ್ಕಿದ್ದೆವು, ಇದೊಂದು ವಿಚಿತ್ರವಾಗಿದೆಯಲ್ಲ ಎಂಬಂತೆ.

ಆದರೆ, ನಂತರ ಕೂತು ಯೋಚಿಸಿದಾಗ ಅರ್ಥವಾಯಿತು. ನಮ್ಮ ದೇಹದ, ದೇಶದ ಸ್ವಚ್ಛತೆಯನ್ನು ನಾವು ಕಾಪಾಡಿಕೊಳ್ಳಬೇಕೆಂಬ ಎಚ್ಚರಿಕೆ ನಮಗಿನ್ನೂ ಬಂದಿಲ್ಲವೆಂಬುದು. ಈ ಕೈತೊಳೆಯುವ ಹಿಂದಿರುವ ಮಹದುದ್ದೇಶವನ್ನು ಅರಿಯುತ್ತಾ ಹೋದಂತೆ ಸಾಕಷ್ಟು ಅಂಶಗಳು ಕಣ್ಮುಂದೆ ಬಂದವು.

ಸಾಮಾನ್ಯವಾಗಿ ಶಾಲೆಗಳಲ್ಲಿ ಮಕ್ಕಳು ಊಟದ ಸಮಯದಲ್ಲಿ, ಶೌಚಾಲಯ ಬಳಸಿದ ನಂತರ ಕೈ ತೊಳೆಯುತ್ತಾರೆ. ಆದರೆ ಇದಕ್ಕೆ ಸಾಕಷ್ಟು ನೀರು, ಸೋಪು, ಹ್ಯಾಂಡ್‌ವಾಷ್‌ಗಳು ಬೇಕಾಗುತ್ತವೆ. ಇವು ಇಲ್ಲದಿದ್ದರೆ ಮಕ್ಕಳಲ್ಲಿ ಸ್ವಚ್ಛತೆ ಕಾಣುವುದಿಲ್ಲ. ಗಲೀಜಾದ ಕೈ ಕಾಲುಗಳು, ಬೆವರಿದ ಮುಖ, ವಾಸನೆ ಹೊಡೆಯುವ ಶೌಚಾಲಯ, ಕಲೆಗಟ್ಟಿದ ತಟ್ಟೆ-ಲೋಟಗಳು. ಇವುಗಳು ಹೋಗಬೇಕಾದರೆ ಮಕ್ಕಳಿಗೆ ಸ್ವಚ್ಛತೆಯ ಅರಿವು ಮೂಡಬೇಕಾಗುತ್ತದೆ. ಮಕ್ಕಳು ಸ್ವಚ್ಛವಾಗಿರಲು ನೀರು ಹಾಗೂ ಇತರ ಮೂಲಸೌಲಭ್ಯಗಳು ಬೇಕು. ಇವುಗಳನ್ನು ಪೂರೈಸಬೇಕು. ಹಾಗೂ ಬಳಸಬೇಕು. ಇವು ಸಮರ್ಪಕವಾಗಿದ್ದರೆ ತಾನೇ "ಕೈ ತೊಳೆಯುವುದು" !

ಈ ನಿಟ್ಟಿನಲ್ಲಿ ಸ್ವಚ್ಛತೆಯ ಅರಿವು ಮೂಡಿಸಲು ಬಂದ ಯೋಜನೆಯೇ-ಶಾಲೆಗಳಲ್ಲಿ ನೀರು, ನೈರ್ಮಲ್ಯ, ಶುಚಿತ್ವದ ಬಗ್ಗೆ ತರಬೇತಿ. ಇದೊಂದು ಅನುಷ್ಠಾನ ಮಾಡಬೇಕಾದ ತರಬೇತಿ. ನೈರ್ಮಲ್ಯದ ಕುರಿತು ಶಿಕ್ಷಕರ ಸಾಮರ್ಥ್ಯ ಹೆಚ್ಚಿಸುವುದು, ಶಾಲೆಗಳಲ್ಲಿ ಸೌಲಭ್ಯಗಳನ್ನು ಕಲ್ಪಿಸುವುದು, ಶಾಲೆಗಳ ಹೊಣೆಗಾರಿಕೆಯನ್ನು ಅರ್ಥೈಸಿಕೊಳ್ಳಲು ಇದು ಪೂರಕವಾಗಿದೆ.

ನೀರು, ನೈರ್ಮಲ್ಯ, ಶುಚಿತ್ವ ಇವು ಪ್ರತಿಯೊಬ್ಬರ ಜೀವನದ ಭಾಗವಾಗಿರುತ್ತದೆ. "ಗಂಗಾಸ್ನಾನ, ತುಂಗಾಪಾನ" ಎಂಬುದು ಜನಪ್ರಿಯ ನಾಣ್ನುಡಿಯಾಗಿದೆ. ಆದರೆ ಈಗ ನದಿಗಳ ಬಳಕೆ ಮಾಡುವುದು ಎಷ್ಟು ಸೂಕ್ತ? ಅಥವಾ ಅವು ಎಷ್ಟು ಸ್ವಚ್ಛವಾಗಿ ಉಳಿದಿವೆ ಎಂಬುದು ಮಾತ್ರ ಊಹೆಗೆ ನಿಲುಕದ್ದು. ನೀರು ನಮಗೆ ಬೇಕೇಬೇಕು. ನೀರಿಲ್ಲದೆ ನಾವು ಬದುಕಲು ಸಾಧ್ಯವಿಲ್ಲ.

**ಶಾಲೆಯಲ್ಲಿ ನೀರು ಏಕೆ ಬೇಕು?**

ಸ್ವಚ್ಛವಾದ ನೀರು ದೊರೆಯುವುದೇ ದುಸ್ತರವಾದ ಈ ಕಾಲದಲ್ಲಿ ಶಾಲೆಯಲ್ಲಿ ಮಕ್ಕಳಿಗೆ ಪ್ರತಿನಿತ್ಯ ಕುಡಿಯಲು, ಕೈ ತೊಳೆಯಲು, ಶೌಚಾಲಯಕ್ಕೆ ಅತ್ಯುತ್ತಮವಾದ ನೀರನ್ನೇ ಪೂರೈಕೆ ಮಾಡಬೇಕೆಂಬುದು ಸರ್ಕಾರದ ಆಶಯವಾಗಿದೆ. ಮಳೆಕೊಯ್ಲು ಮೂಲಕ ಅಂತರ್ಜಲ ಹೆಚ್ಚಿಸುವ, ಆವಶ್ಯಕತೆ ಇದ್ದಷ್ಟೇ ಬಳಕೆ ಮಾಡುವ ಶಿಸ್ತನ್ನು ಮಕ್ಕಳಲ್ಲಿ ಮೂಡಿಸಬೇಕೆಂಬುದು ಕೂಡಾ ಇದರಲ್ಲಿ ಅಡಕವಾಗಿದೆ.

ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ನೀರು ಸಮರ್ಪಕವಾಗಿ ಶೌಚಾಲಯಗಳಲ್ಲಿ ಸಿಗುವುದಿಲ್ಲ ಎಂಬ ಕಾರಣಕ್ಕೆ ಶಾಲೆ ಬಿಡುವ ಮಕ್ಕಳಿದ್ದಾರೆ. ಹಾಗಾಗಿ ಶಾಲೆಯಲ್ಲಿ ನೀರು ಸಾಕಷ್ಟು ಲಭ್ಯವಿರಲೇಬೇಕು.

ಲೆಡ್, ಪೆಸ್ಟಿಸೈಡ್ ಮುಂತಾದ ವಿಷಕಾರಿ ವಸ್ತುಗಳು ಆರೋಗ್ಯಕ್ಕೆ ಮಾರಕ ಎಂಬ ಅಂಶ ಎಲ್ಲರಿಗೂ ಗೊತ್ತಿದೆ. ಆದರೆ ಶುದ್ಧನೀರಿನ ಪೂರೈಕೆ ಮಾಡುವ ಅಥವಾ ನೀರಿನ ಮೂಲಗಳನ್ನು ಶುದ್ಧವಾಗಿಡುವ ಇಚ್ಛಾಶಕ್ತಿ ಮಾತ್ರ

ಯಾರಿಗೂ ಇಲ್ಲವೆಂಬುದು ದುರಂತದ ವಿಚಾರ. ಈ ಕುರಿತು ಎಲ್ಲರಿಗೂ ಜಾಗೃತಿ ಬೇಕಿದೆ.

**ಸ್ವಚ್ಛತೆಯ ಅರಿವು**

ಮತ್ತೊಂದು ಅಂಶ, ಸ್ವಚ್ಛತೆ ಅಥವಾ ನೈರ್ಮಲ್ಯ. ಇಲ್ಲಿ ವೈಯಕ್ತಿಕ ಸ್ವಚ್ಛತೆ ಹಾಗೂ ಶಾಲೆ, ಪರಿಸರದ ಸ್ವಚ್ಛತೆಯ ಕುರಿತು ಗಮನ ಹರಿಸಬೇಕಾಗುತ್ತದೆ. ಹದಿಹರೆಯದ ಮಕ್ಕಳು, ಋತುಮತಿಯಾದ ಹೆಣ್ಣುಮಕ್ಕಳು ಅತೀ ಹೆಚ್ಚು ಶುಚಿಯಾಗಿ ಇರಬೇಕಾಗುತ್ತದೆ. ಮುಟ್ಟಿನ ದಿನಗಳಲ್ಲಿ ಅವರಿಗೆ ಸಾಕಷ್ಟು ಸಾಂತ್ವನ, ಕಾಳಜಿ, ಪ್ರೀತಿಯ ಆವಶ್ಯಕತೆ ಇರುತ್ತದೆ. ಮಾನಸಿಕವಾಗಿ ಬೆಂಬಲ ಬೇಕಿರುತ್ತದೆ. ಅದರೊಂದಿಗೆ ಶಾಲೆಯಲ್ಲಿ ಶೌಚಾಲಯ ಸಮರ್ಪಕವಾಗಿ ಇರದಿದ್ದರೆ ಅವರು ಕುಸಿದು ಹೋಗುತ್ತಾರೆ. ಅನಿರೀಕ್ಷಿತವಾಗಿ ಎದುರಾಗುವ ದೈಹಿಕ ತೊಂದರೆಗಳಿಗೆ ಶಾಲೆ, ಶಿಕ್ಷಕರು ಸಾಂತ್ವನ ಹೇಳಬೇಕು. ಮುಜುಗರದ ವಾತಾವರಣವನ್ನು ಉಂಟುಮಾಡಬಾರದು. ಸ್ಯಾನಿಟರಿ ಪ್ಯಾಡ್, ಸೋಪು, ನೀರು, ಸುರಕ್ಷಿತವಾದ ಶೌಚಾಲಯಗಳು ಕಡ್ಡಾಯವಾಗಿ ಇರಬೇಕಾಗುತ್ತದೆ.

ಇಲ್ಲಿ ನನ್ನ ಬಾಲ್ಯದ ಅನುಭವವೊಂದು ಕಣ್ಣೆದುರು ಬರುತ್ತದೆ. ಎಂಟನೇ ತರಗತಿಗೆ ಸೇರಿದ ಹೊಸತು. ಸಹಪಾಠಿಯೊಬ್ಬಳು ಶಾಲೆಯಲ್ಲಿ ಮೊದಲ ಬಾರಿಗೆ ಮುಟ್ಟಾದಳು. ಅವಳಿಗೆ ಯಾವ ಅರಿವೂ ಇಲ್ಲ. ಶಿಕ್ಷಕರು ಗಮನ ಕೊಡಲೇ ಇಲ್ಲ. ಅವಳ ಮನೆ ತುಂಬಾ ದೂರ. ನಾವೇ ಹೇಗೋ ವ್ಯವಸ್ಥೆ ಮಾಡಿ ಮನೆಗೆ ಕಳಿಸುವ ಹೊತ್ತಿಗೆ ಶಾಲೆಗೆಲ್ಲಾ ಗೊತ್ತಾಗಿತ್ತು. ಅವಳು ಮುಜುಗರ, ಅವಮಾನದಿಂದ ಹಿಡಿಯಷ್ಟಾಗಿದ್ದಳು. ಅವಳ ಪಾಡು ನೋಡಲು ಆಗುತ್ತಿರಲಿಲ್ಲ. ಶಾಲೆಯಲ್ಲಿ ಶೌಚಾಲಯ ನೆಪಮಾತ್ರಕ್ಕೆ ಇತ್ತು. ನೀರಂತೂ ಇಲ್ಲವೇ ಇಲ್ಲ. ನಾವು ಶಾಲೆಯ ಪಕ್ಕದ ಮನೆಗೋ, ಅಕೇಶಿಯಾ ಕಾಡೊಳಗೋ ಹೋಗಬೇಕಾದ ಸ್ಥಿತಿ. ಅಂದು ಮನೆಗೆ ಹೋದ ಹುಡುಗಿ ಮತ್ತೆ ಶಾಲೆಗೆ ಬರಲೇ ಇಲ್ಲ. ಶಾಲೆಯಲ್ಲಿ ಸರಿಯಾದ ವ್ಯವಸ್ಥೆ ಇಲ್ಲವೆಂಬ ಕಾರಣಕ್ಕೋ, ಆದ ಅವಮಾನಕ್ಕೋ, ಸಾಂತ್ವನ ಸಿಗದ ಕಾರಣಕ್ಕೋ, ಆಕೆ ಬರಲೇ ಇಲ್ಲ. ಈಗಲೂ ಅವಳಮುಖ ನೆನಪಾಗುತ್ತದೆ. ನಮಗೆ ಆ ವಯಸ್ಸಿನಲ್ಲಿ ಏನು ಮಾಡಬಹುದೆಂದು ಗೊತ್ತಿತ್ತೇ ಹೊರತೂ ಅವಳಿಗೆ ಸಮಾಧಾನ ಹೇಳುವಷ್ಟು ಪ್ರೌಢತೆ ಇರಲಿಲ್ಲ. ಸಮಾಧಾನ ಕೊಡಬೇಕಾದವರು ಯಾವುದೋ ಮುಜುಗರಕ್ಕೊಳಗಾಗಿ ಕೂತುಬಿಟ್ಟರು. ಗಂಡುಮಕ್ಕಳಂತೂ ಏನೊ ಆಗಿಹೋಗಿದೆಯೆಂಬಂತೆ ಮಾತನಾಡುತ್ತಿದ್ದರು. ಮಾರನೇ ವರ್ಷ ಶಾಲೆಯ ಸ್ಥಿತಿ ಬದಲಾಯಿತು. ಬೇರೆ ಶಿಕ್ಷಕರು ಬಂದರು. ಅವರು ನಮ್ಮೊಡನೆ ಚರ್ಚಿಸುತ್ತಿದ್ದರು.ಸಮಾಧಾನಿಸುತ್ತಿದ್ದರು. ನಾವೂ ಬದಲಾದೆವು.

ಈಗ ಎಲ್ಲಾ ಶಾಲೆಗಳಲ್ಲಿ ನೀರು, ಶೌಚಾಲಯ ವ್ಯವಸ್ಥೆ ಇದೆ. ಮೀನಾ ತಂಡ ಇದೆ. ಅರಿವು ಹೊಂದಿದ ಶಿಕ್ಷಕರು ಇದ್ದಾರೆ. ಶುಚಿ ಪ್ಯಾಡ್ಸ್ ಲಭ್ಯವಿದೆ. ನರ್ಸ್‌ಗಳು ಭೇಟಿ ಮಾಡಿ ಸಮಾಲೋಚನೆ ಮಾಡುತ್ತಾರೆ. ಆದರೂ ಮಕ್ಕಳಲ್ಲಿ ಜಾಗೃತಿ ಮೂಡಿಸುವ ಆವಶ್ಯಕತೆ ಇದೆ. ಗಂಡು ಮಕ್ಕಳಲ್ಲಿ ಅರಿವು ಮೂಡಿಸಬೇಕು. ಕಾಲ ಬದಲಾದರೂ ಮನಸ್ಥಿತಿ, ಪರಿಸ್ಥಿತಿ ಎಲ್ಲೆಡೆಯಲ್ಲೂ ಬದಲಾಗಿಲ್ಲ. ಹಾಗಾಗಿ ಸೌಲಭ್ಯಗಳ ಜೊತೆಗೆ ಮಾಹಿತಿಯನ್ನು ನೀಡುವ ಕಾರ್ಯ ಹಾಗೂ ಜವಾಬ್ದಾರಿ ಶಿಕ್ಷಕರ ಮೇಲಿದೆ.

ಮಕ್ಕಳು ತಮ್ಮ ಬಾಲ್ಯ ಹಾಗೂ ತಾರುಣ್ಯದ ಬಹುಪಾಲು ಅವಧಿಯನ್ನು ಶಾಲೆಗಳಲ್ಲಿ ಕಳೆಯುತ್ತಾರೆ. ಇದರಿಂದಾಗಿ ಅವರ ಅಗತ್ಯತೆಗಳನ್ನು ಈಡೇರಿಸುವ, ಸಮಸ್ಯೆಗಳಿಗೆ ಸ್ಪಂದಿಸುವ ಜವಾಬ್ದಾರಿ ಶಿಕ್ಷಕರದ್ದೇ ಆಗಿರುತ್ತದೆ. ಮುಖ್ಯ ಶಿಕ್ಷಕರು ಸಹಶಿಕ್ಷಕರೊಂದಿಗೆ ಸಮನ್ವಯಗೊಳಿಸಿಕೊಂಡು ಮಕ್ಕಳಿಗೆ, ಪೋಷಕರಿಗೆ ಜಾಗೃತಿ ಮೂಡಿಸಬೇಕಾಗುತ್ತದೆ.

ಶಾಲೆಯು ಶೌಚಾಲಯದ ಸ್ವಚ್ಛತೆಯೊಂದಿಗೆ ಮಕ್ಕಳ ವೈಯಕ್ತಿಕ ಸ್ವಚ್ಛತೆಗೆ ಬಹಳ ಮಹತ್ವ ಕೊಡಬೇಕಾಗುತ್ತದೆ. ಹೆಣ್ಣುಮಕ್ಕಳಿಗೆ, ಗಂಡುಮಕ್ಕಳಿಗೆ ಪ್ರತ್ಯೇಕ ಶೌಚಾಲಯವು ಸುವ್ಯವಸ್ಥಿತವಾಗಿ ಇರಬೇಕು. ಅದರೊಂದಿಗೆ ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಇಳಿಜಾರು ಮೆಟ್ಟಿಲು, ವೀಲ್ ಚೇರ್, ಕನ್ನಡಕ, ಶ್ರವಣ ಸಾಧನಗಳನ್ನು ಹೇಗೆ

ಪೂರೈಸುತ್ತೇವೆಯೋ ಅದೇ ರೀತಿಯಲ್ಲಿ ಶೌಚಾಲಯವನ್ನೂ ನಿರ್ಮಿಸಬೇಕಾಗುತ್ತದೆ. ಇಲ್ಲದಿದ್ದರೆ ಅವರು ಸಮಾಜದ ಹೊರಗೆ ಉಳಿದು ಬಿಡುತ್ತಾರೆ. ಇಂತಹ ಸ್ಥಿತಿಯಲ್ಲಿ ಅಂತರ್ಗತ ಶಿಕ್ಷಣವೆಂಬುದು ಕನಸೇ ಆಗುತ್ತದೆ. ಊಟ, ನಿದ್ರೆ ಎಷ್ಟು ಮುಖ್ಯವೋ ಶುಚಿತ್ವವೂ ಅಷ್ಟೇ ಮುಖ್ಯ.

ಹಾಗಾಗಿ ಶಾಲೆಯಲ್ಲಿ ಶುದ್ಧ ಕುಡಿಯುವ ನೀರು, ಸ್ವಚ್ಛ ಶೌಚಾಲಯ, ಮನಸ್ಸಿಗೆ ಆಹ್ಲಾದ ನೀಡುವ, ಸ್ವಾವಲಂಬಿಯಾಗುವುದನ್ನು ಕಲಿಸುವ ಕೈತೋಟ, ರುಚಿಯಾದ ದಾಸೋಹ ಇರಬೇಕು. ಹುಡುಗರು ಬಯಲಿಗೆ ಹೋಗುತ್ತಾರೆ, ಹುಡುಗಿಯರು ಪಕ್ಕದ ಮನೆಗೆ ಹೋಗುತ್ತಾರೆ ಎಂಬ ಉಡಾಫೆ ಶಾಲೆ ಹಾಗೂ ಭಾಗೀದಾರರಲ್ಲಿ ಇರಬಾರದು.

ಬಾಲ್ಯವೆಂಬ ಉದ್ಯಾನದಲ್ಲಿ ಸುಂದರ ಹೂಗಳು ಅರಳಿ ಸುಗಂಧವನ್ನು ಸೂಸಬೇಕೇ ಹೊರತೂ ಜಾಲಿ, ಕಳ್ಳಿಯಂತಹ ಗಿಡ ಬೆಳೆದು ಮನಸ್ಸನ್ನು ಮುಳ್ಳಾಗಿಸಬಾರದು. ಇದನ್ನು ಹೇಗೆ ನಿರ್ಮಿಸಬೇಕೆಂಬ ಅರಿವು ಶಿಕ್ಷಕರಲ್ಲಿ ಇರಬೇಕು. ಏಕೆಂದರೆ ಶಿಕ್ಷಕರು ಇಲಾಖೆ ಹಾಗೂ ಮಕ್ಕಳ ನಡುವಿನ ಸೇತುವೆಯಾಗಿರುತ್ತಾರೆ. ಸರ್ಕಾರ ನೀಡುವ ಸವಲತ್ತು ಯಥಾವತ್ತಾಗಿ ಮಕ್ಕಳಿಗೆ ತಲುಪಿಸುವ ವಾಹಕರು–ಶಿಕ್ಷಕರು. ಹಾಗಾಗಿ ಎಲ್ಲಾ ವಿಷಯಗಳ ಸಾಧಕ–ಬಾಧಕಗಳ ಅರಿವು ಶಿಕ್ಷಕರಿಗೆ ಇರಬೇಕು.

ಪ್ರತಿ ಶಾಲೆಯಲ್ಲಿ ಶುದ್ಧ ಕುಡಿಯುವ ನೀರು, ನೈರ್ಮಲ್ಯ, ವೈಯಕ್ತಿಕ ಶುಚಿತ್ವ ಇವುಗಳಿಗೆ ಸಾಕಷ್ಟು ಮನ್ನಣೆ ನೀಡುವ ವಾತಾವರಣ ಸೃಷ್ಟಿಯಾಗಬೇಕು. "ನಾನು ಸ್ವಚ್ಛವಾಗಿದ್ದರೆ ಮಾತ್ರ ಸುಂದರವಾಗಿರುತ್ತೇನೆ" ಎಂಬ ಭಾವವನ್ನು ಮಕ್ಕಳಲ್ಲಿ ಬೆಳೆಸಬೇಕು. ನನ್ನ ವೈಯಕ್ತಿಕ ಶುಚಿತ್ವದೊಂದಿಗೆ ನನ್ನ ಪರಿಸರವೂ ಸ್ವಚ್ಛವಾಗಿ ಸುಂದರವಾಗಿ ಕಾಣಬೇಕೆಂಬ ಆಶಯ ಮಕ್ಕಳಲ್ಲಿ ಬರಬೇಕು. ಆ ಮೂಲಕ ಬದುಕನ್ನು ಸುಂದರವಾಗಿಸಿಕೊಳ್ಳುವ, ಅಚ್ಚುಕಟ್ಟಾಗಿಸಿಕೊಳ್ಳುವ ರೂಢಿಯನ್ನು ಬೆಳೆಸಬೇಕು. ಇಡೀ ದೇಶವೇ ಸ್ವಚ್ಛ ಹಾಗೂ ಸುಂದರವಾಗಲು ನಾವೂ ಕಾರಣಕರ್ತರಾಗಬಹುದು. ಈ ಹಿನ್ನೆಲೆಯನ್ನು ಹೊಂದಿದ ತರಬೇತಿಯು ಶಿಕ್ಷಕರ ಸಾಮರ್ಥ್ಯವನ್ನು ಹೆಚ್ಚಿಸುವ, ಅರಿವನ್ನು ಮೂಡಿಸುವ ಉತ್ತಮ ಕಲಿಕೆಯಾಗಿದೆ.

**ಮೇದಿನಿ ಕೆ.ಎಸ್.**
ಶಿಕ್ಷಕರು, ಸ.ಕಿ.ಪ್ರಾ.ಶಾಲೆ, ಕಲ್ಲುಕೊರ್ಚಿ, ಶಿವಮೊಗ್ಗ ತಾಲ್ಲೂಕು

# ಕ್ಲಸ್ಟರ್ ಸಾಧನೆ – ಸಿರಿಗೆರೆ ಸಿಂಗರಿಸಿದ ಸುಂದರ ಅನುಭವ

"ನೀನು ನಿನ್ನ ಸಾಧನೆಯ ಶಿಖರವನ್ನೇರಿದಾಗ ಅದಕ್ಕೆ ಮೆಟ್ಟಿಲಾದವರನ್ನು ಮರೆಯಬೇಡ" ಈ ಒಂದು ಅರ್ಥಪೂರ್ಣ ಮಾತಿನೊಂದಿಗೆ,

ಸಿ.ಆರ್.ಪಿ. ಯಾಗಿ ಸಿರಿಗೆರೆ ಕ್ಲಸ್ಟರ್ ಅನ್ನು ಆಯ್ಕೆ ಮಾಡಿಕೊಂಡು ಕಾರ್ಯ ಪ್ರವೃತ್ತಳಾದ ನನಗೆ, ಕ್ಲಸ್ಟರ್ ಕೇಂದ್ರದ ಬಗ್ಗೆ ಅಷ್ಟಾಗಿ ಆಸಕ್ತಿ ಇರಲಿಲ್ಲ. ಕೇವಲ ಶಾಲೆಗಳಿಗೆ ಭೇಟಿ ನೀಡುತ್ತಿದ್ದು, ಶಾಲೆಗಳಲ್ಲಿಯೇ ಹೆಚ್ಚು ಸಮಯ ಕಳೆಯಲು ಇಷ್ಟಪಡುತ್ತಿದೆ. ಕ್ಲಸ್ಟರ್ ಕೇಂದ್ರವು ಕೇವಲ ಮುಖ್ಯಶಿಕ್ಷಕರ ಸಭೆಗಷ್ಟೇ ಮೀಸಲಾಗಿತ್ತು. ಆದರೆ ಕ್ಲಸ್ಟರ್ ಕೇಂದ್ರಕ್ಕೆ ಭೇಟಿ ನೀಡಿದ ಅಧಿಕಾರಿಗಳೆಲ್ಲರೂ ಕ್ಲಸ್ಟರ್ ಕೇಂದ್ರವನ್ನು ಅಭಿವೃದ್ಧಿಗೊಳಿಸಲು ಸೂಚಿಸುತ್ತಿದ್ದರು. ಆದರೆ ನನಗೆ ಯಾವುದೇ ಅನುದಾನವಿಲ್ಲದೇ ಈ ಕೆಲಸ ಹೇಗೆ ಸಾಧ್ಯ ಎಂಬ ಕೊರಗು ಹತ್ತಿತು.

ಈ ಯೋಚನೆಯಲ್ಲಿಯೇ ಹೇಗಾದರೂ ಮಾಡಿ ಕ್ಲಸ್ಟರ್ ಕೇಂದ್ರವನ್ನು ಅಭಿವೃದ್ಧಿಗೊಳಿಸಬೇಕೆಂಬ ಹಠ ನನ್ನಲ್ಲಿ ಹುಟ್ಟಿಕೊಂಡಿತು. ಈ ಒಂದು ಕಾರ್ಯದಲ್ಲಿ ನನಗೆ ಬೆಂಗಾವಲಾಗಿ ನಿಂತವರು ಶಾಲೆಯ ಮುಖ್ಯ ಶಿಕ್ಷಕರು. ನನ್ನ ಕ್ಲಸ್ಟರ್‌ನ ಮುಖ್ಯ ಶಿಕ್ಷಕರಲ್ಲಿ ಒಂದು ವಿನಂತಿಯನ್ನು ಇಟ್ಟು, ಬಣ್ಣ ಮಾಡಿಸಲು ಬೇಕಾದ ಮೊತ್ತಕ್ಕೆ ಮೊದಲು ನಾನು ಒಂದಿಷ್ಟು ಹಣ ನೀಡುವುದಾಗಿ ನನ್ನೊಂದಿಗೆ ಈ ಕಾರ್ಯದಲ್ಲಿ ಮುಖ್ಯ ಶಿಕ್ಷಕರು ನೆರವಾಗಬೇಕು ಎಂದು ಕೇಳಿಕೊಂಡಾಗ, ಮೊದಲು ನನಗೆ ಸ್ಪಂದಿಸಿದ್ದು ಸರ್ಕಾರಿ ಪ್ರೌಢಶಾಲೆ ತಮ್ಮಡಿಹಳ್ಳಿಯ ಮುಖ್ಯ ಶಿಕ್ಷಕಿ ಪುಷ್ಪಾ ಮೇಡಂರವರು. ಕ್ಲಸ್ಟರ್‌ಗೆ ಹೊಸಬಳಾದರೂ, ನನ್ನ ಕಾರ್ಯ ಪ್ರವೃತ್ತಿಯ ಬಗ್ಗೆ ಒಂದಿಷ್ಟು ತಿಳಿಯದಿದ್ದರೂ ನನ್ನನ್ನೂ ನಂಬಿ ಧನ ಸಹಾಯ ಮಾಡುವ ಮೂಲಕ ತಮ್ಮಲ್ಲಿರುವ ಶೈಕ್ಷಣಿಕ ಒಲವನ್ನು ವ್ಯಕ್ತಪಡಿಸಿದರು. ಇವರೊಂದಿಗೆ ನನ್ನ ಕ್ಲಸ್ಟರ್ ಮುಖ್ಯ ಶಿಕ್ಷಕರಾದ ಪರಮೇಶ್ವರಪ್ಪ ಎ, ರವಿ ಎಸ್.ಟಿ. ಚಿನ್ನತಾಯಮ್ಮ, ಅಶ್ವಿನಿ ಎನ್.ಜಿ., ಶ್ರೀನಿವಾಸ ಟಿ, ಮಂಜುಳಾ, ನಾಗರತ್ನಮ್ಮ, ಮಂಜುಳ ಹೆಚ್.ಜಿ. ಹಾಗೂ ಗಿರೀಶ್ ನಾಯ್ಕ್ ಹಾಗೂ ಸಹಶಿಕ್ಷಕರಾದ ತಿಮ್ಮನಾಯಕ ಮತ್ತು ಸುಬ್ರಾಯ ಶಿಕ್ಷಕರೂ ಸಹ ತಮ್ಮಿಂದಾದ ಧನ ಸಹಾಯವನ್ನು ಮಾಡಿ ಈ ಒಂದು ಕಾರ್ಯಕ್ಕೆ ಸಹಕರಿಸಿ, ತಮ್ಮ ದೊಡ್ಡಗುಣವನ್ನು ಮೆರೆದರು.

ಇದರೊಂದಿಗೆ ಕ್ಲಸ್ಟರ್ ಕೇಂದ್ರದಲ್ಲಿರುವ ಶೌಚಾಲಯದ ಬಾಗಿಲು ಸಂಪೂರ್ಣ ಹಾಳಾಗಿದ್ದು, ಇದರ ರಿಪೇರಿಯನ್ನು ಮಾಡಿಕೊಟ್ಟು ತಮ್ಮ ಔದಾರ್ಯವನ್ನು ಮೆರೆದರು ಸುಮತಿ ಎಸ್. ಬಸ್ತಿ ಮೇಡಂ ಹಾಗೆಯೇ ರೇಖಾ .ಹೆಚ್. ಹುಳಿರುಪ್ಪಿ ಇವರು ಬಾಗಿಲಿಗೆ ತೋರಣ ಹಾಗೂ ಟೇಬಲ್ ಕ್ಲಾತ್ ನೀಡಿದರು, ಮೇದಿನಿಯವರು ಒಂದು ಗಡಿಯಾರವನ್ನು ಕೊಡುಗೆಯಾಗಿ ನೀಡಿದರು. ಬಣ್ಣ ಮಾಡಿಸುವ ಸಂದರ್ಭದಲ್ಲಿ ಕಿಟಕಿ ಬಾಗಿಲಿಗೆ ಬಣ್ಣ ಹಾಗೂ ಇನ್ನಿತರೇ ಚಿಕ್ಕ ಪುಟ್ಟ ಕಾರ್ಯಗಳಲ್ಲಿ ಸಹಾಯ ಮಾಡಿದವರು ನಮ್ಮ ಕ್ಲಸ್ಟರ್ ಶಿಕ್ಷಕರಾದ ಪ್ರಕಾಶ ಎಸ್. ಉಮೇಶ್‌ನಾಯ್ಕ್, ಅನಿಲ್ ಕುಮಾರ್, ಚಂದ್ರಪ್ಪ ಹಾಗೂ ಕೃಷ್ಣಮೂರ್ತಿರವರು.

ಇದೇ ಸಂದರ್ಭದಲ್ಲಿ ಸಿರಿಗೆರೆ ಗ್ರಾಮದ ನಿವಾಸಿಗಳಾದ ಶ್ರೀಮತಿ ಅನಿತಾ ಕಿಣಿ ಇವರು ಒಂದು ಪುಸ್ತಕ ರ್‍ಯಾಕ್ ಅನ್ನು ಕೊಡುಗೆಯಾಗಿ ನೀಡಿದರು. ಇದೆಲ್ಲಾ ಕೆಲಸಗಳು ಆದ ಮೇಲೆ, ಇನ್ನೊಂದು ಕೆಲಸದ ಬಾಕಿ ಇತ್ತು. ಅದೆಂದರೆ ಕ್ಲಸ್ಟರ್ ಕೇಂದ್ರಕ್ಕೆ ನಾಮಫಲಕ ಬರೆಯುವುದು. ಈ ಸಮಯದಲ್ಲಿ ನಮ್ಮ ಕ್ಲಸ್ಟರ್ ಅಲ್ಲದಿದ್ದರೂ ವಿಶ್ವಾಸದಿಂದ ಬಂದು ನಾಮಫಲಕ ಹಾಗೂ ಕೊಠಡಿಯ ಒಳಗೆ ಒಂದಿಷ್ಟು ಘೋಷಣೆಗಳನ್ನು ಬರೆದುಕೊಟ್ಟವರು ಸಹೋದರ ಮಿತ್ರರಾದ ಯತೀಶ್ ಹಾಗೂ ಪ್ರಕಾಶ್ ಬಿ.ಟಿ. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೇ ಸ್ನೇಹದಿಂದ ತಮ್ಮ ಅಮೂಲ್ಯವಾದ ಸಮಯವನ್ನು ನೀಡಿದ ಇವರೀರ್ವರಿಗೂ ಇಡೀ ಕ್ಲಸ್ಟರ್‌ನ ಶಿಕ್ಷಕರ ಪರವಾಗಿ ಹಸನ್ಮುಖದ ಧನ್ಯವಾದಗಳು.

ಈ ಎಲ್ಲಾ ಅನುಭವಗಳೊಂದಿಗೆ ಮತ್ತೊಂದು ವಿಶೇಷವಾದ ಮುಖ್ಯ ಆಕರ್ಷಣೆ, ಕಟ್ಟಡದ ಮುಂಭಾಗದಲ್ಲಿ ಕಂಗೊಳಿಸುವ ವರ್ಲಿ ಚಿತ್ತಾರದ ಸೊಬಗು ಕಟ್ಟಡಕ್ಕೆ ಬಣ್ಣವಾದ ತಕ್ಷಣ ಮುಂಭಾಗದ ಗೋಡೆಯಲ್ಲಿ ವರ್ಲಿ ಚಿತ್ತಾರ ಮೂಡಿಸಬೇಕು ಎಂಬುದು ನನ್ನ ಬಹುದಿನದ ಕನಸಾಗಿತ್ತು. ಇದಕ್ಕೆ ಮುಖ್ಯ ಕಾರಣ ನಮ್ಮ ಶಿವಮೊಗ್ಗ ಜಿಲ್ಲೆಯ ಹೆಮ್ಮೆಯ ಡಯಟ್, ನಮ್ಮ ಡಯಟ್‌ನ ಕಟ್ಟಡದ ಮುಂಭಾಗದಲ್ಲಿ ಈ ರೀತಿಯ ವರ್ಲಿಚಿತ್ರಗಳಿಂದ ಗೋಡೆಯನ್ನು ಅಲಂಕರಿಸಿದ್ದು, ತುಂಬಾ ಆಕರ್ಷಣೀಯವಾಗಿ, ಚಂದವಾಗಿ ಕಾಣುತ್ತಿತ್ತು. ಇದೇ ರೀತಿ ನಮ್ಮ ಕ್ಲಸ್ಟರ್ ಕೇಂದ್ರಕ್ಕೂ ಚಿತ್ರಗಳನ್ನು ಬರೆಸಬೇಕೆಂಬ ಆಲೋಚನೆ ಬಂದಿತ್ತು. ಈ ಉದ್ದೇಶವಾಗಿ ಸಂಬಂಧಪಟ್ಟ ಕಲಾ ಶಿಕ್ಷಕರನ್ನು ಕೇಳಿಕೊಂಡಾಗ, ಅವರು ಒಪ್ಪಿಕೊಂಡರು ಸಹ ಅವರ ಸಮಯದ ಅಭಾವದ ಕಾರಣ ನನ್ನ ಆಸೆ ಈಡೇರುವ ಮಾರ್ಗ ಕಾಣಲಿಲ್ಲ.

ಇಂಥ ಸಮಯದಲ್ಲಿ ನನಗೆ ಧೈರ್ಯ ನೀಡಿ ನಾವೇ ಮಾಡೋಣ ಎಂದು ನನ್ನ ಜೊತೆಗಿದ್ದು, ನಾವೇ ಆಶ್ಚರ್ಯ ಪಡುವಷ್ಟರ ಮಟ್ಟಿಗೆ ಅತ್ಯುತ್ತಮವಾಗಿ ಚಿತ್ತಾರ ಮೂಡಿ ಬರಲು ಶ್ರಮಿಸಿದವರು ನಮ್ಮ ಕ್ಲಸ್ಟರ್ ಶಶಿಕಲಾ ಸಿ.ಜಿ. ಮತ್ತು ಮೇದಿನಿ ಕೆ.ಎಸ್. ಶಿಕ್ಷಕರು. ಅಲ್ಲದೇ ಕಟ್ಟಡದ ಒಳಗೆ ಕ್ರಾಫ್ಟ್ ವರ್ಕ್‌ಗಳಿಗೆ ನೆರವಾಗಿದ್ದು ನಮ್ಮ ಕ್ಲಸ್ಟರ್‌ನ ಇತರೆ ಶಿಕ್ಷಕರಾದ ವತ್ಸಲಾ, ರೇಖಾ ಹುಳಿಕುಪ್ಪ ಹಾಗೂ ಸ್ವರ್ಣಲತಾ ಶಿಕ್ಷಕರು.

ಇವರೆಲ್ಲರ ಅಭೂತಪೂರ್ವ ಸಹಾಯದಿಂದ ಸಿರಿಗೆರೆ ಕ್ಲಸ್ಟರ್ ಕೇಂದ್ರವು ಸುಣ್ಣ, ಬಣ್ಣ, ವರ್ಲಿ ಚಿತ್ತಾರಗಳಿಂದ ಕಂಗೊಳಿಸಿ ನೋಡಲು ನವ ವಧುವಿನಂತೆ ತಯಾರಾಯಿತು. ಸಿಂಗಾರಗೊಂಡ ಕೇಂದ್ರವನ್ನು ದಿ. 30–03–2019 ಶನಿವಾರದಂದು, ಕ್ಲಸ್ಟರ್ ದಿನ ಎಂದು ಆಚರಿಸಿ ಹರ್ಷಗೊಂಡೆವು. ಮಾನ್ಯ ಶಿವಮೊಗ್ಗ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಲೋಕೇಶಪ್ಪ ಬಿ., ಡಯಟ್ ಉಪ ಪ್ರಾಂಶುಪಾಲರಾದ ಶ್ರೀ ವೀರಭದ್ರಪ್ಪ ಹಾಗೂ ಹಿರಿಯ ಉಪನ್ಯಾಸಕರಾದ ಹರಿಪ್ರಸಾದ್, ಟಿ.ಪಿ.ಓ ಗಿರಿಜಮ್ಮ ಈ ಎಲ್ಲಾ ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಪ್ರೀತಿಯಿಂದ ನೆರವೇರಿಸಿಕೊಟ್ಟರು.

ಈ ಕಾರ್ಯಕ್ರಮಕ್ಕೆ ಭೋಜನ ವ್ಯವಸ್ಥೆಯನ್ನು ನಮ್ಮ ಕ್ಲಸ್ಟರ್‌ನ ವೀಣಾ ಹಾಗೂ ನೇತ್ರಾವತಿ ಶಿಕ್ಷಕರು ಮಾಡಿದ್ದರು. ಒಟ್ಟಿನಲ್ಲಿ ಕಾರ್ಯಕ್ರಮ ಅತ್ಯುತ್ತಮವಾಗಿ ಮೂಡಿ ಬಂದಿತ್ತು. ಬಹುತೇಕ ಕ್ಲಸ್ಟರ್‌ನ ಎಲ್ಲಾ ಶಿಕ್ಷಕರು ಹಾಗೂ ಸಿ.ಆರ್.ಪಿ., ಬಿ.ಆರ್.ಪಿ., ಬಿ.ಐ.ಇ.ಆರ್.ಟಿ. ಮಿತ್ರರು ಕೂಡ ನಮ್ಮೊಡನೆ ಒಂದಾಗಿದ್ದು, ಮತ್ತೊಂದು ಖುಷಿಯ ಗರಿಯಾಗಿತ್ತು.

ಈ ನನ್ನ ಲೇಖನ ಓದುತ್ತಿರುವ ನನ್ನೆಲ್ಲಾ ಆತ್ಮೀಯರಲ್ಲಿ ನಾನು ಹಂಚಿಕೊಳ್ಳಲು ಬಯಸುವುದೇನೆಂದರೆ "ಒಂದು ಆರೋಗ್ಯಕರ ಹಠ" ಎಂಥ ಕೆಲಸವನ್ನಾದರೂ ಮಾಡಿಸಬಲ್ಲದು ಎಂಬುದಕ್ಕೆ "ನನ್ನ ಪ್ರೀತಿಯ ಸಿರಿಗೆರೆ ಕ್ಲಸ್ಟರ್ ಕೇಂದ್ರ" ಒಂದು ಅತ್ಯುತ್ತಮ ಉದಾಹರಣೆ. ಈ ಒಂದು ಸುಂದರ ಅನುಭವವನ್ನು ವ್ಯಕ್ತಪಡಿಸಲು ಹಾಗೂ ನನಗೆ ಸ್ಪಂದಿಸಿ, ನನ್ನ ಬೆಂಗಾವಲಾಗಿ ನಿಂತ ಪ್ರತಿಯೊಬ್ಬ ಶಿಕ್ಷಕರನ್ನು ನೆನೆದು, ಅಕ್ಷರಗಳ ಮೂಲಕ ಕೃತಜ್ಞತೆ ತಿಳಿಸಲು ಅವಕಾಶ ಮಾಡಿಕೊಟ್ಟ ನಮ್ಮ ಪೂಜ್ಯ ಡಯಟ್‌ನ ಪ್ರಾಂಶುಪಾಲರು, ಹಿರಿಯ ಉಪನ್ಯಾಸಕರು, ಉಪನ್ಯಾಸಕರೆಲ್ಲರಿಗೂ ಅನಂತ ಧನ್ಯವಾದಗಳನ್ನು ಅರ್ಪಿಸಲು ತುಂಬು ಮನದಿಂದ ಹರ್ಷಿಸುತ್ತೇನೆ.




**ನಾಗವೇಣಿ ಜಿ. ಸಿ.ಆರ್.ಪಿ.**
ಸಿರಿಗೆರೆ ಕ್ಲಸ್ಟರ್, ಶಿವಮೊಗ್ಗ.

# 'ನಾಲೂರಿಗೆ ನೂಲಾದ ಜಯಗಾಥೆ'

**(2019–20ನೇ ಸಾಲಿನ ರಾಜ್ಯ ಪ್ರಶಸ್ತಿ ವಿಜೇತ ಶಿಕ್ಷಕಿ)**



ಆಗುಂಬೆಯಂತಹ ಮಳೆಯಾಗುವ ನೆಲದಲ್ಲಿ, ದಟ್ಟ ಕಾಡಿನ ನಡುವೆ, ಒಂಟಿ ಮನೆಗಳ ಜನವಸತಿ ಪ್ರದೇಶಗಳೇ ಹೆಚ್ಚು. ಇಂತಹ ಜಾಗದಲ್ಲಿ ಮಕ್ಕಳು, ಶಾಲೆ, ಕಲಿಕೆ ಎಂದು ಪ್ರಯತ್ನಿಸುತ್ತಾ ಹದಿನೈದು ಲಕ್ಷ ರೂಪಾಯಿಯಷ್ಟು ಮೊತ್ತದ ವಸ್ತು, ಕಟ್ಟಡ ನಿರ್ಮಾಣ, ದಾನ ಸಂಗ್ರಹಿಸಿ ಶಾಲಾಬಿವೃದ್ಧಿಗೆ ಕಾರಣರಾದವರು ಶ್ರೀಮತಿ ಎಸ್. ಜಯಂತಿ. ಇವರು ಪಾಠಗಳನ್ನು ಕಲಿಸುವ ಜೊತೆಗೆ, ಹೆಚ್ಚುವರಿ ಅವಧಿಯಲ್ಲಿ ಮಕ್ಕಳಿಗೆ ಎನ್.ಸಿ.ಇ.ಆರ್.ಟಿ. ಪಠ್ಯವಸ್ತುವಿನ ವಿಷಯಗಳನ್ನೂ ಅರ್ಥೈಸಿಕೊಂಡು ಹೆಚ್ಚುವರಿಯಾಗಿ ಕಲಿಸುತ್ತಿದ್ದಾರೆ. ಇವರು ಎಂ.ಎ., ಬಿ.ಇಡಿ., ಶಿಕ್ಷಣ ಪಡೆದಿದ್ದು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ನಾಲೂರು, ಇಲ್ಲಿ 22 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ.

"ಹೆಣ್ಣು, ಸಮಾಜದ ಕಣ್ಣು" ಎಂಬುದು ಶ್ರೀಮತಿ ಜಯಂತಿಯವರ ವಿಷಯದಲ್ಲಿ ಅನುಭವವೇದ್ಯ. ಇವರು ಸಮರ್ಥ ಸಮಾಜವನ್ನು ರೂಪಿಸಲು ಇಲಾಖೆಯ ವಿವಿಧ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳಿಗೆ ಸಮರ್ಪಕವಾಗಿ ತಲುಪಿಸಿ, ಎಸ್.ಡಿ.ಎಂ.ಸಿ ಹಾಗೂ ಸಮುದಾಯದ ಸಹಭಾಗಿತ್ವದಲ್ಲಿ ಶಾಲೆಯ ಶೈಕ್ಷಣಿಕ ಹಾಗೂ ಭೌತಿಕ ಅಭಿವೃದ್ಧಿಯನ್ನು ಅಭೂತಪೂರ್ವವಾಗಿ ಸಾಧಿಸಿದ್ದಾರೆ. ಶಿಕ್ಷಕರಾಗಿ ಇವರು ನಿರಂತರ ವಿದ್ಯಾರ್ಥಿಯಾಗಿದ್ದಾರೆ. ಸದಾ ಕಲಿಯುವ ಇವರು ತಮ್ಮ ಸೇವಾವಧಿಯಲ್ಲಿ ಉನ್ನತ ಶಿಕ್ಷಣ ಪಡೆಯುತ್ತಾ ಅದನ್ನೆಲ್ಲಾ ವಿದ್ಯಾರ್ಥಿಗಳ ಗುಣಾತ್ಮಕ ಶಿಕ್ಷಣಕ್ಕೆ ಧಾರೆಯೆರೆಯುತ್ತಿದ್ದಾರೆ.

ಬಾಲ್ಯವಿವಾಹ, ಬಾಲಕಾರ್ಮಿಕ ಪದ್ಧತಿ, ಮಧ್ಯಪಾನದಿಂದಾಗುವ ಹಾನಿ, ಇವುಗಳ ಕುರಿತು. ಜನಜಾಗೃತಿ ಮೂಡಿಸಲು ಜಾಥಾ ಮತ್ತು ಬೀದಿನಾಟಕ ಏರ್ಪಡಿಸಿರುತ್ತಾರೆ, ತನ್ಮೂಲಕ ಸಾಮಾಜಿಕ ಪ್ರಜ್ಞೆ ಮೂಡಿಸಿ, ವಿದ್ಯಾರ್ಥಿಗಳ ಸರ್ವತೋಮುಖ ವಿಕಾಸಕ್ಕೆ ಕಾರಣಿಕರ್ತರಾಗಿದ್ದಾರೆ.

**ಕಲಿಸುವಿಕೆಯ ಪ್ರಯತ್ನಗಳು**

ಬದಲಾದ ಪಠ್ಯಕ್ರಮಕ್ಕನುಗುಣವಾಗಿ, ಕಲಿಸುವ ಶೈಲಿಯನ್ನು ಆಳವಡಿಸಿಕೊಂಡು ಪರಿಣಾಮಕಾರಿ ಮತ್ತು ಅರ್ಥಪೂರ್ಣ ಕಲಿಕೆಯನ್ನು ಉಂಟುಮಾಡುತ್ತಿದ್ದಾರೆ. ನಿತ್ಯ ರಾಜ್ಯದ ಪಾಠಗಳನ್ನು ಕಲಿಸುವ ಜೊತೆಗೆ ಹೆಚ್ಚುವರಿ ಅವಧಿಯಲ್ಲಿ ಮಕ್ಕಳಿಗೆ ಎನ್.ಸಿ.ಇ.ಆರ್.ಟಿ ಪಠ್ಯವಸ್ತುವಿನ ವಿಷಯಗಳನ್ನೂ ಅರ್ಥೈಸಿಕೊಂಡು ಹೆಚ್ಚುವರಿಯಾಗಿ ಕಲಿಸುತ್ತಾರೆ. ವಿದ್ಯಾರ್ಥಿಗಳ ಬದುಕಿನಲ್ಲಿ ಎದುರಾಗುವ ಭವಿಷ್ಯದ ಸವಾಲುಗಳನ್ನು ಸುಲಭವಾಗಿ ಪರಿಹರಿಸಲು ಮಾರ್ಗೋಪಾಯಗಳನ್ನು ಮಕ್ಕಳಿಗೆ ಬಿತ್ತರಿಸುವ, ಇವರ ಕ್ರಮ ಶ್ಲಾಘನೀಯವಾದುದು. ಅಲ್ಲದೇ ಸಂಪನ್ಮೂಲ ಶಿಕ್ಷಕಿಯಾಗಿ ಇವರು ಶಿಕ್ಷಕರಿಗೆ ವೃತ್ತಿಪರ ತರಬೇತಿಗಳನ್ನು ನೀಡುತ್ತಿದ್ದಾರೆ.



**ಇವರು ಕಲಿಕೆಗೆ ಅನುಕೂಲಿಸುವ ಕೆಲವು ಪ್ರಯತ್ನಗಳೆಂದರೆ.......**

* ತಂತ್ರಜ್ಞಾನಾಧರಿತ ಚಟುವಟಿಕೆಯುಕ್ತ ಕಲಿಸುವಿಕೆ.
* ಶಾಲೆಯಲ್ಲಿ ಆಕರ್ಷಕವಾದ ಕಲಿಕಾ ವಾತಾವರಣ ನಿರ್ಮಾಣ.
* ಐತಿಹಾಸಿಕ ಕ್ಷೇತ್ರ ಭೇಟಿ, ವಿಜ್ಞಾನ ಮೇಳ, ಮಕ್ಕಳ ಸಂತೆಯಂತಹ ವಿನೂತನ ಕಾರ್ಯಕ್ರಮಗಳ ಆಯೋಜನೆ.
* ಲೇಖಕಿಯರೊಂದಿಗೆ ಸಂವಾದ, ಬೀದಿ ನಾಟಕಗಳ ಆಯೋಜನೆ, ಯೋಗಾಭ್ಯಾಸ, ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಆಯೋಜನೆ ಜೊತೆಗೆ ಮಕ್ಕಳು ಗೈರು ಹಾಜರಾಗದಂತೆ ಮಾಡಲು ಮಕ್ಕಳ ಮನೆ ಭೇಟಿ ಕಾರ್ಯಕ್ರಮ.
* ತೆರೆದ ವಾಚನಾಲಯದ ಮೂಲಕ ಪುಸ್ತಕಗಳನ್ನು ವಿದ್ಯಾರ್ಥಿಗಳು ತಮ್ಮ ಬಿಡುವಿನ ವೇಳೆಯಲ್ಲಿ ದಿನ ಪತ್ರಿಕೆ, ವಾರಪತ್ರಿಕೆ ಮತ್ತು ಗ್ರಂಥಾಲಯದ ಪುಸ್ತಕಗಳನ್ನು ಅಭ್ಯಸಿಸಲು ಅನುಕೂಲಿಸಿದ್ದಾರೆ.

**ಸಾಂಸ್ಕೃತಿಕ ರಾಯಬಾರಿಯಾಗಿ**

* ಯಕ್ಷಗಾನ, ಕೋಲಾಟ, ವೀರಗಾಸೆ, ಸುಗ್ಗಿ ಕುಣಿತದಂತಹ, ಜನಪದ ಕಲೆಗಳನ್ನು ಮಕ್ಕಳಿಗೆ ಕಲಿಸಿ, ಅವರಲ್ಲಿ ಗ್ರಾಮೀಣ ಸಂಸ್ಕೃತಿಯ ಭಾವನೆಯನ್ನು ಮೂಡಿಸಿ ಜನಪದಕಲೆಯ ಅಭಿರುಚಿಯನ್ನು ಮೂಡಿಸಿದ್ದಾರೆ. ವಿದ್ಯಾರ್ಥಿಗಳು ಈ ಕಲೆಗಳನ್ನು ಪ್ರದರ್ಶಿಸಿ ಜಿಲ್ಲಾ ಹಂತದಲ್ಲಿ ಪ್ರಶಸ್ತಿಗಳನ್ನು ಪಡೆದಿದ್ದಾರೆ.
* ಕನ್ನಡ ಸಾಹಿತ್ಯ ಪರಿಷತ್ತಿನ ಅಡಿಯಲ್ಲಿ ಕಾರ್ಯನಿರ್ವಹಿಸುವ ಜಿಲ್ಲಾ ಲೇಖಕಿಯರ ಸಂಘದ ಸದಸ್ಯೆಯಾಗಿದ್ದು ಇದರ ಸಹಯೋಗದೊಂದಿಗೆ ಇವರು ತಮ್ಮ ಶಾಲೆಯಲ್ಲಿ 'ಮಕ್ಕಳ ಕವಿಗೋಷ್ಠಿ' ಏರ್ಪಡಿಸುವ ಮೂಲಕ ಸ್ವರಚಿತ ಕವನಗಳ ರಚನೆ ಮತ್ತು ವಾಚನಕ್ಕೆ ಅವಕಾಶ ನೀಡಿ, ಮಕ್ಕಳಲ್ಲಿ ಸಾಹಿತ್ಯಭಿರುಚಿ ಬೆಳೆಸುತ್ತಿದ್ದಾರೆ ಹಾಗೂ ಇವರು ಮಕ್ಕಳಿಗೆ ಕಲೆ, ಸಾಹಿತ್ಯ, ನೃತ್ಯ, ನಾಟಕ ಮುಂತಾದ ವಿವಿಧ ಪ್ರಕಾರಗಳ ಆಸಕ್ತಿಯನ್ನು ಮೂಡಿಸುತ್ತಿದ್ದಾರೆ.
* ಶಾಲಾ ಹಂತದಲ್ಲಿ ಅಷ್ಟೇ ಅಲ್ಲದೆ, ಶಾಲಾ ಸಮಯದ ನಂತರ ಅವರ ನೆರೆಹೊರೆಗಳಲ್ಲಿ ಜರುಗುವ ಹಲವು ಕಾರ್ಯಕ್ರಮಗಳ ಆಯೋಜಕರಾಗಿ ಹಾಗೂ ನಿರೂಪಕಿಯಾಗಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಯಾಗಲು ಸಹಕಾರ ನೀಡುತ್ತಿದ್ದಾರೆ.
* ಇಂಗ್ಲೀಷ್ ಭಾಷಾ ಕಲಿಕೋಪಕರಣಗಳನ್ನು ತಯಾರಿಸಿ 2017-18ರ ಸಾಲಿನಲ್ಲಿ ರಾಜ್ಯಹಂತದ ಕಾರ್ಯಗಾರದಲ್ಲಿ ಭಾಗವಹಿಸಿರುತ್ತಾರೆ.

**CWSN ಮಕ್ಕಳ ಮತ್ತು ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಮಾಡಿದ ಪ್ರಯತ್ನಗಳು**

ವಿಶೇಷ ಅಗತ್ಯತೆಯುಳ್ಳ ಮಕ್ಕಳ ಶಿಕ್ಷಣ, ಅವರ ಸವಾಲುಗಳು ಮತ್ತು ಸಾಧ್ಯತೆಗಳನ್ನು ಸಾಧ್ಯವಾಗಿಸಲು ತಾಲ್ಲೂಕಿನ 'ವಿಶೇಷ ಶಿಕ್ಷಣದ ಸಮನ್ವಯಾಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ, ಅಂತಹ ಮಕ್ಕಳಿಗೆ ಇಲಾಖೆಯಿಂದ ದೊರಕುವ ಎಲ್ಲಾ ಸೌಲಭ್ಯಗಳನ್ನು ಒದಗಿಸಿಕೊಟ್ಟು, ಪ್ರತಿ ತಿಂಗಳು ನಿಯಮಿತವಾಗಿ ಮಾಸಾಶನ ಸಿಗುವಂತೆ ಮಾಡಿದ್ದಾರೆ. ಅಂತಹ ಮಕ್ಕಳಿಗೆ 'ಆತ್ಮ ವಿಶ್ವಾಸ'ವನ್ನು ಮೂಡಿಸುವ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದಾರೆ. ಹೆಣ್ಣು ಮಕ್ಕಳ ವೈಯಕ್ತಿಕ ಸ್ವಚ್ಛತೆ ಮತ್ತು ಸುರಕ್ಷತೆಗೆ ಸಂಬಂಧಿಸಿದಂತೆ, ಸಂಬಂಧಿಸಿದವರಿಂದ ಸೂಕ್ತ ಮಾಹಿತಿ ನೀಡಲು ಶ್ರಮಿಸುತ್ತಿದ್ದಾರೆ. ಪೋಷಕರ ಸಭೆಯಲ್ಲಿ 'ಹೆಣ್ಣು' ಮಕ್ಕಳ ಶಿಕ್ಷಣದ ಮಹತ್ವದ ಬಗ್ಗೆ ಜಾಗೃತಿ ಮೂಡಿಸಿ, ಹೆಣ್ಣು ಭ್ರೂಣಹತ್ಯೆಯಿಂದಾಗುವ ಅಪಾಯಗಳ ಕುರಿತು ಮಾಹಿತಿಯನ್ನು ನೀಡಿ ಅರಿವು ಮೂಡಿಸಿದ್ದಾರೆ.

**ಸಮುದಾಯದ ಶಾಲೆಗಾಗಿ :**

ಈ ಶಿಕ್ಷಕರು ಸಮುದಾಯದ ಸಹಕಾರದಿಂದ ಶಾಲಾ ಭೌತಿಕ ಸೌಲಭ್ಯಗಳನ್ನು ಉತ್ತಮಪಡಿಸಿ ಹಲವು ಅದ್ಭುತಗಳನ್ನು ಸಾಧಿಸಿರುತ್ತಾರೆ. ಶಾಲಾ ಮುಂಭಾಗದಲ್ಲಿ ಆಕರ್ಷಕ ಉದ್ಯಾನವನ ನಿರ್ಮಾಣ, ರಾಷ್ಟ್ರೀಯ ಲಾಂಛನವುಳ್ಳ ಸುಂದರ ಧ್ವಜಸ್ತಂಭ, ಪುಟ್ಟ ನೀರಿನ ಕೊಳ, ಕೊಕ್ಕರೆ, ಕಮಲದ ಕೊಳದೊಳಗೆ ಕುಳಿತಿರುವ ಶಾರದಾದೇವಿಯ ವಿಗ್ರಹ, ಶಾಲೆಗೆ ಪ್ರತಿಯೊಬ್ಬರನ್ನು ಕೈ ಬೀಸಿ ಕರೆಯುವಂತಿರುವ ಆಕರ್ಷಕ ಮುಖಮಂಟಪ ಮತ್ತು ಸ್ವಾಗತ ಕಮಾನು, ಶಾಲಾ ಕೊಠಡಿಗಳ ಎದುರಿಗೆ ಇಂಟರ್‌ಲಾಕ್ ಅಳವಡಿಕೆ, ಶಾಲಾ ಉದ್ಯಾನವನದಲ್ಲಿ ಕ್ರೀಡೋಪಕರಣಗಳ ಅಳವಡಿಕೆ, ಪ್ರತಿ ತರಗತಿ ಕೊಠಡಿಗಳಿಗೆ ವೆಟ್ರಿಫೈಡ್ ನೆಲಹಾಸು, ಮಕ್ಕಳಿಗೆ ಶುದ್ಧಕುಡಿಯುವ ನೀರಿನ ಘಟಕ, ಕೈತೊಳೆಯುವ ಆಕರ್ಷಕ ತೊಟ್ಟಿ, ಮಕ್ಕಳಿಗೆ ಕೋಟ್ ಹೊಂದಿರುವ ಸಮವಸ್ತ್ರ, ವೃತ್ತಾಕಾರದ ತೆರೆದ ವಾಚನಾಲಯ (ಪ್ಯಾರಾಬೋಲ), ವಿದ್ಯಾರ್ಥಿಗಳಿಗೆ ಉಚಿತ ನೋಟ್ ಪುಸ್ತಕ, ಲೇಖನ ಸಾಮಗ್ರಿ, ಬ್ಯಾಗ್ ಮತ್ತು ರೈನ್ ಕೋಟ್‌ಗಳು ಹೀಗೆ ದಾನದಿಂದ ಪಡೆದ ಸಾಮಾಗ್ರಿ, ಶಾಲಾ ಸಂರಚನೆಗಳು ಅಗಣಿತ.

ಇದಲ್ಲದೆ ದಾನಿಗಳ ನೆರವಿನಿಂದ ಕಂಪ್ಯೂಟರ್, ಪ್ರೊಜೆಕ್ಟರ್, ಪ್ರಿಂಟರ್ ಮತ್ತು ಯು.ಪಿ.ಎಸ್ ಪಡೆದು ತಂತ್ರಜ್ಞಾನಾಧಾರಿತ ಕಲಿಕಾ ಪ್ರಕ್ರಿಯೆಯನ್ನು ಅಳವಡಿಸಿದ್ದಾರೆ. ಈ ಬಗ್ಗೆ ಶಿಕ್ಷಕಿಗೆ ಸಾಕಷ್ಟು ಹೆಮ್ಮೆಯಿದೆ. ಮಲೆನಾಡಿನ ಮೂಲೆಯಲ್ಲಿ ಮಕ್ಕಳಿಗೆ ಗಣಕ ಮತ್ತು ಸಹಾಯ ತರಗತಿಗಳು ಲಭ್ಯವಾಗುವುದು ಹೆಮ್ಮೆಯ ವಿಷಯವೇ ಆಗಿದೆ. ದಾನದಿಂದ ಎಲ್ಲಾ ಮಕ್ಕಳಿಗೂ ಸಾಕಾಗುವಷ್ಟು ಪೀಠೋಪಕರಣಗಳ ವ್ಯವಸ್ಥೆ ಮಾಡಿದ್ದಾರೆ. ಆಗುಂಬೆ ಅರಣ್ಯದ ಅತೀ ಪುಟ್ಟ ಊರಿನಲ್ಲಿ, ಇಲಾಖೆಯ ಹೊರತಾಗಿ ಸ್ವತ: ನಿರ್ಮಾಣ, ವಸ್ತು ಮತ್ತು ಆರ್ಥಿಕ ರೂಪದ ಒಟ್ಟು ದಾನದ ಮೊತ್ತ ಹದಿನೈದು ಲಕ್ಷ ದಾಟುತ್ತದೆ.

ಇವರ ಬದ್ಧತೆಗೆ 2019–20ನೇ ಸಾಲಿನಲ್ಲಿ **ರಾಜ್ಯ ಪ್ರಶಸ್ತಿ** ಸಂದಿದ್ದು ಇಲಾಖೆ ಇವರನ್ನು ಅಭಿನಂದಿಸುತ್ತದೆ. ಅಲ್ಲದೆ ಇವರ ಈ ಪ್ರಯತ್ನಕ್ಕೆ ಪೂರಕವಾಗಿ ಜೀ (zee) ಕನ್ನಡ ಚಾನಲ್‌ನವರು ಸಹ ಶಿಕ್ಷಕಿಯನ್ನು ಮಕ್ಕಳೊಂದಿಗೆ ಕರೆಸಿ ಅಭಿನಂದಿಸಿದ್ದಾರೆ.




**ಡಾ. ಹರಿಪ್ರಸಾದ್ ಜಿ.ವಿ.**
ಹಿರಿಯ ಉಪನ್ಯಾಸಕರು, ಡಯಟ್, ಶಿವಮೊಗ್ಗ



ಸ.ಕಿ.ಪ್ರಾ.ಶಾಲೆ, ತುದಿನೀರು, ಸೊರಬ ತಾ॥



ಸ.ಕಿ.ಪ್ರಾ.ಶಾಲೆ, ಕಿಳೇರಿಮೂಡ್ಲಿ, ಹೊಸನಗರ ತಾ॥



ಸ.ಹಿ.ಪ್ರಾ.ಶಾಲೆ, ನಿಂಬೆಗೊಂದಿ, ಭದ್ರಾವತಿ ತಾ॥









ಸ.ಹಿ.ಪ್ರಾ.ಶಾಲೆ, ತೇವರಚಟ್ನಹಳ್ಳಿ, ಶಿವಮೊಗ್ಗ ತಾ॥

# ಪ್ರಗತಿಯತ್ತ ಸಾಗುತ್ತಿರುವ ಶಾಲೆಗಳು



ಸರ್ಕಾರಿ ಶಾಸಕರ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಸಾಗರ



ಶ್ರೀ ಅಘೋರೇಶ್ವರ ದೇವಸ್ಥಾನ, ಇಕ್ಕೇರಿ



ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನ, ಮೃಗವಧೆ



ಶ್ರೀ ಲಕ್ಷ್ಮಿನರಸಿಂಹಸ್ವಾಮಿ ದೇವಸ್ಥಾನ, ಭದ್ರಾವತಿ



ಸೆಕ್ರೇಡ್ ಹಾರ್ಟ್ ಪ್ರಧಾನಾಲಯ, ಶಿವಮೊಗ್ಗ




ಮುದ್ರಣ : ಮಲ್ನಾಡ್, ಶಿವಮೊಗ್ಗ. 94497 95464